ಕನ್ಯಾಕುಮಾರಿ ಗ್ರಂಥಮಾಲೆ
ಕುಸುಮ—೨

ಶರಣ ಗೀತೆ ಮತ್ತು ಬೊಮ್ಮ ಶತಕ

ಗ್ರಂಥ ರಚನಾಕಾರರು :
ಗಿವರ್ಯ ಶ್ರೀ ಕನ್ಯಾಕುಮಾರಿ ಸ್ವಾಮಿ,
(ಮೂರ್ಖದಾಸ)



ಪ್ರಕಾಶಕರು :
ಕನ್ಯಾಕುಮಾರಿ ಯೋಗ ವಿದ್ಯಾಪೀಠ
ಬಸವೇಶ್ವರ ನಗರ, ಬೆಂಗಳೂರು.

Kanyakumari Swamy
Sharana Geethe mattu
Bomma shataka.

ಕನ್ಯಾಕುಮಾರಿ ಗ್ರಂಥಮಾಲೆ

ಕುಸಮ—೨

ಶರಣ ಗೀತೆ ಮತ್ತು ಬೊಮ್ಮ ಶತಕ

ಗ್ರಂಥ ರಚನಾಕಾರರು :

ಯೋಗಿವರ್ಯ ಶ್ರೀ ಕನ್ಯಾಕುಮಾರಿ ಸ್ವಾಮಿ,

(ಮೂರ್ಖದಾಸ)



ಪ್ರಕಾಶಕರು :

ಕನ್ಯಾಕುಮಾರಿ ಯೋಗ ವಿದ್ಯಾಪೀಠ

ಬಸವೇಶ್ವರ ನಗರ, ಬೆಂಗಳೂರು.

SHARANA GEETHE Mattu BOMMA SHATAKA
by Yogivarya Sri Kanyakumari Swamy (Fool Swamy)
Published by President Kanyakumari Yoga Vidya peetha No. 170, 7th D. Main, III Block, IV Stage Basaveshwara Nagara, Bangalore-560079, Karnataka.

1990 April

Price Rs. 12-00

ಪ್ರಥಮ ಮುದ್ರಣ : 1000 ಪ್ರತಿಗಳು

ಆರ್ಥಿಕನೆರವು :

ಜಂಗಮವಾಡಿಮಠ, ವಾರಣಾಸಿ

ಬೆಲೆ : ೧೨-೦೦ ರೂಪಾಯಿಗಳು

ಮುದ್ರಕರು :
ಶ್ರೀ ಪಂಚಾಕ್ಷರಿ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸಮರ್ಪಣೆ



ಶ್ರೀ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು

ಲಿಂ॥ ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ

ಪವಿತ್ರ ಅಡಿದಾವರೆಗಳಲ್ಲಿ ಈ ವಚನ ಗ್ರಂಥ ಕುಸುಮ

ಸಮರ್ಪಣೆ







ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನಾಧೀಶ್ವರ
ಕಾವ್ಯ, ಸರ್ವದರ್ಶನ ತೀರ್ಥ, ವೇದಾಚಾರ್ಯ, ವಿದ್ಯಾವಾರಿಧಿ,
ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರಶಿವಾಚಾರ್ಯಮಹಾಸ್ವಾಮಿಗಳವರು
ಜಂಗಮವಾಡಿ ಮಠ, ವಾರಣಾಸಿ ಇವರ

ಶುಭಾಶೀರ್ವಾದ ಸಂದೇಶ

ಯೋಗಾಚಾರ್ಯರಾದ ಶ್ರೀ ಕನ್ಯಾಕುಮಾರಿ ಸ್ವಾಮೀಜಿಯವರು ಬರೆದ 'ಶರಣ ಗೀತೆ' ಎಂಬ ಶೀರ್ಷಿಕೆಯ ವಚನ ಸಂಗ್ರಹವನ್ನು ಆಮೂಲಾಗ್ರವಾಗಿ ಅವಲೋಕಿಸಿ ಮಹದಾನಂದವಾಯಿತು. ಶ್ರೀ ಸ್ವಾಮೀಜಿಯವರು ರಾಜಯೋಗ ನಿಷ್ಣಾತರಷ್ಟೇ ಅಲ್ಲ ಶಿವಯೋಗ ತಜ್ಞರೂ ಆಗಿದ್ದರು ಅಂತೆಯೇ ಅವರು ಈ ಗ್ರಂಥದಲ್ಲಿ ವೀರಶೈವ ದಾರ್ಶನಿಕ ತತ್ತ್ವಗಳನ್ನು ಹಾಗೂ ಶಿವಯೋಗ ಸಾಧನಾ ಪದ್ಧತಿಯನ್ನೂ ಬಹು ಸುಂದರವಾಗಿ ವರ್ಣಿಸಿದ್ದಾರೆ.

ವೀರಶೈವ ಷಟ್‌ಸ್ಥಲ ಸಿದ್ಧಾಂತದಲ್ಲಿ ಶರಣಸ್ಥಲವು ಬಹಳ ಮಹತ್ವ ಪೂರ್ಣವಾದದ್ದು. ಈ ಸ್ಥಲದ ಸಾಧಕನು ತನ್ನ ಬಹುಪಾಲು ಅಂಗಗುಣ ಗಳನ್ನು ಕಳೆದುಕೊಂಡು ಲಿಂಗಗುಣಗಳನ್ನು ಅಳವಡಿಸಿಕೊಂಡಿರುತ್ತಾನೆ. ತನ್ನ ಸಾಧನೆಯ ಬಲದಿಂದ ಶಿವಾನಂದವನ್ನು ಅನುಭವಿಸುತ್ತಿರುವ ಈತನು ಆ ಸಂದೇಶವನ್ನು ಜಗತ್ತಿನ ಸಾಮಾನ್ಯ ಜನರಿಗೆ ನೀಡಿ ಅವರನ್ನು ತಾ ನಡೆದ ಮಾರ್ಗದಲ್ಲಿ ಪ್ರವೃತ್ತಿಸುವಂತೆ ಪ್ರೇರೇಪಿಸುತ್ತಾನೆ. ಅಂತೆಯೇ ಲೋಕೋ ದ್ಧಾರದಲ್ಲಿ ಈತನ ಪಾತ್ರವು ಪ್ರಮುಖವಾದುದು.

ಶ್ರೀ ಸ್ವಾಮೀಜಿಯವರು ವೀರಶೈವ ಸಿದ್ಧಾಂತದ ಶಿವಾದಿ ಭೂಮ್ಯಾಂತ ಮುವತ್ತಾರು ತತ್ತ್ವಗಳನ್ನು ಸೃಷ್ಟಿಕ್ರಮದಲ್ಲಿ ಬಹು ಸರಳವಾಗಿ ಚಿತ್ರಿಸಿದ್ದಾರೆ. ಈ ಪ್ರಪಂಚ ಸೃಷ್ಟಿಯ ಪೂರ್ವದಲ್ಲಿ 'ಮಯೂರಾಂಡರಸ್ಯ ನ್ಯಾಯದಂತೆ ಶಿವನ ಶಕ್ತಿಯಲ್ಲಿ ಅಡಗಿತ್ತೆಂಬ ದಾರ್ಶನಿಕ ಸಿದ್ಧಾಂತವನ್ನು

ನವಿಲಿನಾ ಮೊಟ್ಟೆಯಲಿ ಒಂದೇರೂಪದ ರಸದಿ
ನವಿಲಿನಾ ಚೆಲುರೂಪು ಕಣ್ ಬಣ್ಣ ವೈಚಿತ್ರ್ಯ
ಶಕ್ತಿಯಿಂದಿರುವುದು ಶುದ್ಧ ವಿದ್ಯಾತತ್ತ್ವ

ಈ ಉಪರೋಕ್ತ ಪದ್ಯದಲ್ಲಿ ಸುಮನೋಹರವಾಗಿ ಸೂಚಿಸಿದ್ದಾರೆ.

ಜಗದ ಉತ್ಪತ್ತಿಗೆ ಮೂಲವಾದ ಲಿಂಗವು ಭಕ್ತರ ಉಪಾಸನೆಗಾಗಿ ಆಚಾರ ಲಿಂಗಾದಿ ರೂಪವನ್ನು ತಳೆಯುವ ವಿಷಯವನ್ನು ಪ್ರತಿಪಾದಿಸಿದ ಶ್ರೀ ಸ್ವಾಮೀಜಿಯವರು ಅವುಗಳ ಉಪಾಸನಾ ಪದ್ಧತಿಯನ್ನು ಅದರಲ್ಲೂ ಪ್ರಾಣಲಿಂಗ ಹಾಗು ಭಾವಲಿಂಗಗಳ ಅರ್ಚನಾ ವಿಧಿಯನ್ನು ವಿಶೇಷವಾಗಿ ನಿರೂಪಿಸಿದ್ದಾರೆ. "ಲಿಂಗ ಧರಿಸಿದ ಬಳಿಕ ಅಂಗಗುಣಗಳನ್ನು ಕಳೆದುಕೊಳ್ಳ ದಿದ್ದರೆ ಲಿಂಗವಿದ್ದೂ 'ಅಧಮನವ' ಲಿಂಗಕುಲದಲಿ ಜನಿಸಿ ಲಿಂಗ ಜ್ಞಾನ ವಿಲ್ಲದೆ ಲಿಂಗಾಯತ್ತನೆಂತವನು ? ಕೀಳು ಬಾಳಿನವನು' ಎಂಬ ತಮ್ಮ ಅನುಭಾವದ ಉಕ್ತಿಗಳಲ್ಲಿ ವೀರಶೈವ ಸಿದ್ಧಾಂತದ ಲಿಂಗಧಾರಣೆಯ ಉದ್ದೇಶ ಮತ್ತು ಮಹತ್ತ್ವಗಳನ್ನು ಎತ್ತಿ ತೋರಿಸಿದ್ದಾರೆ.

ಗುಣವೆಲ್ಲ ಜಗಕೆ ಗುರುವಾಗುವುದು ಮೂರು ವರ್ಷದ ಗುಣವೇ ನೂರು ವರ್ಷಕ್ಕೆ ಸತ್ಯ' 'ಗಿಡವಾಗಿ ಬಗ್ಗದ್ದು ಮರವಾಗಿ ಬಾಗದು ದುರ್ಗುಣ ಗಳೇ ದುರ್ಮರಣಕ್ಕೆ ಕಾರಣ' ಮುಂತಾದ ಹಿತೋಕ್ತಿಗಳಿಂದ ಕೂಡಿದ

ಶ್ರೀ ಸ್ವಾಮಿಜಿಯುವರ ಈ ಪದ್ಯಗಳು ವಾಚಕರ ಮನಸ್ಸಿನ ಮೇಲೆ ಆಳವಾದ ಪರಿಣಾಮವನ್ನು ಬೀರಿ ಅವರನ್ನು ಅನುಕೂಲವಾಗಿ ಪರಿವರ್ತಿಸುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಆಚಾರವುಳ್ಳವರ ನುಡಿಗಳಲ್ಲಿ ಅಂತಹ ಸತ್ತ್ವವಡಗಿರುತ್ತದೆ.

ಇಂತಹ ಬಹುಮೂಲ್ಯವಾದ ಮತ್ತು ಲೋಕೋಪಯೋಗಿಯಾದ ಈ ಗ್ರಂಥದ ಪ್ರಕಾಶನವು ನಮ್ಮ ಗುರುಗಳಾದ ಕಾಶಿ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಲಿಂ. ಜಗದ್ಗುರು ವಿಶ್ವೇಶ್ವರಶಿವಾಚಾರ್ಯ ಮಹಾಸನ್ನಿಧಿಯ ಕೃಪಾಶೀರ್ವಾದದಿಂದ ಪ್ರಕಟವಾಗುತ್ತಿರುವುದೂ ನಮಗೆ ಇನ್ನೂ ಅಭಿಮಾನಾಸ್ಪದವಾಗಿದೆ.

ಸನ್ನಿಧಿಯುವರು ಜ್ಞಾನಪೀಠದಿಂದ ಅನೇಕ ಸಂಸ್ಕೃತ ಗ್ರಂಥಗಳನ್ನು ಪ್ರಕಟಪಡಿಸಿರುವರಲ್ಲದೆ ಅನೇಕ ಸಂಘ ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ದಯಪಾಲಿಸಿ ಧಾರ್ಮಿಕ ಸಾಹಿತ್ಯ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಆ ದಿಶೆಯಲ್ಲಿ ಈ 'ಶರಣ ಗೀತೆ' ಗ್ರಂಥವು ಶ್ರೀಸನ್ನಿಧಿಯಿಂದ ಕೃಪಾಶೀರ್ವದಿಸಿದ ಆರ್ಥಿಕ ನೆರವಿನಿಂದಲೇ ಈ ಮೂರ್ತ ರೂಪವನ್ನು ತಾಳಿದೆ. ಇದೆಲ್ಲವೂ ಸಂತೋಷಕರವಾದ ಪ್ರಸಂಗವಿದ್ದರೂ ಈ ಗ್ರಂಥವನ್ನು ಶ್ರೀ ಸನ್ನಿಧಿಯುವರು ಅವಲೋಕಿಸಲಿಲ್ಲವಲ್ಲಾ ಎಂಬುದೊಂದೇ ಕೊರಗು ಮನಸ್ಸನ್ನು ಕಾಡುತ್ತಲಿದೆ. ಅವರೂ ಸ್ಥೂಲದೇಹವನ್ನು ತ್ಯಜಿಸಿ ಪರಮಾತ್ಮನಲ್ಲಿ ಸಮರಸರಾದ ಸರ್ವಾಂತರ್ಯಾಮಿಯಾದ ಅವರು ಸಕಲ ವಾಚಕರ ಆತ್ಮರೂಪರಾಗಿರುವುದರಿಂದ ವಾಚಕರು ಓದಿ ಸಂತೋಷಿಸಿದ ಸಂತೋಷವೇ ಅವರದೆಂದು ಭಾವಿಸುತ್ತೇನೆ.

ಈ ಗ್ರಂಥಕಾರರಾದ ಶ್ರೀ ಕನ್ಯಾಕುಮಾರಿ ಸ್ವಾಮಿಗಳನ್ನು ನಾವು ಬಹು ಹತ್ತಿರದಿಂದ ಕಂಡಿದ್ದೇವೆ. ಅಂತಹ ಯೋಗಿಗಳು ಇಂದು ಜಗತ್ತಿಗೆ ಬೇಕಾಗಿದ್ದಾರೆ. ಅಂತೆಯೇ 'ಕನ್ಯಾಕುಮಾರಿ ಯೋಗ ವಿದ್ಯಾಪೀಠವು' ಆ ದಿಶೆಯಲ್ಲಿ ಪ್ರಾಯೋಗಿಕ ಯೋಗ ಶಿಬಿರಗಳನ್ನು ಏರ್ಪಡಿಸುವುದು ಯೋಗ ಗ್ರಂಥಗಳನ್ನು ಪ್ರಕಟಿಸುವುದರ ಮೂಲಕ ಸರ್ವತೋಮುಖವಾಗಿ ಪರಿಶ್ರಮಿಸುತ್ತಲಿದೆ. ಇವರ ಪರಿಶ್ರಮವು ಸಾರ್ಥಕವಾಗುವಂತೆ ಶ್ರೀ ಜಗದ್ಗುರು ವಿಶ್ವಾರಾಧ್ಯರು ,ಹಾಗು ಕಾಶೀ ವಿಶ್ವನಾಥ ಅನ್ನಪೂರ್ಣದೇವಿಯರು ಅನುಗ್ರಹಿಸಲೆಂದು ಹಾರೈಸುತ್ತೇನೆ.

ವಾರಣಾಸಿ,

ತಾ|| 4–4–90

ಭೂಮಿಕೆ

ಮಾನವ ಜೀವನದಲ್ಲಿ ಭೌತಿಕ ಉನ್ನತಿಯೊಂದಿಗೆ ಆಧ್ಯಾತ್ಮಿಕ ಉನ್ನತಿಯೂ ಸೇರಿ ರಥದ ಎರಡು ಚಕ್ರಗಳಂತೆ ಹಾರುವ ಪಕ್ಷಿಯ ಎರಡು ರೆಕ್ಕೆಗಳಂತೆ ಮಹತ್ತರ ಪಾತ್ರವನ್ನು ವಹಿಸಿರುವುದು. ಇವೆರಡರ ಕೃಪೆಯಿಲ್ಲದೆ ತೃಪ್ತಿಯುಂಟಾಗದು. ವ್ಯಕ್ತಿ ಹಾಗೂ ಜಗತ್ತು ಇವೆರಡರ ಸಂಬಂಧವನ್ನು ಕುರಿತು "ಯತ್ ಪಿಂಡೆ, ತತ್ ಬ್ರಹ್ಮಾಂಡೆ" ಎಂಬುದಾಗಿ ಋಷಿಗಳ ವಾಕ್ಯ ವಿರುವುದು. ನಮ್ಮ ಶರೀರದಲ್ಲಿ ಎಷ್ಟು ರೀತಿಯ ತತ್ವಗಳಿರುವುವೋ, ಅಷ್ಟೇ ರೀತಿಯ ತತ್ವಗಳು ಬ್ರಹ್ಮಾಂಡದಲ್ಲಿರುವುವು. ಆದುದರಿಂದ ಶರೀರದ ಜ್ಞಾನ ವುಂಟಾಯಿತೆಂದರೆ ಅದರ ಆಧಾರದ ಮೇಲೆ ಬ್ರಹ್ಮಾಂಡದ ಜ್ಞಾನವು ಉಂಟಾಗುವುದು. ಇದನ್ನು ಅನೇಕ ಮಹಾತ್ಮರು ವಿಭಿನ್ನ ದೃಷ್ಟಿಗಳಿಂದ ಹಾಗು ವಿಭಿನ್ನ ಮಾಧ್ಯಮಗಳ ಮೂಲಕ ವರ್ಣಿಸುವಲ್ಲಿ ತಮ್ಮ ತಪಸ್ಸು ಹಾಗು ಸಾಧನೆಗಳನ್ನು ಮೀಸಲಾಗಿಡುವರು. ಇಂತಹ ಜ್ಞಾನದ ಒಂದು ಧಾರೆಯು 'ಶರಣ ಗೀತೆ' ಎಂಬ ಹೆಸರಿನಿಂದ ಕಾವ್ಯಗಂಗೆಯಾಗಿ ಶ್ರೀ ಕನ್ಯಾ ಕುಮಾರಿಸ್ವಾಮೀಜಿಯವರ ಅಮೃತಹಸ್ತದಿಂದ ಹರಿದುಬಂದಿರುವುದು.

ಅವರವರ ಭಾವಕ್ಕೆ
ಅವರವರ ಭಕುತಿಗೆ
ಅವರವರಿಗೆಲ್ಲ ಗುರು ನಿನೊಬ್ಬನೇ ||

ಎಂಬ ಶರಣರ ನುಡಿಯಂತೆ ಸ್ವಾಮೀಜಿಯವರ ದೃಷ್ಟಿಯಲ್ಲಿ ಜಗತ್ತೇ ಲಿಂಗ ರೂಪವಾಗಿರುವುದು. ಲಿಂಗವೇ ಜಗತ್ತಿನ ರೂಪದಲ್ಲಿ ಕಂಡಿರುವುದು. ಭಕ್ತ ಹಾಗೂ ಭಗವಂತನ ನಡುವೆ ಭಾವನೆಯೇ ದರ್ಪಣವಾಗಿ ದರ್ಶನಕ್ಕೆ ಕಾರಣ ವಾಗಿರುವುದು. ಆದುದರಿಂದ ಲಿಂಗ ಎಂಬ ಶಬ್ದವು ಸಾಂಪ್ರದಾಯಕವಾಗಿರದೆ ಸತ್ಯದ ಚಿಹ್ನೆಯಾಗಿರುವುದು. ಧರ್ಮದ ಪ್ರತೀಕವಾಗಿರುವುದು. ಸರ್ವದರ ಬೀಜವಾಗಿರುವುದು. ಪ್ರತ್ಯಕ್ಷವನ್ನು ಅನ್ವೇಷಿಸುತ್ತಾ ಮುನ್ನಡೆಯುವಂತಹ ಪ್ರತಿಯೊಬ್ಬ ಜೀವಿಯು ಶರಣನೆಂದೂ ಮತ್ತು ಅಂತಹ ಜೀವನದ ಶೈಲಿಯು ಗೀತೆ ಎಂದೂ ಭಾಸವಾಗುವುದು.

ಜಗಲೀಲೆ ತಿಳಿಯುತಲಿ ಜಗವರಿತು ಜಗವಾಳಿ
ಜೀವನದಿ ಸತ್ಯದ ಆನಂದ ಅನುಭವಿಸಿ
ನಿಜವರಿವ ಯೋಗವು ಪ್ರಾಣಲಿಂಗವು ಶರಣಾ ॥

ಎಂದು ತಿಳಿಸಿರುವ ಸ್ವಾಮೀಜಿಯವರ ಜ್ಞಾನಗಂಗೆಯು ಜಗತ್ತಿನ ಜೊತೆ ಜೀವನದ ಹಾಗು ಯೋಗದ ಸಂಬಂಧವನ್ನು ಚಿತ್ರಿಸಿ ಕೊಟ್ಟಿರುವುದು. ಪ್ರಕಾಶವೇ ದೀಪದ ಭಾಷೆಯು, ಸುಗಂಧವೇ ಪುಷ್ಪದ ಭಾಷೆಯು, ಬಾಯಾರಿಕೆಯನ್ನು ಹೋಗಲಾಡಿಸುವುದೇ ಜಲದ ಭಾಷೆಯು—

ಕಾಯುತಾ ಬಲವಾಗಿ ಮನವೆಲ್ಲ ತಿಳಿಯಾಗಿ
ಮಂಗಳದ ಚೇತನದ ಜ್ಞಾನದೃಷ್ಟಿಯು ತೆರೆದು
ತನ್ನ ತಾನರಿಯುಲು ಬಲಪಡೆವೆ ಶರಣಾ ॥

ಜ್ಞಾನದೃಷ್ಟಿಯನ್ನು ತೆರೆಸಿ, ಅನುಭವವನ್ನು ತನ್ನದನ್ನಾಗಿ ಮಾಡಿಕೊಡುವ ರಾಜಯೋಗದಲ್ಲಿ ತಮ್ಮ ಪ್ರಭುತ್ವವನ್ನು ಮತ್ತು ವಿಸ್ತಾರವನ್ನು ಈ ಕವಿತೆ ಯಲ್ಲಿ ನಿರೂಪಿಸಿರುವರು. ಪ್ರಕೃತಿಯು ರಾಕ್ಷಸನನ್ನು, ಮನುಷ್ಯ ನನ್ನಾಗಿಯೂ, ಮನುಷ್ಯನನ್ನು ದೇವತೆಯನ್ನಾಗಿಯೂ ಪರಿವರ್ತಿಸುವುದು. ಅಂತೆಯೇ ಇವುಗಳಿಗೆ ಆಳಾಗಿ ಉಳಿಯದೆ ತನ್ನ ಅಧಿಕಾರದಲ್ಲಿಟ್ಟುಕೊಂಡು ಮುನ್ನಡೆಯುವುದಕ್ಕೆ ಈ ಗ್ರಂಥವು ಮಾರ್ಗದರ್ಶನವನ್ನು ಮಾಡುವುದು.

ಮಾನವೀಯತೆಗೆ ವರ್ಣಮಾಲೆಯಾಗಿ ಅನಂತದೆಡೆಗೆ ಕೊಂಡೊಯ್ಯುವ ದಿಶೆಯಲ್ಲಿ ನಿಜವಾದ ಭಕ್ತನ, ಸಾಧಕನ, ಜ್ಞಾನಿಯ, ಯೋಗಿಯ ಮಾರ್ಗ ದಲ್ಲಿ ಕಂಡುಬರುವ ವಿಭಿನ್ನಸ್ತರಗಳನ್ನು ಈ ಕಾವ್ಯ ಗ್ರಂಥದಲ್ಲಿ ಕ್ರಿಯಾಲಿಂಗ ಮನೋಲಿಂಗ, ಪ್ರಾಣಲಿಂಗ, ಭಾವಲಿಂಗ, ಜ್ಞಾನಲಿಂಗ, ಇತ್ಯಾದಿಯಾಗಿ ವರ್ಣಿಸುತ್ತ ಹಂತಹಂತವಾಗಿ ವಿಂಗಡಿಸಿರುವ ಸ್ವಾಮೀಜಿಯವರ ಸಾಧನೆಯ ಪರಿಪಕ್ವತೆಯು ಹೃದಯ ಸ್ಪರ್ಶಿಯಾಗಿರುವುದು.

ಸಕ್ಕರೆಯ ಬೊಂಬೆಯನು ಎತ್ತ ಕಚ್ಚಿದರೇನು, ಸಿಹಿಯನ್ನೆ ಕೊಡು ವುದು ಎಂದು ನುಡಿದಿರುವ ಅವರ ದಿವ್ಯವಾಣಿಯು ಆಂತರಿಕ ಜಾಗೃತಿಗೆ ಅನಾಹತವಾಗಿರುವುದು. ತಪೋಭೂಮಿಯಾಗಿರುವ ಹಿಮಾಲಯದಲ್ಲಿ

ಶ್ರೀಸ್ವಾಮಿ ಯೋಗೇಶ್ವರಾನಂದ ಸರಸ್ವತಿ ಮಹಾರಾಜರ ಸತ್ಸಂಗವು 'ಶರಣಗೀತೆ' ಯ ರಚನೆಗೆ ಪ್ರೇರಣೆಯನ್ನುಂಟು ಮಾಡಿತೆಂದು ತಿಳಿಸಿರುವ ಸ್ವಾಮೀಜಿಯವರ ಈ ಕಾವ್ಯಗಂಗೆಯು ಹಲವಾರು ವರ್ಷಗಳಿಂದಲೂ ಪ್ರಸುಪ್ತಾವಸ್ಥೆಯಲ್ಲಿದ್ದು ಇಂದು ಕನ್ಯಾಕುಮಾರಿ ಯೋಗ ವಿದ್ಯಾಪೀಠದ ಸಾಧಕ ವೃಂದದವರ ಪುರುಷಾರ್ಥದಿಂದ ಹಾಗು ಕಾಶಿಯ ಜಂಗಮವಾಡಿ ಮಠದ ಶ್ರೀ ಶ್ರೀ ಶ್ರೀ ಜಗದ್ಗುರುಗಳ ಕೃಪಾಫಲವಾಗಿ ಪ್ರಕಟಗೊಳ್ಳುತ್ತಿರುವುದು. ಇದರ ಭಕ್ತಿಪೂರ್ವಕ ಸ್ವಾಧ್ಯಾಯವು ಜೀವನದಲ್ಲಿ ಪ್ರಕಾಶದೆಡೆಗೆ ನೂತನ ದಿಶೆಯನ್ನು ತೋರಿಸಿಕೊಡುವುದು. ಜ್ಞಾನ ಹಾಗು ಭಾವನೆಯ ಸಂಗಮವಾದ ಇದು ಶಿವಶಕ್ತಿಯ ರೂಪದಿಂದ ಕಲ್ಯಾಣದೊಂದಿಗೆ ಭುಕ್ತಿ ಹಾಗು ಮುಕ್ತಿಯನ್ನು ಪಡೆಯುವಲ್ಲಿ ಯೋಗ್ಯತೆಯನ್ನು ಹಾಗು ಪಾತ್ರತೆಯನ್ನು ತುಂಬಿಕೊಡುವುದು ಅಂತರ್ಯಾಮಿ ಪರಮೇಶ್ವರನ ಹರಕೆಯ ಪ್ರಸಾದವಾಗಿ ಸಾಹಿತ್ಯ ಜಗತ್ತಿನಲ್ಲಿ ಪ್ರಸಾರಗೊಂಡು ಜೀವನವನ್ನು ಧನ್ಯವನ್ನಾಗಿ ಮಾಡಿಕೊಡಲು ಈ ಗ್ರಂಥವು ಸಹಾಯಕವಾದಂತು ಸ್ವಾಮೀಜಿಯವರ ಹಾಗು ಸಂಸ್ಥೆಯವರ ಪುರುಷಾರ್ಥಗಳು ಸಫಲವಾಗುವುದೆಂದು ಆಶಿಸುವೆವು. ಹಾರ್ದಿಕ ಅಭಿನಂದನೆಗಳೊಂದಿಗೆ ಯೋಗನಿಕೇತನದ ಪರವಾಗಿ. ಶುಭವನ್ನು ಕೋರುತ್ತಿರುವ,

ಅರುಣ ಲಲಿತ್



ಗ್ರಂಥದ ಕುರಿತು

ಕನ್ಯಾಕುಮಾರಿ ಯೋಗ ವಿದ್ಯಾ ಪೀಠದಿಂದ ಪ್ರಕಟವಾಗುತ್ತಿರುವ "ಶರಣ ಗೀತೆ" ಸಂಗ್ರಾಹ್ಯವಾದ ಕೃತಿಯೆನಿಸಿದೆ. ಜೀವ, ಜಗತ್ತು, ಈಶ್ವರ ಇವುಗಳ ಸಂಬಂಧಗಳನ್ನು ಗುರುತಿಸುವ ಈ ಅನುಭವವಾಣಿ ಮುಮುಕ್ಷು ಗಳಿಗೆ ಮಾರ್ಗದರ್ಶಕ. ಕೇವಲ ಬೌದ್ಧಿಕ ಜ್ಞಾನದಿಂದ ರಚಿತವಾದ ಸಾಹಿತ್ಯ ವಿಪುಲ ಸಂಖ್ಯೆಯಲ್ಲಿ ದೊರೆಯುತ್ತವೆ. ಆದರೆ ಸ್ವಂತಿಕೆಯ ಅನುಭವದಿಂದ ಒಡಗೂಡಿದ ರಚನೆಗಳು ವಿರಳ. ಈ ರೀತಿಯ ಅನುಭಾವಿಕ ರಚನೆಗಳು ಅಪರೂಪದ ಶ್ರೇಣಿಗೆ ಸೇರಿದವುಗಳಾಗಿವೆ. ತಾನು ಕಂಡು, ಉಂಡು ಬದುಕಿದ ಬೆಡಗನ್ನು ಅನುಭಾವಿ ಗುರುವು ತನ್ನ ಶಿಷ್ಯರುಗಳಿಗೆ ಸಹಜ ಸುಂದರ ಸರಳ ತ್ರಿಪದಿಗಳಲ್ಲಿ ತನ್ನ ಅನುಭವದ ತಿರುಳನ್ನು ಉಪದೇಶಿಸುವುದು ಹೃದ್ಯವಾಗಿವೆ. ಯೋಗಮಾರ್ಗದಲ್ಲಿ ಮುನ್ನಡೆಯಲು ಪ್ರಾಮಾಣಿಕ ಆಸಕ್ತಿ ಯುಳ್ಳವರಿಗೆ ದಿಕ್ಸೂಚಿತೋರುವುದಾಗಿದೆ. ಯೋಗವಿದ್ಯಾಪೀಠ ಈ ದಿಸೆಯಲ್ಲಿ ಮಾಡುತ್ತಿರುವ ಕಾರ್ಯ ಸ್ತುತ್ಯವಾದುದು.

ನಿ॥ ಪ್ರ॥ ಶಿವಾನುಭವ ಚರಮೂರ್ತಿ
ಶಿವರುದ್ರಮಹಾಸ್ವಾಮಿಗಳು,
ಬೇಲಿಮಠ ಬೆಂಗಳೂರು

* * * *

ಈ ಆಧ್ಯಾತ್ಮಿಕ ವಚನಗಳು ನರನು ಹರನಾಗುವ ವಿಧಾನಗಳನ್ನು, ಕನ್ನಡದ ಗಾಯತ್ರಿಯಾದ ತ್ರಿಪದಿಗಳಲ್ಲಿ ಪ್ರಸ್ತುತಪಡಿಸುತ್ತವೆ. 'ಸಾಧನೆ,' 'ಜಪ' 'ಧ್ಯಾನ' 'ಜಪಮಾಲೆ' 'ದೈವಭಕ್ತಿ', 'ಶಾಂತಿ' 'ವಿನಯ' ಮೊದಲಾದ ಜೀವನ ಮೌಲ್ಯಗಳೆಂಬ ಮಣಿಗಳನ್ನು ನಮ್ಮ ಬದುಕಿಗೆ ಅಳವಡಿಸಿಕೊಂಡು ಜೀವನವನ್ನು ಸನ್ಮಾರ್ಗದತ್ತ ಕೊಂಡೊಯ್ದು ಸಾರ್ಥಕಪಡಿಸಿಕೊಳ್ಳ

ಬೇಕೆನ್ನುವ ಆತ್ಮನಿವೇದನೆಯ ಹಂಬಲ ಈ ತ್ರಿಪದಿಗಳಲ್ಲಿ ಪರಿಸ್ಫುಟವಾಗಿ ಕಂಡುಬರುತ್ತದೆ ಮತ್ತು ಸೂಕ್ಷ್ಮಗ್ರಾಹಿಯಾದ ಸಾಧಕ ಮನಸ್ಸಿನ ಪರಿಶುದ್ಧ ಪರಿಭಾವನೆಯ ಅಂತರ್‌ದೃಷ್ಟಿ ಜೊತೆಗೆ ಆಂತರಿಕ ಸಾಧನೆಯ ಅನುಭಾವದ ಸಾಮರಸ್ಯವಿದೆ.

ಈ ತ್ರಿಪದಿಗಳು ಅನುಭಾವದ ನಿಲುವಿನಲ್ಲಿ ಮೂಡಿ ಬಂದು ಪರಿಭಾವಿಸಿದಂತೆಲ್ಲ ಆಧ್ಯಾತ್ಮದ ಜೀವಂತಿಕೆಯನ್ನು ಪಡೆದಿವೆ. ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗ್ರಮವಾಗಿವೆ. ಪ್ರತಿ ತ್ರಿಪದಿಯಲ್ಲೂ ಸಾಧಕನಿಗೆ ಎಚ್ಚರ ನೀಡುವ ವಿವೇಕದ ಮಾತುಗಳಿವೆ. ಇವು ಕೇವಲ ಆಧ್ಯಾತ್ಮ ತ್ರಿಪದಿಗಳಲ್ಲ. ಪ್ರತಿಯೊಬ್ಬ ಸಾಧಕನಿಗೂ ಕೈದೀವಿಗೆಗಳು ಬೆಳಕಿನ ದಾರಿಗಳು.

ಪಂಡಿತ ಷಣ್ಮುಖಯ್ಯ ಅಕ್ಕೂರಮಠ,
(ಬೆಂಗಳೂರು)

ಪೂಜ್ಯ ಗುರುದೇವ ಮಹಾರಾಜಶ್ರೀಯವರ
ಆಶೀರ್ವಾದಗಳು

ಹಿಮಾಲಯದ ತಪ್ರೋಭೂಮಿಯಾಗಿರುವ ಋಷಿಕೇಶಕ್ಕೆ ಶ್ರೀ ಕನ್ಯಾಕುಮಾರಿ ಸ್ವಾಮೀಜಿಯವರು ಬಹಳ ವರ್ಷಗಳಿಂದ ಬರುತ್ತಿದ್ದು ಆಗಾಗೆ ನಮ್ಮ ಸತ್ಸಂಗದಲ್ಲಿ ಭಾಗವಹಿಸುತ್ತಿದ್ದರು. ಮಾನವ ಜನಾಂಗಕ್ಕೆ ಪ್ರಿಯೆವೆನಿಸುವಂತಹ ವಿಜ್ಞಾನಾತ್ಮಕವಾದ ನಮ್ಮ ಸಾಧನಾಕ್ರಮಕ್ಕೆ ಅಂತರಂಗದಿಂದ ಪ್ರಭಾವಿತರಾಗುತ್ತ ಸ್ವಾಮೀಜೀಯವರು ತಮ್ಮ ಅನುಭೂತಿಗಳನ್ನು ಬರೆಯತೊಡಗಿದರು. ತಮ್ಮ ಅನುಪಮವಾದ ಜ್ಞಾನಗಂಗೆಯನ್ನು 'ಶರಣ ಗೀತೆ' ಎಂಬ ಹೆಸರಿನಿಂದ ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಕವಿತೆಗಳ ರೂಪದಲ್ಲಿ ರಚನೆಯನ್ನು ಮಾಡುತ್ತ, ಆ ಬಗ್ಗೆ ನಮ್ಮಲ್ಲಿ ವಿಚಾರ ವಿನಿಮಯವನ್ನು ಮಾಡುತ್ತಿದ್ದರು. ಜನ್ಮದಿಂದಲೇ ಸಿದ್ಧಪುರುಷರೂ, ಹಾಗೂ ಯೋಗಿಗಳೂ ಆದಂತಹ ಈ ಮಹಾತ್ಮರು ನಮಗೆ ಅತ್ಯಂತ ಪ್ರಿಯರಾಗಿದ್ದು ನಿಕಟವರ್ತಿಗಳಾಗಿದ್ದರು.

1974 ರಲ್ಲಿ ತಮ್ಮ ಶರಣ ಗೀತೆಯ ಗ್ರಂಥವನ್ನು, ಪ್ರಿಂಟ್ ಮಾಡಲು ಸಂಕಲ್ಪ ಮಾಡಿರುವುದಾಗಿ ತಿಳಿಸಿ ಆಶೀರ್ವಚನವನ್ನು ಬರೆದು ಕೊಡಬೇಕೆಂದು ನಮ್ಮಲ್ಲಿ ಪ್ರಾರ್ಥಿಸಿದರು. ತಮ್ಮ ಗ್ರಂಥದ ಸಾರಾಂಶವನ್ನು ಹಿಂದಿಯಲ್ಲಿ ವರ್ಣನೆಮಾಡಿ ತಿಳಿಸಿದರು.

ಜನ್ಮ ಜನ್ಮಾಂತರಗಳ ದುಃಖ ಕ್ಲೇಶ, ಶೋಕ ಹಾಗೂ ಅಜ್ಞಾನದ ಅಂಧಕಾರವನ್ನು ನಿವಾರಣೆ ಮಾಡುವಲ್ಲಿ ಈ ಗ್ರಂಥದ ದಿವ್ಯತೆಯು ಪ್ರಕಾಶವನ್ನು ನೀಡುವುದು. ಮೋಕ್ಷಮಾರ್ಗದಲ್ಲಿ ನಡೆಯುವಂತಹ ಪಥಿಕರಿಗೆ ಇದು ಮಹಾನ್ ಉಪಯೋಗಿಯಾಗುವುದು.

ಬ್ರಹ್ಮಮಯವಾದ ಸಕಲವೂ ಶಿವನೆಂದು ಶರಣೆಂದ ಸ್ವಾಮಿಜಿಯವರು ಕಾವ್ಯ ಶೈಲಿಯು ಸರಳವಾಗಿದ್ದು ಸಾಧಕವೃಂದಕ್ಕೆ ಸತ್ಯದ ಸುಗಂಧವನ್ನು ನೀಡುವಲ್ಲಿ ಸಫಲವಾಗುವುದೆಂದು ತಿಳಿಯುತ್ತೇವೆ.

ಶಿವಸಂಬುದರ ಅರ್ಥವೇ ಕಲ್ಯಾಣಕಾರಿಯಾದುದರಿಂದ ಈ ಗ್ರಂಥವು ಲೋಕಕಲ್ಯಾಣಕ್ಕೆ ಕಿರೀಟಪ್ರಾಯವಾಗಿ ಶೋಭಿಸಲಿ. ಅಂತರ್ಯಾಮಿಯಾದ ಪರಮೇಶ್ವರನಲ್ಲಿ ಹಾರ್ದಿಕವಾಗಿ ಪ್ರಾರ್ಥಿಸುತ್ತ ಸಹರ್ಷದಿಂದ ಹಾಗು ಸಪ್ರೇಮಪೂರ್ವಕವಾಗಿ ಮಂಗಲಾಶೀರ್ವಾದಗಳನ್ನು ನೀಡುತ್ತ ಶುಭವನ್ನು ಹಾರೈಸುತ್ತಿರುವೆವು.

13 ಏಪ್ರಿಲ್ 1974

ಯೋಗನಿಕೇತನ　　　　ಸ್ವಾಮಿ ಯೋಗೇಶ್ವರಾನಂದ ಸರಸ್ವತಿ.

ಪ್ರಸ್ತಾವನೆ

ಪರಮ ಯೋಗಿವರ್ಯರಾದ ಶ್ರೀ ಕನ್ಯಾಕುಮಾರಿ ಸ್ವಾಮೀಜಿಯವರು ಕನ್ಯಾಕುಮಾರಿದೇವಿಯ ಪರಮ ಭಕ್ತರು. ಅಪೂರ್ವ ವರ್ಚಸ್ವಿಗಳೂ, ಉನ್ನತ ವಿಚಾರದ ಸರಳ ಜೀವಿಗಳೂ ಆಗಿದ್ದರು. ಅವರು ಎಲ್ಲಕ್ಕೂ ಸಮ ಸಮಕ್ಕೂ ಎತ್ತರ ಎಂಬ ನಾಣ್ಣುಡಿಯಂತೆ ಆಬಾಲವೃದ್ಧರೊಡನೆ ಪ್ರೇಮದಿಂದ ಬೆರೆತು ಶಿಕ್ಷಣ ನೀಡುತ್ತಿದ್ದ ಅಸಾಮಾನ್ಯರಾಗಿದ್ದರು. ಪ್ರಥಮ ದರ್ಶನದಲ್ಲೇ ನಮ್ಮ ನೂತನ ಋಷಿಗಳನ್ನು ನೆನಪಿಗೆ ತರುವಂತಹ ಬ್ರಹ್ಮತೇಜಸ್ವಿಗಳೂ, ಸಾತ್ವಿಕ ಮುಖಮುದ್ರೆಯಿಂದ ಶೋಭಿಸುವಂತಹ ಸಿದ್ಧಪುರುಷರೂ, ತ್ರಿಕಾಲಜ್ಞಾನಿಗಳೂ ಮೇಧಾವಿಗಳೂ ಆಗಿದ್ದರು. ಪ್ರತಿ ನವರಾತ್ರಿಯಲ್ಲೂ ಕನ್ಯಾಕುಮಾರಿಯಲ್ಲಿರುತ್ತಾ ತಮ್ಮೆಲ್ಲ ಭಕ್ತರಿಗೂ ನವರಾತ್ರಿಯ ಪ್ರೇರಣಾಮಯಿ ಶುಭ ಸಂದೇಶವನ್ನೂ ದೇವೀ ಕುಂಕುಮ ಪ್ರಸಾದವನ್ನೂ ಕಳಿಸುವ ವ್ರತವನ್ನು ಕೈಗೊಂಡಿದ್ದರು.

ಗುರುಗಳು ಸ್ವತಃ ಕವಿಗಳೂ, ಗಾಯಕರೂ ಆಗಿದ್ದರು. ಅನೇಕ ಭಕ್ತಿಗೀತೆ, ತತ್ತ್ವಗೀತೆಗಳನ್ನು ರಚಿಸಿ ರಾಗಸಂಯೋಜನೆಮಾಡಿ ಭಕ್ತಿಪರವಶತೆಯಿಂದ ಹಾಡಿ ಆನಂದಿಸುತ್ತಿದ್ದರು. ಭಾವಜೀವಿಗಳೂ, ಕೋಮಲ ಹೃದಯಿಗಳೂ, ಕ್ಷಮಾಗುಣಸಂಪನ್ನರೂ, ಉತ್ತಮ ಪ್ರವಚನಕಾರರೂ, ಜ್ಞಾನಿಗಳೂ, ರಾಜಯೋಗನಿಷ್ಣಾತರೂ, ಧ್ಯಾನ ಹಾಗು ಸಮಾಧಿಯೋಗ ಪ್ರವೀಣರೂ ಆಗಿದ್ದರು. ಇಷ್ಟೆ ಅಲ್ಲದೆ ಸಂಗೀತ ಮತ್ತು ಸಾಹಿತ್ಯ ಸರಸ್ವತಿಯ ಉಪಾಸಕರೂ ಸ್ವತಃ ಕಲಾವಿದರೂ ಆಗಿದ್ದರು. ಮಾತೃವಾತ್ಸಲ್ಯವೇ ಮೂರ್ತಿವೆತ್ತಂತಿದ್ದರು. ಜಾತಿ, ಮತ, ವರ್ಣಭೇದಗಳನ್ನು ಅರ್ಥಹೀನವೆನ್ನುತ್ತಾ ಸರ್ವ ಸಾಧಕರ ಹಿತಚಿಂತಕರೂ, ಪಥಪ್ರದರ್ಶಕರೂ ಆಗಿದ್ದರು.

1970ನೇ ಇಸವಿಯಲ್ಲಿ ಕನ್ಯಾಕುಮಾರಿ ಯೋಗ ವಿದ್ಯಾಪೀಠವನ್ನು ಸ್ಥಾಪಿಸಿದರು. ಮಾನವಕುಲದ ಸರ್ವತೋಮುಖ ಅಭ್ಯುದಯಕ್ಕೆ ಶಾಂತಿ ಹಾಗು ಸಂಪನ್ನತೆಯ ಸುಮಧುರ ಬದುಕಿಗೆ ಯೋಗವಿದ್ಯೆಯು ಪೂರ್ಣ ಸಹಕಾರಿ ಎಂಬುದನ್ನು ಮನಗಂಡು ಈ ಪೀಠಕ್ಕೆ ಯೋಗವಿದ್ಯಾಪೀಠವೆಂದು

ನಾಮಕರಣಮಾಡಿದರು. ಉತ್ತಮ ಕಾರ್ಯ ಸಾಧನೆಯಿಂದ ಜೀವನದ ಹಿರಿಮೆಯನ್ನು ತೋರಿರೆಂದು ಸಾರಿದರು.

ಮಾನವನ ಜೀವನದ ಶ್ರೇಷ್ಠ ಮೌಲ್ಯಗಳಾದ ಸತ್ಯ, ಶಿವ, ಸುಂದರಗಳ ಉಳಿವಿಗೆ ಧರ್ಮಶ್ರದ್ಧೆಯುಳ್ಳವರ ಆಚಾರವಿಚಾರಗಳ ಪಾತ್ರ ಹಿರಿದು. ಕಾಲ ಪ್ರವಾಹದಲ್ಲಿ ಆಧುನಿಕತೆಯು ಹೆಚ್ಚಿದಂತೆ, ವಿಜ್ಞಾನದ ಕೊಡುಗೆ ನಿತ್ಯ ಜೀವನದಲ್ಲಿ ಸೌಖ್ಯ ತಂದಂತೆ, ದೇಶ ವಿದೇಶಗಳ ಸಂಪರ್ಕ ಹೆಚ್ಚಿದಂತೆ ವಿದೇಶೀ ಧರ್ಮ ಪ್ರಭಾವದಿಂದಾಗಿ ಯುವ ಜನಾಂಗಕ್ಕೆ ಸನಾತನ ಧರ್ಮದಲ್ಲಿ ಉಂಟಾದ ಅಪನಂಬಿಕೆ, ಅಶ್ರದ್ಧೆಗಳನ್ನು, ಆಚಾರ ವಿಚಾರಗಳ ಬಗ್ಗೆ ತಿರಸ್ಕಾರವನ್ನು ಕಂಡ ಸ್ವಾಮೀಜಿಯವರ ಹೃದಯ ನೋವಿನಿಂದ ಮಿಡಿಯಿತು. ಆ ಸಮಯದಲ್ಲಿ ವೈಜ್ಞಾನಿಕ ವಿಶ್ಲೇಷಣೆ ಮತ್ತು ಸಂಶೋಧನೆಗಳಿಂದ ಸಮರ್ಥಿಸಲ್ಪಟ್ಟ ನಮ್ಮ ಧರ್ಮ ಮತ್ತು ಯೋಗಗಳ ಬಗ್ಗೆ ಜನತೆಯಲ್ಲಿ ಶ್ರದ್ಧೆ, ನಂಬಿಕೆ ಗೌರವಗಳನ್ನು ಮೂಡಿಸಲು ತಮ್ಮ ಯೋಗವರ್ಚಸ್ಸಿನಿಂದ ಆಧ್ಯಾತ್ಮಿಕ ಸ್ಪಂದನವನ್ನುಂಟುಮಾಡುತ್ತಾ ದೇಶದಾದ್ಯಂತ ಪರ್ಯಟನ ಮಾಡಿದರು. ಶಾಲಾ ಮಟ್ಟದಲ್ಲಿ ಯೋಗ ವಿದ್ಯೆಯನ್ನು ತರಬೇಕೆಂದು ಸರ್ಕಾರದೊಡನೆ ಸೆಣಸಿದರು.

ಜನಾಂಗದ ಜೀವನಾಡಿಯಾಗಿರುವ ಸಂಸ್ಕೃತಿಯೂ ಕೂಡ ಮಾನವನ ನಿತ್ಯ ಬದುಕಿನಲ್ಲಿ ಅನ್ನಾಹಾರಗಳಷ್ಟೇ ಪ್ರಧಾನವೆಂದು ಪರಿಗಣಿಸಿ ಸಂಗೀತ, ಸಾಹಿತ್ಯ, ಚಿತ್ರ ಇತ್ಯಾದಿ ಕಲೆಗಳಲ್ಲಿ ಜನರಿಗೆ ಆಸಕ್ತಿಯನ್ನುಂಟು ಮಾಡುತ್ತಾ ಅವರಲ್ಲಿರುವ ಸುಪ್ತ ಪ್ರತಿಭೆಯನ್ನು ತಮ್ಮ ಆಶೀರ್ವಾದ ಪೂರ್ವಕ ಪ್ರೋತ್ಸಾಹದಿಂದ ಬೆಳಕಿಗೆ ತರುತ್ತಾ ಆತ್ಮೋನ್ನತಿಗೆ ಸಾಧನವೆಂದು ತಿಳಿಯಪಡಿಸಿದರು.

ಆಧುನಿಕ ಅನುಕೂಲ ಸಾಧನಗಳಿಂದಲೂ, ಸುಖ ಜೀವನ ಪ್ರಿಯತೆಯಿಂದಲೂ, ಆಲಸ್ಯ ಪ್ರಮಾದಾದಿ ದೋಷಗಳಾದರೂ, ಪರಿಸರ ಮಾಲಿನ್ಯದಿಂದಲೂ ಜನಾಂಗದ ಆರೋಗ್ಯದ ಮೇಲಾದ ಆಘಾತದಿಂದ ಪಾರುಮಾಡಲು ರಾಜಯೋಗವು ದಿವ್ಯೌಷಧವೆಂದು ತಿಳಿದು ಸಾಧಕರಲ್ಲಿ ಭಕ್ತಿ ಜ್ಞಾನಗಳ ಜೊತೆಗೆ ಯೋಗವನ್ನು ಪ್ರಚಾರ ಮಾಡಿದರು.

ನಮ್ಮ ದೇಶದ ಧರ್ಮ ಪವಿತ್ರತೆ ಹಾಗು ಸೌಶೀಲ್ಯತೆಯು ಉಳಿದು ನಿರಂತರವಾಗಿ ಬೆಳಗಲು ನಾರಿಯರ ಯೋಗದಾನವು ಅತ್ಯಂತ ಮಹತ್ವ ಪೂರ್ಣವೆಂದು, 'ಮಗುವಿಗೆ ಮಾತೆಯೆ ಪ್ರಥಮ ಗುರುವೆಂದು, ಮಾತೃ ದೇವೋಭವ ಎಂದುಲಿದ ದೇವವಾಣಿಯು ಅಕ್ಷರಶಃ ಸತ್ಯವೆಂದೂ' ಅರಿತ ಗುರುವರ್ಯರು ಸ್ತ್ರೀ ಜಾಗೃತಿಗೂ, ಸ್ತ್ರೀ ಕುಲೋದ್ಧಾರಕ್ಕೂ ವಿಶೇಷವಾಗಿ ಶ್ರಮಿಸಿದರು. ಆಧ್ಯಾತ್ಮ ಜಿಜ್ಞಾಸುಗಳ ಶಕ್ತಿ, ಸಾಮರ್ಥ್ಯ ಪ್ರತಿಭೆಗಳನ್ನು ಗುರುತಿಸುವ ಅಂತರ್ ದೃಷ್ಟಿ ಅವರಲ್ಲಿತ್ತು, ಆಧ್ಯಾತ್ಮಿಕ ಜಾಗೃತಿಯ ಸ್ಫುಟಮಾಡಲು ತಮ್ಮ ಬಾಳನ್ನೆ ಮುಡುಪಾಗಿಟ್ಟಿದ್ದರು. ಯೌಗಿಕ ಶಿಕ್ಷಣವನ್ನು ಮತ್ತು ಧಾರ್ಮಿಕ ಶಿಕ್ಷಣವನ್ನು ಜನತೆಗೆ ನೀಡುತ್ತಾ, ಮಾನವತೆಯ ಪೂಜೆಯೇ ದೇವರ ಪೂಜೆಯೆಂದು ಭಾವಿಸಿದ ಯೋಗಿವರ್ಯರು. ಸಾಧಕರ ಭಾಗ್ಯ ಮತ್ತು ಆಂತರಿಕ ಪ್ರಗತಿಗೆ ಅನುಗಾಲ ಮಾರ್ಗದರ್ಶನ ನೀಡುತ್ತಿದ್ದರು. ಯುವ ಜನಾಂಗಕ್ಕೆ ಈ ಪ್ರಶಿಕ್ಷಣವು ವರದಾನವಾದರೆ ತಮ್ಮ ಶ್ರಮವು ಸಾರ್ಥಕವಾಗುವುದೆಂದು ತಿಳಿದು ಯುವ ಜನತೆಗೆ ಕರೆ ನೀಡಿದರು. ಮನುಷ್ಯನನ್ನು ದೇವತೆಯನ್ನಾಗಿ ನಿರ್ಮಾಣ ಮಾಡುವಂತಹ ಶಿಲ್ಪಿಯು ಬ್ರಹ್ಮವಿದ್ಯೆಯಾಗಿರುವುದೆಂದು ತಿಳಿಸಿದರು. ಇದರ ಸುವಾಸನೆಯು ಆಂತರಿಕ ವ್ಯಕ್ತಿತ್ವವನ್ನು ಹಾಗು ದಿವ್ಯತ್ವವನ್ನು ಅರಳಿಸುವುದೆಂದು ಪ್ರಯೋಗಾತ್ಮಕವಾಗಿ ವೈಜ್ಞಾನಿಕ ರೂಪದಲ್ಲಿ ವ್ಯಕ್ತಪಡಿಸುತ್ತಿದ್ದರು.

ಸಾಧಕರ ಸಾಧನೆಯ ಸ್ತರದಲ್ಲಿಳಿದು ಅರಿವನ್ನು ನೀಡುತ್ತಾ ಸ್ಥೂಲ ದಿಂದ ಸೂಕ್ಷ್ಮದೆಡೆಗೆ ಮುನ್ನಡೆಸುತ್ತಾ ದೃಶ್ಯ ಜಗತ್ತಿನ ಮಾಧ್ಯಮದಿಂದ ಅದೃಶ್ಯದೆಡೆಗೆ ಕೊಂಡೊಯ್ದು ಜ್ಞಾನದ ಪರಾಕಾಷ್ಠೆಯನ್ನು ಮುಟ್ಟಲು ಬೆಳಕಾದರು. ಮಹಾಯೋಗೀಶ್ವರರಾದ ಇವರು ನಡೆದ ದಾರಿ, ಸಾಗಿದ ದಿಕ್ಕು ಆಡಿದ ಮಾತು ಹಾಡಿದ ಹಾಡು, ಬರೆದ ಕಾವ್ಯ, ಇತ್ತ ಉಪದೇಶ ಸಾಧಕರಿಗೆ ಇಂದೂ ಮರೆಯಲಾಗದ ಬೆಳಕಾಗಿದೆ. ವಿಭಿನ್ನ ಗುಣ ಸ್ವಭಾವ ಗಳನ್ನು ಹೊಂದಿರುವ ಶಿಷ್ಯರ ಮನಸ್ಸುಗಳನ್ನು ಕರಗಿಸಿ ಶುದ್ಧೀಕರಿಸಿ ಬೆಳಗಿಸು ವುದಕ್ಕೆ ಅವರು ಬಳಸುತ್ತಿದ್ದ ವಿವಿಧಯುಕ್ತಿ ವಿಧಾನಗಳು ಬಹಳ ವೈಶಿಷ್ಟ್ಯ ಪೂರ್ಣವಾಗಿದ್ದವು. ಪ್ರತಿ ವ್ಯಕ್ತಿಯ ಪರಿವರ್ತನೆಗೂ ತನ್ನದೇ ಆದ ಸಮಯ ಬೇಕೆಂದು ಕಾಯುತ್ತಿದ್ದರು. ಸಾಧಕರಲ್ಲಿ ಇಲ್ಲದಂತೆ ಕಂಡ ಶಕ್ತಿಗುಣ


ಗಳನ್ನು ಗುರ್ತಿಸಿ ಹೊರತಂದು ಪೋಷಿಸಿ ಬೆಳೆಸಿ, ಬೆಳಗಿಸಿ ಜಗತ್ಸೇವೆಗೆ ಶಕ್ತರಾಗಿಸುತ್ತಿದ್ದರು. ಕಂಡ ಸಂಸ್ಕಾರವಂತರನ್ನೆಲ್ಲಾ ಪ್ರೋತ್ಸಾಹಿಸಿದ ಸ್ವಾಮೀಜಿಯವರು ದೀರ್ಘ ಪರೀಕ್ಷೆಯ ನಂತರವೇ ಶಿಷ್ಯರನ್ನಾಗಿ ಸ್ವೀಕರಿಸು ತ್ತಿದ್ದರು. ಅವರ ಬದುಕಿನ ಒಳಗುಟ್ಟು, ಸ್ತ್ರೀಲೋಕಕ್ಕೆ ದೈವೀವಾತ್ಸಲ್ಯದ ನಿಧಿಯಾಗಿ, ಅಣ್ಣನಾಗಿ ಬಂದಿದ್ದರು. ಜ್ಞಾನಮಯಪತ್ರಗಳಲ್ಲಿ ಅಮೃತ ವುಣಿಸಿ. ಶಿಷ್ಯ, ಶಿಷ್ಯೆಯರಿಗೆ ನವಶಕ್ತಿ ನವೋಲ್ಲಾಸಗಳನ್ನು ನೀಡುತ್ತಿದ್ದರು. ಅವಿಶ್ರಾಂತ ಜನ ಸಂಪರ್ಕದ ನಡುವೆ ಅವರು ಅಪಾರ, ಆಧ್ಯಾತ್ಮಿಕ, ಸಾಮಾಜಿಕ, ತಾತ್ತ್ವಿಕ, ಕಾವ್ಯ, ಸಾಹಿತ್ಯಗಳನ್ನು ರಚಿಸಿದರು. ಅವರ ಲೇಖನಿ ಕುಂಚದಿಂದ ಅನೇಕ ಕಾವ್ಯ ಚಿತ್ರಗಳು ಮೂಡಿದವು. ಅವರ ಕೃತಿ ಗಳಲ್ಲಿ ಪ್ರಥಮ ಭಾರಿಗೆ ಪ್ರಕಟವಾಗುತ್ತಿರುವ ಈ 'ಶರಣಗೀತೆ' ಗ್ರಂಥವು ಅವರಿಗೆ ಅತ್ಯಂತ ಪ್ರಿಯವಾಗಿತ್ತು. ಅವರ ಅನೇಕ ಕೃತಿಗಳು ಪ್ರಕಟವಾಗ ಬೇಕಾಗಿವೆ. ಆಧ್ಯಾತ್ಮ ಜ್ಞಾನ ಪಿಪಾಸೆಯಿಂದ ಬಂದ ಸಾಧಕವೃಂದಕ್ಕೆ ಜ್ಞಾನಗಂಗೆ ಹರಿಸಿ ಜ್ಞಾನೈಶ್ವರ್ಯದಾನ ಮಾಡಿದ ಸ್ವಾಮೀಜಿಯವರ ಭೋದನಾಕ್ರಮ ಅಭೂತಪೂರ್ವವೆಂದರೆ ಅತಿಶಯೋಕ್ತಿಯಲ್ಲ. ಅವರೇ ರಚಿಸಿದಂತ ಸುಂದರವಾದ ಬೊಮ್ಮಶತಕವಂತೂ ಅವರಿಗೆ ಮತ್ತಷ್ಟು ಪ್ರಿಯ. ಅವಾಙ್ಮಾನಸ ಗೋಚರವಾದ ಬ್ರಹ್ಮವಸ್ತುವು ಅಖಿಲಾಂಡಕೋಟಿ ಬ್ರಹ್ಮಾಂಡಗಳನ್ನು ವ್ಯಾಪಿಸಿರುವ ಮರ್ಮವನ್ನು ಬಹು ಸುಂದರವಾಗಿ ಬಿಡಿಸಿ, ವರ್ಣಿಸಿದ್ದಾರೆ. ಶರಣ ಗೀತೆ ಗ್ರಂಥದಲ್ಲಿ ಕೊನೆಯಲ್ಲಿ ಇದನ್ನು ಸೇರಿಸಲಾಗಿದೆ.

1976 ಡಿಸೆಂಬರ್ 15ರಂದು ಪೂಜ್ಯರ ಆತ್ಮಜ್ಯೋತಿಯು ಬ್ರಹ್ಮ ಜ್ಯೋತಿಯಲ್ಲಿ ಒಂದಾಯಿತು. ಸೀಮಿತ ಶಕ್ತಿಯು ಅಸೀಮ ಶಕ್ತಿ ಯಾಯಿತು. ಅವರ ಜೀವನದ ಸದ್ಗುಣಗಳ ಸುಗಂಧವು ಸಮಷ್ಟಿಯಲ್ಲಿ ಸಮಾವೇಶಗೊಂಡಿತು. ಅವರ ಜೀವನವು ಜ್ಞಾನದ ಯೋಗಮಯಿ ಕೃತಿ ಯಾಗಿ ಅಮರತೆಯ ರಾಗಾಲಾಪನೆಯಲ್ಲಿ ಒಂದಾಯಿತು. ಸೂಕ್ಷ್ಮದ ಧಾರಾಪ್ರವಾಹವು ಸ್ಥೂಲದ ಅಭಾವವನ್ನು ತುಂಬುತ್ತಿರುವಂತೆ ಭಾಸ ವಾಗುತ್ತ ಅವರ ಸ್ಮೃತಿಯು ಇಂದಿಗೂ ತಮ್ಮ ಭಕ್ತರಿಗೆ ಪ್ರೇರಣೆಯನ್ನು ನೀಡುತ್ತಾ, ಆಂತರಿಕ ಬಲವನ್ನು ನೀಡುತ್ತಾ, ಸಂಕಲ್ಪ ಶಕ್ತಿಯಾಗಿದ್ದು

ಇಹಪರ ಸಾಧನೆಯಲ್ಲಿ ಮುನ್ನಡೆಸುತ್ತಿರುವುದು, ಗೃಹಸ್ಥಾಶ್ರಮದಲ್ಲಿ ತಮ್ಮ ಕರ್ತವ್ಯಗಳನ್ನು ನಿಷ್ಠಾಪೂರ್ವಕವಾಗಿ ನೆರವೇರಿಸುತ್ತಾ, ಯೋಗಮಾರ್ಗದಲ್ಲಿ ಬ್ರಹ್ಮವಿದ್ಯೆಯ ಪ್ರಾಪ್ತಿಯನ್ನು ಮಾಡಿಕೊಳ್ಳಲು ಸಾಧ್ಯವಿರುವುದೆಂದು ಮತ್ತು ಅದಕ್ಕೆ ಬೇಕಾಗುವಂತಹ ಸಾಧನೆ ಸಾಮಗ್ರಿಗಳನ್ನು ತಿಳಿಸುತ್ತಾ ಆತ್ಮೋನ್ನತಿಗೆ ಆಧಾರವಾಗಿ ಮಹಾನ್ ಶಕ್ತಿಯಾಗಿ ಈಗಲೂ ಸೂಕ್ಷ್ಮ ರೂಪದಲ್ಲಿದ್ದು ಹರಸುತ್ತಿರುವ ಸದ್ಗುರುವಿನ ಅಪಾರ ಕೃಪೆಯು ವರ್ಣನೆಗೆ ಮೀರಿರುವುದು.

ಮಹಾತ್ಮರ ಜೀವಿತಾವಧಿಯಲ್ಲಿ ಸಾಧಿಸಲಾಗದ ಎಷ್ಟೋ ಧ್ಯೇಯೋದ್ದೇಶಗಳು ಶುಭ ಸಂಕಲ್ಪಗಳು ಅವರ ದೇಹತ್ಯಾಗದ ನಂತರವೇ ತಪ್ಪದೇ ಫಲಿಸುವುವು ಎಂಬುದಕ್ಕೆ ಸ್ವಾಮಿಜಿಯವರ ಆಪ್ತಶಿಷ್ಯೆಯರಾಗಿ ರಾಜಯೋಗ ಶಿಖರವೇರಿದ, ಯೋಗನಿಕೇತನದ ಯೋಗಿನಿಯರಾದ ಅರುಣಾ ಮತ್ತು ಲಲಿತಾ ಮಾತೆಯರು ಪೀಠಕ್ಕೆ ನೀಡುತ್ತಿರುವ ದಿವ್ಯ ಮಾರ್ಗದರ್ಶನವೇ ಜ್ವಲಂತ ಸಾಕ್ಷಿಯಾಗಿದೆ.

ರಾಜೇಶ್ವರಿ ಗೋವಿಂದರಾಜ್,
ಅಧ್ಯಕ್ಷಿಣಿ
ಕನ್ಯಾಕುಮಾರಿ ಯೋಗವಿದ್ಯಾಪೀಠ



ಪ್ರಕಾಶಕರ ನುಡಿ

ಯೋಗಿವರ್ಯ ಶ್ರೀ ಕನ್ಯಾಕುಮಾರಿ ಸ್ವಾಮೀಜಿಯವರು ಆಧ್ಯಾತ್ಮಿಕ ಜಾಗೃತಿಯನ್ನುಂಟುಮಾಡುತ್ತಾ, ಸಾಂಸ್ಕೃತಿಕ ಪ್ರೋತ್ಸಾಹನೀಡುತ್ತಾ, ಯೌಗಿಕ ಶಿಕ್ಷಣ ನೀಡುವುದರ ಮೂಲಕ ಸಾಧಕರಿಗೆ ನವಜೀವನ ಪ್ರೇರಣೆಯನ್ನು ನೀಡಿದ್ದರು. ತಮ್ಮ ಈ ಶರಣ ಗೀತೆ ಗ್ರಂಥವನ್ನು 15 ವರ್ಷಗಳ ಹಿಂದೆಯೇ ಪ್ರಕಟಣೆ ಮಾಡಬೇಕೆಂದು ಸಂಕಲ್ಪಿಸಿದ್ದರು. ಆದರೆ ಬಹುಮುಖ ಪ್ರತಿಭೆಯಿದ್ದ ಅವರು ದಿವ್ಯ ಜೀವನ ನಡೆಸಿದರೂ ಧೀರ್ಘ ಜೀವನ ಅವರದಾಗಲಿಲ್ಲ. ಆದ್ದರಿಂದ ಅವರ ಅನೇಕ ದಿವ್ಯ ಕೃತಿಗಳು ಅಪ್ರಕಟಿತವಾಗಿಯೇ ಉಳಿದವು. ಸ್ವಾಮೀಜಿಯವರು 1976 ರಲ್ಲಿ ಬ್ರಹ್ಮೈಕ್ಯರಾದರು.

ಅವರ ಆಪ್ತ ಶಿಷ್ಯೆಯರಾದ ಡೆಲ್ಲೀ ಯೋಗನಿಕೇತನದ ಯೋಗಿನಿಯರಾದ ಅರುಣಾ ಮತ್ತು ಲಲಿತಾ ಮಾತೆಯರ ಮಾರ್ಗದರ್ಶನದಲ್ಲಿ ಶ್ರಮಿಸುತ್ತಿರುವ ಕನ್ಯಾಕುಮಾರಿ ಯೋಗವಿದ್ಯಾಪೀಠವು 1988 ರಲ್ಲಿ ತನ್ನ ವಾರ್ಷಿಕೋತ್ಸವ ಮತ್ತು ರಾಜಯೋಗಪ್ರವಚನ ಮಾಲೆ ಗ್ರಂಥ ಬಿಡುಗಡೆ ಸಮಾರಂಭವನ್ನೇರ್ಪಡಿಸಿತ್ತು. ಆ ಸಮಾರಂಭದಲ್ಲಿ ಗ್ರಂಥ ಬಿಡುಗಡೆ ಮಾಡಿದ ಶ್ರೀ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಲಿಂ|| ವಿಶ್ವೇಶ್ವರಶಿವಾಚಾರ್ಯ ಮಹಾಸ್ವಾಮಿಗಳವರು ಈ ಶರಣಗೀತೆ ಗ್ರಂಥದ ಪ್ರಕಟಣೆಗೆ ಆರ್ಥಿಕ ನೆರವನ್ನು ಅನುಗ್ರಹಿಸುವುದಾಗಿ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿ ಆಶೀರ್ವದಿಸಿದ್ದರು. ಅಷ್ಟರಲ್ಲಿ ಪೂಜ್ಯರು 1989ರಲ್ಲಿ ಲಿಂಗೈಕ್ಯರಾದರು. ಇಂದು ಅದೇ ಜಗದ್ಗುರು ಪೀಠವನ್ನು ಅಲಂಕರಿಸಿರುವ ಶ್ರೀ ಕಾಶೀ ಜ್ಞಾನಸಿಂಹಾಸನಾಧೀಶ್ವರ, ಕಾವ್ಯ-ಸರ್ವದರ್ಶನ ತೀರ್ಥ, ವೇದಾಂತಾಚಾರ್ಯ ವಿದ್ಯಾವಾರಿಧಿ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರಶಿವಾಚಾರ್ಯಮಹಾಸ್ವಾಮಿಗಳವರು ಶ್ರೀ ಕನ್ಯಾಕುಮಾರಿ ಸ್ವಾಮೀಜಿಯವರಿಗೆ ಸುಪರಿಚಿತರಾಗಿದ್ದು ಹಿಂದಿನ ಜಗದ್ಗುರುಗಳ ಅಭಿಲಾಷೆಯನ್ನು ಈ ಗ್ರಂಥ ಪ್ರಕಟಣೆಯ ಮೂಲಕ ನೆರವೇರಿಸಿದ್ದಲ್ಲದೇ ಈ ಗ್ರಂಥಕ್ಕೆ ಮುನ್ನುಡಿಯನ್ನೂ ಬರೆದುಕೊಟ್ಟು ಗ್ರಂಥಕ್ಕೆ ಮೆರುಗನ್ನು ಕೊಟ್ಟಿದ್ದಾರೆ.

ಇವರಿಗೆ ಕನ್ಯಾಕುಮಾರಿ ಯೋಗ ವಿದ್ಯಾಪೀಠವು ಆನಂದ ಭಕ್ತಿ ಗೌರವಗಳಿಂದ ಅನಂತ ಕೃತಜ್ಞತೆಗಳನ್ನು ಸಲ್ಲಿಸಲು ಹರ್ಷಿಸುತ್ತದೆ. ಗ್ರಂಥಕ್ಕೆ ಶುಭಾಶೀರ್ವಾದಗಳನ್ನು ಈ ಮೊದಲೇ ಬರೆದುಕೊಟ್ಟಿದ್ದ ಯೋಗನಿಕೇತನ ಸ್ಥಾಪಕರಾದ ರಾಜಯೋಗಾಚಾರ್ಯ ಬ್ರಹ್ಮೈಕ್ಯ ಶ್ರೀ ಯೋಗೇಶ್ವರಾನಂದ ಸರಸ್ವತೀ ಮಹಾರಾಜರಿಗೂ ಹಾಗೂ ಅವರ ಅತ್ಯಂತ ಪ್ರಿಯ ಶಿಷ್ಯೆಯರಾದ ಗ್ರಂಥಕ್ಕೆ ಭೂಮಿಕೆ ಬರೆದುಕೊಟ್ಟಿರುವ ರಾಜಯೋಗಪ್ರವೀಣೆಯರಾದ ಅರುಣಾ ಲಲಿತಾ ಮಾತೆಯರಿಗೂ ಅತ್ಯಂತ ಭಕ್ತಿಗೌರವಗಳಿಂದ ಹೃತ್ಪೂರ್ವಕ ಕೃತಜ್ಞತೆಗಳನ್ನೂ ಸಲ್ಲಿಸುತ್ತದೆ.

ಈ ಗ್ರಂಥದ ಕುರಿತು ಬರೆದುಕೊಟ್ಟಿರುವ ಬೆಂಗಳೂರಿನ ಬೇಲೀಮಠಾಧೀಶ್ವರ ಶ್ರೀ ನಿ|| ಪ್ರ|| ಶಿವಾನುಭವ ಚರಮೂರ್ತಿ ಶಿವರುದ್ರಮಹಾಸ್ವಾಮಿಗಳಿಗೂ, ಪಂಡಿತ ಷಣ್ಮುಖಯ್ಯನವರಿಗೂ ಪೀಠದ ಹೃತ್ಪೂರ್ವಕ ಕೃತಜ್ಞತೆಗಳು.

ಶ್ರೀ ಕನ್ಯಾಕುಮಾರಿ ಸ್ವಾಮೀಜಿಯವರು ಲಿಂಗೈಕ್ಯರಾದಬಳಿಕ ಕೆಲವು ವರ್ಷಗಳ ಕಾಲ ಅವರ ಅಪ್ರಕಟಿತ ಕೃತಿಗಳನ್ನೆಲ್ಲಾ ಜೋಪಾನವಾಗಿ ಕಾಪಾಡಿ ಪೀಠಕ್ಕೆ ನೀಡಿದ ಬೆಂಗಳೂರಿನ ಚನ್ನಮ್ಮ ಸ್ಮಾರಕ ಶಾಲೆ ನಡೆಸುತ್ತಿರುವ ಶ್ರೀಮತಿ ಉಷಾ ಪಿಳ್ಳೈಯವರಿಗೂ, ಕನ್ಯಾಕುಮಾರಿ ಸ್ವಾಮೀಜಿಯವರ ಆಪ್ತ ಶಿಷ್ಯಳೂ, ಪೀಠದ ಯೋಗಶಿಕ್ಷಕಿಯೂ ಆಗಿರುವ ಬ್ರಹ್ಮಚಾರಿಣಿ ವಿಜಯಲಕ್ಷ್ಮಿಯವರಿಗೂ ಪೀಠದ ಹೃತ್ಪೂರ್ವಕ ಕೃತಜ್ಞತೆಗಳು.

ಇನ್ನು ಕೊನೆಯದಾಗಿ ಮೈಸೂರಿನ ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನ ಮಾಲಿಕರಾದ ಶ್ರೀಯುತ ಬಿ. ಎಂ. ಸಿದ್ಧೇಶ್ವರಯ್ಯನವರು ತಮ್ಮ ವೈಯ್ಯಕ್ತಿಕ ತೊಂದರೆಗಳನ್ನು ಲೆಕ್ಕಿಸದೆ ಶ್ರದ್ಧಾಭಕ್ತಿ ತಾಳ್ಮೆಗಳಿಂದ ಗ್ರಂಥವನ್ನು ಸಕಾಲಕ್ಕೆ ಅಂದವಾಗಿ ಮುದ್ರಿಸಿಕೊಟ್ಟು ಸಹಕರಿಸಿದ್ದಾರೆ. ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ ಸಹೃದಯದ ಕೃತಜ್ಞತೆಗಳು. ಗ್ರಂಥ ಪ್ರಕಟಣಾ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಪೀಠದ ಧನ್ಯವಾದಗಳು.

ಪ್ರಕಾಶಕರು,

ಕನ್ಯಾಕುಮಾರಿ ಯೋಗವಿದ್ಯಾಪೀಠ

ವಿಷಯ ಸೂಚಿ

ಭಾಗ ೧

೧. ಶರಣ ಗೀತಾರಸ
೨. ಲಿಂಗದಿಂದುಗನಿುಸಿದ ಜಗ
೩. ಮನೋಲಿಂಗ ಪೂಜೆ
೪. ಚರಲಿಂಗ ಪೂಜೆ
೫. ಪ್ರಾಣಲಿಂಗ
೬. ಪ್ರಾಣಲಿಂಗ ದೇಹ
೭. ಶರಣಲಿಂಗ ಪೂಜೆ
೮. ಪಂಚ ಜೀವಾಣು
೯. ಲಿಂಗ ಸ್ವೀಕರಿಸು
೧೦. ಶಿವಶಕ್ತಿ ತತ್ವ
೧೧. ದೈವಭಜನೆ ಯೇಕೆ
೧೨. ಲಿಂಗಪೂಜಾ ಜ್ಞಾನ
೧೩. ಲಿಂಗಧರಿಸಿ ಆರಾಧಿಸು
೧೪. ಲಿಂಗಜ್ಞಾನವೇಕೆ ?
೧೫. ಸತ್ಯಸಾಧಿಸು
೧೬. ಜೀವರಾಶಿಗಳು
೧೭. ದೈವಲೀಲೆ
೧೮. ನಿಜಜ್ಞಾನ ಕುರುಹು
೧೯. ಸೊತ್ತಾರಿಗೆ
೨೦. ಜಪಮಾಲೆ
೨೧. ಸಾಧನೆಯ ಮೆಟ್ಟಲು
೨೨. ಮನದಶಕ್ತಿ


ಭಾಗ ೨

೧. ಧ್ಯಾನಸಾಧನೆ
೨. ಧ್ಯಾನ ಸ್ಥಿರತೆ
೩. ಲಿಂಗೈಕ್ಯಜೀವಿ
೪. ಅನುಭವ ಮಂತ್ರ

ಭಾಗ-೧



ಶರಣ ಗೀತೆ



೧

ಶರಣ ಗೀತಾ ರಸ

ಶರಣರ ಗೀತೆಯಿದು ಶಿವಭಕ್ತಿ ಜ್ಞಾನವಿದು
ಶಿವಲಿಂಗ ಪೂಜಕರ ಸಾಫಲ್ಯ ಸಾರವಿದು
ಸತ್ಯ ಶರಣತ್ವದಲಿ ಆನಂದ ನಿಧಿಯಿಹುದರಿ ಶರಣಾ ! ॥೧॥

ಶರಣರು ಪೂಜಿಸಿದ ಶಿವಲಿಂಗವೆಂಥಹುದು ?
ಶರಣರು ಸಾಧಿಸಿದ ಲಿಂಗಬಲವೆಂಥಹುದು ?
ಶರಣರು ಪಡೆದಿದ್ದ ಅಮರತ್ವಬಲ ಸಿರಿಯನರಿ ಶರಣಾ ! ॥೨॥

೧

ಶರಣರು ಕಂಡಿರುವ ಲಿಂಗದ ಗುಣವೇನು ?
ಶರಣಲಿಂಗದ ಬಲದಿ ಜಗವೆಂತು ಉದಯಿಸಿತು ?
ಲಿಂಗಕೂ ಜೀವಿಗೂ ಜೀವಜಗ ಬಾಂಧವ್ಯವರಿ ಶರಣಾ ! ॥೩॥

ಜಗದ ಉಗಮದ ತತ್ವ, ತತ್ವದುಗಮದ ಜ್ಞಾನ
ಲಿಂಗಬಲದೊಳುದಿಸಿದ ತತ್ವಗಳ ಸಂಘಾತ
ಸತ್ಯವರಿಯುತ ಜಪಿಸಿ ಶಾಂತಿಧರಿಸಿದ ಶಕ್ತಿಯರಿ ಶರಣಾ ! ॥೪॥

ಉಗಮಾಂತ್ಯ ಕೊನೆಯೊರೆಗೆ ಶಂಕೆಗಳನಳಿಸುತಲಿ
ಮನುಜ ಜಿವನಕೆಲ್ಲ ಶಾಂತಿ ಸುಖ ಬಲವಿಡುತ
ದೈವಬಲ ಲಿಂಗದಲಿ ಐಕ್ಯ ಸಾಧನವನರಿ ಶರಣಾ ! ॥೫॥

ಶರಣರು ಸಾಧಿಸಿದ ಸತ್ಯಸಿದ್ಧಾಂತವಿದು
ಶಾಂತಿಯಲಿ ನಿಜವರಿತು ಸಾಹಸದಿ ಸಾಧಿಸುತ
ಲಿಂಗವರಿಯುತ ಜೀವಿ ಲಿಂಗವಾಗುವ ಲೀಲೆಯರಿ ಶರಣಾ ! ॥೬॥

ಪ್ರಾಣಗಳ ಬಲವೇನು ? ಜೀವ ಭೇದವದೇನು ?
ಜೀವರಾಶಿಗಳೆಲ್ಲ ಬಾಳುವಾ ಪರಿಯೆಂತು ?
ಜೀವಗಳ ಪಾಲಿಸುವ ಲೀಲೆಗಳ ನಿಜವನರಿ ಶರಣಾ ! ॥೭॥

ಜೀವ ತಾ ಧರಿಸುವ ದೇಹಗಳ ರಚನೆಯು
ದೇಹದೊಳು ನೆಲೆಸಿರುವ ಮನಶಕ್ತಿ ರಚನೆಯು
ಚರಾಚರ ಲೋಕದೀ ಬಲವರಿಯುಲರಿಯುಯ್ಯ ಶರಣಾ ! ॥೮॥

ಶರಣ ತತ್ವದೊಳಿರುವ ದಶವಿಧದ ಲಿಂಗಗಳು
ದಶಲಿಂಗವ ಸುಲಭದಿ ಅರಿಯುವ ಸತ್ಯಗುಣ
ಶರಣಬಲ, ಲಿಂಗಬಲ ನಿಜವ ನೀನರಿಯಯ್ಯ ಶರಣಾ ! ॥೯॥

ಶಿವಶಕ್ತಿ, ಲಿಂಗವೆನ್ನುವ ಶಕ್ತಿಯೆಂತಿಹುದು ?
ಅಂಥ ಶಕ್ತಿಯು ಬಲದ ಸಾಧನೆಯು ಸೊತ್ತುಬಲ
ಪಡೆದು ನೀ ಶರಣಾಗಿ ನೆಲೆಸುವ ಪರಿಯುನರಿ ಶರಣಾ ! ॥೧೦॥

ನರಸಲ್ಲಿ ಸರನಾಗಿ ಬಾಳಿನಲಿ ಗುಣಿಯಾಗಿ
ಸಾಧನದಿ ಶರಣಾಗಿ ಲಿಂಗೈಕ್ಯವಾಗಲು
ನಿಜದ ಸಾಧನ ಜ್ಞಾನ ಪಡೆದು ಧನ್ಯನಾಗಯ್ಯ ಶರಣಾ ! ॥೧೧॥

ಸಕಲ ಸುಖನೀಯುವ ಶರಣರ ಗೀತವಿದು
ಮನವ ನಿರ್ಮಲ ಮಾಡಿ ಲಿಂಗವನು ಅರಿತೊಡೆ
ಸತ್ಯ ಲಿಂಗೈಕ್ಯ ವರವೀವ ಹಿರಿಗೀತವಿದುವಯ್ಯ ಶರಣಾ! ॥೧೨॥

ಶರಣರ ತತ್ವಗುಣ ಶರಣಗೀತಾ ಬಲವು
ಸತತ ಶರಣರಿಗೆಲ್ಲ ವರದಾನವಿಡಲೆಂದು
ಹಾರೈಸಿ ಲಿಂಗದಲಿ ಋಣಿಯಾಗಿ ವಂದಿಸುವೆ ಶರಣಾ । ॥೧೩॥



೨

ಲಿಂಗದಿಂದುಗಮಿಸಿದ ಜಗ

ಲಿಂಗವೆಂಬಾ ಭಾವ ಲಿಂಗದಲಿ ಲಯಿಸಿರೆ
ಅಂಗವೆ ಲಿಂಗವಾಗಿ ಲಿಂಗ ತಾನಾಗುವುದು
ಅಂಗಲಿಂಗದ ಮಿಲನ ಜಂಗಮು ಜ್ಞಾನ ಶರಣಾ ! ॥೧॥

ಜಂಗಮು ಜ್ಞಾನದಲಿ ಲಿಂಗವನ್ನರಿವವರು
ಚರವಲ್ಲ ಸ್ಥಿರವಲ್ಲ ಚೈತನ್ಯ ಲಿಂಗವನು
ಚೇತನದ ದೃಷ್ಟಿಯಲೆ ಕಾಣುವರು ಶರಣಾ ! ॥೨॥

ಚೇತನದ ಲಿಂಗವು ಸಕಲದರ ಮೂಲವು
ಸಕಲದರ ಉದ್ಭವ ಪಾಲನ ಲಯು ಶಕ್ತಿಮಯು
ಸಕಲ ತತ್ವದ ಉಗಮು ಮೂಲವದು ತಿಳಿಯಯ್ಯ ಶರಣಾ ! ॥೩॥

ಲಿಂಗವೇ ಮೂಲವು ಸಕಲ ಕಾರಣಕೆಲ್ಲ
ಸಕಲ ಕಾರಣ ತತ್ವ ಲಿಂಗದಾ ಬಲವು ನಿಜ
ಅಂಗದೊಳ ಶಕ್ತಿಯದು ಅಗೋಚರವಿಹುದಯ್ಯ ಶರಣಾ ! ॥೪॥

ಲಿಂಗದುದರದಿ ಮೂಲ ಇಚ್ಛೆ ಹಿರಿಯಣುವುಂಟು
ಇಚ್ಛೆಯಲಿ ಜ್ಞಾನ ಕ್ರಿಯೆ ಶಕ್ತಿಗಳುಗಮವುಂಟು
ಇಚ್ಛಾ ಕ್ರಿಯಾ ಜ್ಞಾನ ತ್ರಯಗಳ ಶಕ್ತಿಯದು ಶರಣಾ ! ||೫||

ಸಕಲ ಬ್ರಹ್ಮಾಂಡದಲಿ ತುಂಬಿರುವ ಸಕಲವು
ವಿಧ ವಿಧದ ಗುಣತತ್ವ ವಿಸ್ತರದಿ ಬೆಳೆದಿಹವು
ವಿಧ ವಿಧದ ಗುಣಕೆಲ್ಲ ಮೂಲವದು ಶರಣಾ ! ||೬||

ಐದು ತನ್ಮಾತ್ರೆಗಳು, ಜ್ಞಾನೇಂದ್ರಿಯಗಳೈದು,
ಕರ್ಮೇಂದ್ರಿಯಗಳೈದು, ಮನಸ್ಸು, ಅರಿವಿನ ಬುದ್ಧಿ
ಹದಿನೇಳು ತತ್ವಗಳು ಸೂಕ್ಷ್ಮಕಾಯದಿ ಶರಣಾ ! ||೭||

ಸೂಕ್ಷ್ಮಕಾಯದಿ ಲಿಂಗ ಶಕ್ತಿಯನು ಹರಿಸುವುದು
ಜಡವಿರದ ಅವಿನಾಶ ಶಕ್ತಿಯಿಂದದು ಜಗದಿ
ಜಡದಿಂದ ಸೂಕ್ಷ್ಮದಲಿ ಒಂದಾಯ್ತು ಶರಣಾ ! ||೮||

ಜಡವಲ್ಲಿ ಅಡಗಿರುತ ಸೂಕ್ಷ್ಮದಲಿ ನೆಲೆಸಿರಲು
ಜಡದಲ್ಲಿ ಸೂಕ್ಷ್ಮವು ಬಲವಿರದೆ ಕಾಣುವುದು
ಎಂತಿರಲಿ ಸೂಕ್ಷ್ಮವೇ ಜಡಮೂಲ ಶರಣಾ ! ||೯||

ಜಡವಿದೇ ಭವ ಜಗವು ಸೂಕ್ಷ್ಮವೇ ಸುಖ ಜಗವು
ಜಡ ತೊರೆದು ಸೂಕ್ಷ್ಮದಲಿ ಕಾಣುತಿಹ ಸತ್ಯವೇ
ಜಡಕಧಿಕ ಸೂಕ್ಷ್ಮವಿಹ ಆನಂದವೀಯುವುದು ಶರಣಾ ! ||೧೦||

ಲಿಂಗದಲಿ ತ್ರಿವಿಧವು ಇಚ್ಛೆ ಜ್ಞಾನ ಕ್ರಿಯೆಗಳು
ಇಚ್ಛಾಲಿಂಗವೆ ಪ್ರಾಣ ಜ್ಞಾನಲಿಂಗವೆ ಸುಮನ
ಕ್ರಿಯಾ ಲಿಂಗವೆ ಶಿಲೆಯು ಲಿಂಗವರಿಯಯ್ಯ ಶರಣಾ ! ||೧೧||

ಕ್ರಿಯಾ ಲಿಂಗದ ಪೂಜೆ ಅಭಿಷೇಕ ನೈವೇದ್ಯ
ಬಾಹ್ಯ ಕ್ರಿಯಾವಸ್ತು ಸಕಲದಿಂದಲಿ ಸಾಧ್ಯ
ಆಚಾರ ನೇಮದಲಿ ಪೂಜಿಸುತ ಭಾವಿಸು ಶರಣಾ ! ||೧೨||

ಆಚಾರ ಲಿಂಗಕೆ ಶುದ್ಧ ಜಲದಭಿಷೇಕ
ಭಸ್ಮ ಚಂದನ ಪತ್ರೆ ಪುಷ್ಪಾಕ್ಷತೆ ಧೂಪ
ದೀಪ ನೈವೇದ್ಯಗಳಿಂ ಭಕ್ತಿಯಲಿ ಪೂಜಿಸು ಶರಣಾ ! ||೧೩||

ಆಚಾರ ಲಿಂಗಕ್ಕೆ ಪೂಜೆ ತಾ ಮಾಡಲು
ಪೂಜಿಪನ ದೇಹಕ್ಕೆ ಆಚಾರವೇ ಸ್ನಾನ
ಸ್ಥೂಲ ದೇಹಕ್ಕೆ ನಿಜದಿ ಶಾಂತಿ ತರಬಲ್ಲುದು ಶರಣಾ ! ||೧೪||

ತನುವು ಶಾಂತಗೊಳಲು ಸ್ಥೂಲ ಸ್ಥಿರವಾಗೆ
ಕ್ರಿಯಾಲಿಂಗ ಪೂಜಿಸುವ ಸಕಲ ವಿಧದಾಚರಣೆ
ಮನದಲೆಯ ನಿಲ್ಲಿಸುತ ಚಂಚಲತೆಯಳಿಸುವುದು ಶರಣಾ ! ||೧೫||

ಬಿಡದಂತೆ ಪಾಲಿಸಿದ ಆಚಾರ ಲಿಂಗದ ಪೂಜೆ
ನಿಷ್ಠೆ ನೇಮಾಚಾರ ಶೀಲಗಳ ಕಲಿಸುವುದು
ದೇಹ ಮನ ಶಾಂತಿಗೆ ಇದೆ ನಿಜದಾಚಾರ ಶರಣಾ ! ||೧೬||

ಜ್ಞಾನದ ಲಿಂಗವದು ಮನದಲ್ಲಿ ನೆಲೆಸಿಹುದು
ಜ್ಞಾನದ ಮನದಲ್ಲಿ ಭಾವದಿಂದುದಿಸುವುದು
ಭಾವದ ಲಿಂಗವಮ ಕ್ರಮವನರಿ ಶರಣಾ ! ॥೧೭॥

ಜ್ಞಾನದ ಮನದಲ್ಲಿ ಭಾವದಿಂದುದಿಸಿದ
ಭಾವಲಿಂಗ ನಿರ್ಮಿಸಿ ಶುದ್ಧ ಮನ ನಿಷ್ಠೆಯಲಿ
ಭಾವ ಪೂಜೆಯು ಮಾಡಿ ಶಾಂತಗೊಳಿಸು ಶರಣಾ ! ॥೧೮॥

ಭಾವದಲಿ ಪೂಜಿಪುದು ಕ್ರಿಯಾ ಪೂಜೆಯಂತಲ್ಲ
ಶುದ್ಧ ಮನದಿಂದೆಲ್ಲ ರೂಪಿಸುವ ಪೂಜೆಯದು
ಮನದ ಬಾಳಿನ ರೂಪ ನಿರ್ಮಿಸಿಡು ಸಾಧನದಿ ಶರಣಾ ! ॥೧೯॥



೩

ಮನೋಲಿಂಗ ಪೂಜಾ

ಕ್ಷಮೆಯೆಂಬ ಗುಣಧರಿಸಿ ವಿವೇಕದ ಮನ ಧರಿಸಿ
ಸತ್ಯ ವಚನದಿ ಭಾವ ನಿಷ್ಠೆಯು ಚಿತ್ತ ಧರಿಸಿ
ವೈರಾಗ್ಯ ಮನವಿರಿಸಿ ಲಿಂಗ ರೂಪಿಸು ಶರಣಾ ! ॥೧॥

ಅಹಂಕಾರ ಮನವಳಿಸಿ ಅಭಿಮಾನ ತಾಳದಲಿ
ಲಿಂಗಬಲ ಜ್ಞಾನವನು ಅರಿತು ಶ್ರದ್ಧೆಯನಿಟ್ಟು
ಮೌನದಲಿ ಸಾಧಿಸುವ ಭಾವವರಿ ಶರಣಾ ! ॥೨॥

ಶಬ್ದಾದಿ ವಿಷಯುಗಳ ತ್ಯಾಗಮಾಡುತ ಮನದಿ
ಭ್ರಾಂತಿ ವಿಷಯುಗಳಲ್ಪ ಭಾವದಲಿ ಬರದಂತೆ
ದ್ವಾದಶ ಗುಣ ಧರಿಸೆ ಸತ್ಯಬಲ ಶರಣಾ ! ॥೩॥

ಕ್ಷಮೆಯೆ ಅಭಿಷೇಕವು ವಿವೇಕವೆ ವಸ್ತ್ರವು
ವಚನ ವೈರಾಗ್ಯಗಳೆ ಆಭರಣ ಪುಷ್ಪಗಳು
ಚಿತ್ತ ನಂಬಿಕೆ ಸ್ಥಿರತೆ ಗಂಧವು ಶರಣಾ ! ॥೪॥

ಅಹಾಂಕಾರದ ತ್ಯಾಗ ಶ್ರದ್ಧಾಸಹಿತ ಜ್ಞಾನ
ಧೂಪ ನೈವೇದ್ಯಗಳು ಮೌನವೇ ಘಂಟೆಯು
ಭ್ರಾಂತಿಗಳ ತ್ಯಾಗವೇ ತಾಂಬೂಲ ಶರಣಾ ! ॥೫॥

ಜಗವನ್ನೆ ಲಿಂಗವೆಂದೆಣಿಸುತಾಸಕ್ತಿಯುಲಿ
ಸಕಲವನು ಮನದಿರಿಸಿ ಭಾವದಲಿ ಪೂಜಿಸಿರೆ
ಭಾವಲಿಂಗದ ಪೂಜೆ ಸತ್ಯಬಲ ಶರಣಾ ! ॥೬॥

ಭಾವದ ಲಿಂಗದಲಿ ಪೂಜಿಸುವ ಮನವೆಲ್ಲ
ಜ್ಞಾನ ಮನಬಲ ಬೆಳೆದು ಶಾಂತಮನವಾಗುವುದು
ಶಾಂತಿಯೇ ಮೂಲವು ಭಾವಕೆ ಶರಣಾ ! ॥೭॥

ಜ್ಞಾನವೇ ಅರಳುವುದು ಭಾವದ ಪೂಜೆಯುಲಿ
ಸಕಲದಲಿ ಜ್ಞಾನದ ಪೂರ್ಣಬಲ ಪಡೆಯುವುದು
ಸರ್ವಜ್ಞನಾಗುವೊಲು ರೂಪಿಪುದು ಶರಣಾ ! ॥೮॥

ಭಾವಲಿಂಗದ ಪೂಜೆ ಸಕಲಕೇ ಸಿದ್ಧಿಯು
ಸಕಲ ವಿಧ ಶಕ್ತಿಯುನು ಸಕಲಾಂಗ ಸಿದ್ಧಿಯುನು
ದೊರಕಿಸಿ ಬೆಳಗುವುದು ನೀ ಪೂಜಿಸು ಶರಣಾ ! ॥೯॥

ಭಾವವನು ಅರಳಿಸು ಹೃದಯುದಲಿ ಕರುಣಿಸು
ಆಚರಣ ಕ್ರಮವಿರಿಸಿ ಅನವರತ ಸಾಧಿಸು
ಸತ್ಯ ಧರ್ಮದ ಜ್ಯೋತಿ ಬೆಳಗುವುದು ಶರಣಾ ! ॥೧೦॥

ಸದ್ಭಾವ ಲಿಂಗವನು ನಿತ್ಯ ಪೂಜಿಪರೆಲ್ಲ
ಸತ್ಯ ಶರಣರ ಶಕ್ತಿ ಪಡೆಯುವರು ಭವದಿ ನಿಜ
ಭಾವಲಿಂಗದ ಪೂಜೆ ಮಾಡನುದಿನ ಶರಣಾ ! ||೧೧||

ಭಾವಲಿಂಗದ ಪೂಜೆ ಕಾಲಬಲವರುಹುವುದು
ಕರ್ಮಬಲವರುಹುವುದು ಸನ್ಮಾರ್ಗ ತೋರುವುದು
ಜಗದಲ್ಲಿ ಹಿರಿಜ್ಯೋತಿಯಾಗುವೆ ಶರಣಾ ! ||೧೨||

ಜೀವನದಿ ಇಷ್ಟಾರ್ಥ ಸಫಲವಾಗಿಪ ಪೂಜೆ
ಬಾಳಿನಲಿ ಶಾಂತಿಯನು ಹೃದಯದಲಿ ತುಂಬುವುದು
ಭಾವಲಿಂಗದ ಮಹಿಮೆ ಮರೆಯದಿರು ಶರಣಾ ! ||೧೩||

ಭಾವವಿದು ಪುಸಿಯಲ್ಲ ಬಂಧನವು ಇದಕಿಲ್ಲ
ಸದ್ಭಾವ ಪೂಜೆಯಿದು ಸಕಲ ಜೀವನ ಜ್ಯೋತಿ
ಮಾನವರ ಕುಲಕಿದುವೆ ಹಿರಿಯಾಸ್ತಿ ಶರಣಾ ! ||೧೪||

ದೈವದಿಚ್ಛೆಮಾತ್ರದಿ ಉದಯಿಸಿದ ಜಗದಲ್ಲಿ
ಭಾವ ಪೂಜೆಯಲ್ಲೆಲ್ಲ ಜ್ಞಾನವನು ಪಡೆಯುವೆ
ಇಂತರಿತ ಜ್ಞಾನಮನ ಸತ್ಯ ಸುಖ ಶರಣಾ ! ||೧೫||

ಭಾವದ ಲಿಂಗವನು ಭಾವದಲೆ ಪೂಜಿಸುತ
ದೊರೆತ ಹಿರಿ ಜ್ಞಾನವೇ ಲಿಂಗ ತಾನೆಂದರಿತು
ಭಾವಲಿಂಗದ ರೂಪ ಜ್ಞಾನದಿರು ಶರಣಾ ! ||೧೬||

ಕ್ರಿಯಾಲಿಂಗದ ಪೂಜೆ ಭಾವ ಪೂಜೆಯದಾಗಿ
ಭಾವನೇ ಅರಿವಾಗಿ ಜ್ಞಾನಲಿಂಗವಹುದು
ಮನವೆಲ್ಲ ಜ್ಞಾನದಲೆ ಲಯಿಸುವುದು ಶರಣಾ ! ||೧೭||

ಕ್ರಿಯಾಶಿಲೆ ಪೂಜೆಯು ಕಾಯವನು ಶುದ್ಧಿಪುದು
ಭಾವದ ಶಿವಲಿಂಗ ಮನವೆಲ್ಲ ಶುದ್ಧಿಪುದು
ನಿಜಜ್ಞಾನಿ ನೀನಾಗು ಸದ್ಭಾವದಿ ಶರಣಾ ! ||೧೮||

ಹಿರಿ ಜ್ಞಾನಿ ಶರಣನು ಕಿರು ಜ್ಞಾನ ತೊರೆಯುವನು
ಹಿರಿ ಜ್ಞಾನ ಸಂಪದದಿ ಹಿರಿಶಕ್ತಿ ಗಳಿಸುವನು
ಸುಜ್ಞಾನ ಸುಮನವೇ ದೈವ ಮನ ಶರಣಾ ! ||೧೯||

ಸದ್ಭಾವ ಸುಗುಣತ್ವ ಸರಿಜ್ಞಾನವಿಲ್ಲದಿರೆ
ಆವ ವಿಧದಾಚಾರ ಪೂಜೆಗೆ ಫಲವೇನು ?
ದೈವ ಪೂಜಿಪ ಮೂಲ ಧರ್ಮವರಿ ಶರಣಾ ! ||೨೦||

ಕೋಪತಾಪಾದಿಗಳು ಸ್ವಾರ್ಥಾಭಿಮಾನಗಳು
ಸಂಗ್ರಹದ ಗುಣಗಳು ತನ್ನಲ್ಲಿ ಮೆರೆಯುತಿರೆ
ಲಿಂಗ ಪೂಜಿಸಿದರು ನರಕವದು ಶರಣಾ ! ||೨೧||

ಕ್ಷಮೆ ದಯೆ ಕರುಣದಿಂ ಶಾಂತ ಸ್ಥಿರ ಮನದಿಂದ
ಧರ್ಮದೊಳಗುಣವರಿತು ಭೇದ ಭಾವವ ತೊರೆದು
ಲಿಂಗ ಪೂಜಿಪರೆಲ್ಲ ಶರಣರು ಶರಣಾ ! ||೨೨||

ಸತ್ಯ ಲಿಂಗವನೆಲ್ಲ ಸತ್ಯ ಪೂಜಿಪ ಶರಣ
ಅಂಗ ಲಿಂಗದ ಗುಣವ ಸಾಧನದಿ ದರ್ಶಿಸಿರೆ
ನಡೆನುಡಿಯು ಬಾಳೆಲ್ಲ ಸುಖಪ್ರದವು ಶರಣಾ ! ||೨೩||

ಎತ್ತ ಕೇಳಿದರೇನು ? ಎತ್ತ ನೋಡಿದರೇನು ?
ಸತ್ಯ ಶರಣರ ಬಾಳು ಸುಗುಣಮಯವಿಹುದು ದಿಟ
ಸತ್ಯ ಸಾಧನವಿಹುದದು ಸುಖವಿಹುದು ಶರಣಾ ! ||೨೪||

ಶರಣ ಜೀವನದೆಲ್ಲ ಸತ್ಯ ಶಾಂತಿಗಳುಂಟು
ಸತ್ಯ ಸುಖಗಳ ಮಾರ್ಗ ಸುಗುಣ ಸಾಗರವುಂಟು
ಶರಣರಲಿ ದೋಷವಿರದೆಂದಿಗೂ ಶರಣಾ ! ||೨೫||

ಶರಣರು ನುಡಿದ ನುಡಿಯು ಅಮೃತವನು ಸವಿದಂತೆ
ಶರಣರು ನಡೆದ ಬಾಳು ಚಿನ್ನದ ಗಣಿಯಂತೆ
ಶರಣರ ಜೀವನದೇ ರತ್ನ ರಾಶಿಯು ಶರಣಾ ! ||೨೬||

ಶರಣ ಬಾಳಿನ ಜೀವ ಕೋಟಿ ಜೀವಕೆ ಬಲವು
ಕೋಟಿ ಜೀವನಕೆಲ್ಲ ಶಾಂತಿ ಸುಖದ ನಿಲುವು
ಶರಣ ಸಂಪದದಾಸ್ತಿ ಸಂಗ್ರಹಿಸು ಶರಣಾ ! ||೨೭||

ಸಕ್ಕರೆಯ ಬೊಂಬೆಯೆನು ಎತ್ತ ಕಚ್ಚಿದರೇನು ?
ಸಕ್ಕರೆಯ ಸಿಹಿ ಬಿಟ್ಟು ಕಹಿಯೆಂಬುದಿನಿತಿಲ್ಲ
ಶರಣರ ಸವಿ ಬಾಳನೇ ಸಾಧಿಸು ಶರಣಾ ! ||೨೮||

ಕ್ರಿಯಾಲಿಂಗ ಪೂಜಿಸಿ ಶೀಲದ ತನುವಾಗಲಿ
ಭಾವಲಿಂಗ ಪೂಜಿಸಿ ಸುಗುಣದ ಮನವಾಗಲಿ
ಜ್ಞಾನಲಿಂಗ ಪೂಜಿಸಿ ಸರ್ವಜ್ಞನಾಗಯ್ಯ ಶರಣಾ ! ॥೨೯॥

ಸಕಲ ಜ್ಞಾನವನರಿತು ಸರ್ವಜ್ಞ ನೀ ನಾಗೆ
ದೈವಬಲದೊಲುಮೆಯಲಿ ಜಗವಮಾಯವಹುದು ತಿಳಿ
ಮೂಲವರಿ ಯೋಗದಲಿ ದೈವ ನೀನಾಗು ಶರಣಾ ! ॥೩೦॥

ಯೋಗದ ಲಿಂಗದಲಿ ಹಿರಿ ಶಕ್ತಿ ಮನ ಪಡೆದು
ಶುದ್ಧ ಶರಣರ ಶಕ್ತಿ ನಿಜದಲ್ಲಿ ನೀ ಪಡೆದು
ಸತ್ಯ ಶಿವ ಲಿಂಗದಲಿ ಲೀನವಾಗು ಶರಣಾ ! ॥೩೧॥



೬

ಚರಲಿಂಗ ಪೂಜೆ

ಲಿಂಗರೂಪದ ಶಿವನ ಅಜ್ಞಾನದಿಂ ಕಾಣದಿರು
ಲಿಂಗದರ್ಥವ ತಿಳಿ ಅಲ್ಪ ಶಿಲೆ ರೂಪದಲಿ
ಸಕಲ ಬ್ರಹ್ಮಾಂಡದ ಮೂಲವಿಹುದರಿ ಶರಣಾ ! ॥೧॥

ಜಗ ಸೃಷ್ಟಿ ಕಾರಣದ ಜಗಸ್ಥಿತಿಯು ಕಾರಣದ
ಜಗ ಲಯದ ಕಾರಣದ ಸಕಲ ಶಕ್ತಿಯ ಅಣುವೆ
ಶಿವಲಿಂಗ ಶಕ್ತಿಯದು ಅರಿತಿರು ಶರಣಾ ! ॥೨॥

ಲಿಂಗದಾ ಜ್ಞಾನದಲಿ ಸಕಲ ಶಕ್ತಿಗಳುಂಟು
ಬೀಜದೊಳು ವೃಕ್ಷವು ಮೊದಲೆ ತಾನಿರುವಂತೆ
ಲಿಂಗದೊಳು ಜಗತತ್ವ ಗುಪ್ತವಿದೆ ಶರಣಾ ! ॥೩॥

ಮಾನವ ಬಲ ವಿಚಾರಿಹುದು ಇಚ್ಛೆ ಮಾಯಾ ಶಕ್ತಿ
ಜ್ಞಾನ ತತ್ವದ ಶಕ್ತಿ ಮಾನವನ ಕ್ರಿಯೆಯೊಳಗೆ
ಕ್ರಿಯಾಶಕ್ತಿ ರೂಪದಲಿ ಗುಪ್ತವಿದೆ ಶರಣಾ ! ॥೪॥

ಶಕ್ತಿ ಮಹಾ ಶಿವಲಿಂಗ ಸಕಲ ಶಕ್ತಿಯೊ ತುಂಬಿ
ಅದೃಶ್ಯ ರೂಪದಲಿ ಸಕಲ ತತ್ವಕೆ ಮೂಲ
ಸತ್ಯಲಿಂಗದ ಗುಣವ ಅರ್ಚಿಸು ಶರಣಾ ॥೫॥

ಸಕಲ ಸೃಷ್ಟಿಗು ಮೂಲ ಸಕಲ ವಿದ್ಯೆಗು ಮೂಲ
ಸಕಲ ಕ್ರಿಯಾರೂಪ ಮೂಲವೇ ತಾನಿರುವ
ಹಿರಿ ಶಕ್ತಿ ದೈವವೇ ಲಿಂಗವರಿ ಶರಣಾ ! ॥೬॥

ಲಿಂಗದೊಳಗಡಗಿರುವ ಮೂರ್ ದಶ ಮೇಲಾರು
ತತ್ವಗುಣ ಧರಿಸುತಲಿ ಅಡಗಿಹುದು ಜಗವೆಲ್ಲ
ಸಕಲ ತತ್ವದ ರೂಪ ಸಕಲ ವ್ಯಾಪಕಲಿಂಗ ಶರಣಾ ! ॥೭॥

ಬೀಜದಿಂದುದಯಿಸಿದ ವೃಕ್ಷದಿಂದಲೆ ಬೀಜ
ಬೀಜ ಶಕ್ತಿಯದೆಲ್ಲ ವೃಕ್ಷದಲೆ ವ್ಯಾಪಕವು
ಬೀಜ ವೃಕ್ಷದ ಭೇದವೆಣಿಸದಿರು ಶರಣಾ ! ॥೮॥

ಬೀಜದೊಳಗಡಗಿರುವ ಹಿರಿಯಾದ ವೃಕ್ಷವು
ಅಣುವಿನ ರೂಪದಲಿ ಕಿರಿಯಾಗಿ ಅಡಗಿಹುದು
ಬೀಜ ಮಧ್ಯದ ಶಕ್ತಿ ನಿಜದಲರಿ ಶರಣಾ ! ॥೯॥

ಅಖಿಲ ಬ್ರಹ್ಮಾಂಡದ ಮೂಲದಣು ಲಿಂಗವು
ಬ್ರಹ್ಮಾಂಡ ನಿರ್ಮಿಸುತ ಬ್ರಹ್ಮಾಂಡ ವ್ಯಾಪಕವು
ಬ್ರಹ್ಮಾಂಡವೆಂದೆಂದು ಲಿಂಗಮಯ ಶರಣಾ ! ॥೧೦॥

ಕ್ರಿಯಾಗೋಚರ ತತ್ವ ಜ್ಞಾನಗೋಚರ ತತ್ವ
ಮಾಯೆಯಲಿ ನಿರ್ಮಿಸಿದ ಜ್ಞಾನ ಕ್ರಿಯಾ ಶಕ್ತಿ
ಸಕಲಕ್ಕೆ ಮೂಲವಿಹ ಮಹಾಶಕ್ತಿ ಶರಣಾ ! ||೧೧

ಜಗವೆಲ್ಲ ಲಿಂಗವೇ ಜಗವ್ಯಾಪಕ ಲಿಂಗವೇ
ಸರ್ವರಲಿ ಲಿಂಗವೇ ಸರ್ವಬಲ ಲಿಂಗವೇ
ಸತ್ಯ ಶಿವ ಲಿಂಗವನು ಪೂಜಿಸು ಶರಣಾ ! ||೧೨



೫

ಪ್ರಾಣಲಿಂಗ

ಮಾನವನ ಕಾಯದಲಿ ನೆಲೆಸಿರುವ ಪ್ರಾಣ ತಾ
ಸಕಲ ಶಕ್ತಿಗಳಿದ್ದು ಸೂಕ್ಷ್ಮ ತಾನಾಗಿಹುದು
ಪ್ರಾಣಬಲ ಮರ್ಮವನು ಅರಿತುಕೋ ಶರಣಾ ! ॥೧॥

ಪ್ರಾಣಮೂಲವಿರದಿರೆ ಜಗವೆಲ್ಲ ಶೂನ್ಯವು
ಪ್ರಾಣವೇ ಮೂಲಬಲ ಹಿರಿಶಕ್ತಿ ಕಾಯಕ್ಕೆ
ಚಿತ್ತ ಮನ ಬುದ್ಧಿಗಳ ಬೆಳೆಸುವುದು ಶರಣಾ ! ॥೨॥

ಪ್ರಾಣವೇ ಹಿರಿಶಕ್ತಿ ಜ್ಞಾನ ಕ್ರಿಯೆಗಳಿಗೆಲ್ಲ
ಪ್ರಾಣವೇ ಮೂಲಬಲ ಇಚ್ಛೆಯು ಮಾಯವದು
ಸಕಲ ಶಕ್ತಿಗೆ ಮೂಲ ಪ್ರಾಣ ಶಿವ ಶರಣಾ ! ॥೩॥

ಮಾನವ ಶರೀರದಲಿ ನಿತ್ಯ ಬೆಳಗುತಲಿರುವ
ಜಡ ಸಕಲ ಸೂಕ್ಷ್ಮಗಳು ಬೆಳೆಯುವೀ ಕಾಯಕ್ಕೆ
ಪ್ರಾಣ ಚೇತನವು ಗುಪ್ತ ಶಿವನಂತೆ ಶರಣಾ ॥೪॥

ಪ್ರಾಣವೆಂಬುವ ಶಕ್ತಿ ಸಕಲ ಸೃಷ್ಟಿಯು ಮಾಡಿ
ಕಾಯು ಮನ ಜ್ಞಾನಗಳು ಬೆಳೆಯೆ ಮೂಲವದಾಗಿ
ದೈವಶಕ್ತಿಯು ತೆರದಿ ನೆಲೆಸಿಹುದು ಶರಣಾ ! ॥೫॥

ಪ್ರಾಣವಾಯುವಿಗೆಲ್ಲ ಸಕಲ ಬಲ ಗುಣವುಂಟು
ತನ್ನಣುವಿನಾ ಬಲದಿ ಲೋಕದಲಿ ತಾ ಬೆಳೆದು
ಸಕಲ ಕ್ರಿಯಾಶಕ್ತಿಗೆ ಕಾರಣವಾಗಿಹುದು ಶರಣಾ ! ॥೬॥

ಪಂಚಭೂತದ ಶಕ್ತಿ ಗುಪ್ತದಲಿ ಸೇವಿಸುತ
ರಕ್ತಾಸ್ಥಿ ಮಾಂಸ ನರ ಮಜ್ಜೆ ಬೆಳೆಸಿಕೊಳುತ
ದಶೇಂದ್ರಿಯಗಳನ್ನು ಬೆಳಗಿಪುದು ಶರಣಾ ! ॥೭॥

ಪ್ರಾಣದಂತರ್‌ಶಕ್ತಿ ಬೆಳಗುವುದೆರಡು ದೇಹ
ಬಲವಾದ ಸೂಕ್ಷ್ಮತನು ಜಡವಾದ ಸ್ಥೂಲತನು
ಸೂಕ್ಷ್ಮ ಜಡತನುಗಳಿಗೆ ಪ್ರಾಣವೇ ಬಲ ಶರಣಾ ! ॥೮॥

ಪ್ರಾಣ ತಾ ಬೆಳೆಸಿರಲು ಬೆಳಗುತಿಹ ಸೂಕ್ಷ್ಮತನು
ಶಕ್ತಿ ಜ್ಞಾನಗಳಿದ್ದು ಕಾಣದಂತಿರುವುದು
ಜನನ ಮರಣಗಳಿರದೆ ಶಾಶ್ವತವು ಶರಣಾ ! ॥೯॥

ಶಕ್ತಿ ಜ್ಞಾನಗಳಿಂದ ತುಂಬಿದಾ ಸೂಕ್ಷ್ಮತನು
ಸಕಲವನ್ನರಿಯುತಲಿ ಸಕಲದಲಿ ಚಲಿಸುತಲಿ
ಸಕಲದಲಿ ವ್ಯಾಪಿಪುದು ಜಡವಲ್ಲ ಶರಣಾ ! ॥೧೦॥

ಜಡದೇಹವಿರದಾಗೆ ಸೂಕ್ಷ್ಮದೇಹವು ತಾನು
ಪ್ರಾಣವಾಯುವಿನಂತೆ ಜಗವೆಲ್ಲ ಅಲೆಯುವುದು
ತನ್ನ ಮನದಿಷ್ಟದಲಿ ಸಲಹುವುದು ಶರಣಾ ! ॥೧೧॥

ಸಿದ್ಧಮಹಾ ಶರಣರು ಯೋಗಿ ಋಷಿ ಮುನಿಜನರು
ವಿಧ ವಿಧದ ಸಾಧನದಿ ಸೂಕ್ಷ್ಮಕಾಯವ ಧರಿಸಿ
ಜಗದಲ್ಲಿ ಬಾಳಿಹರು ಅರಿತಿರು ಶರಣಾ ! ॥೧೨॥

ಸೂಕ್ಷ್ಮ ದೇಹದ ಬಾಳು ಅಮರವೀ ಭವದಲ್ಲಿ
ವಿವಿಧ ಸಾಧನೆಗೈದು ಸೂಕ್ಷ್ಮ ಕಾಯವ ಧರಿಸಿ
ಜಗತುಂಬಿ ಜಗ ಸುಖಕೆ ಹರಸುವರು ಶರಣಾ ! ॥೧೩॥

ತ್ರಿವಿಧ ಲಿಂಗದ ಪೂಜೆ ಕ್ರಮದಿಂದ ಸಾಧಿಸುತ
ಅರಳಿದ ಹೃದಯದಿಂದ ಹಿರಿ ಜ್ಞಾನಿ ನೀನಾಗಿ
ಸೂಕ್ಷ್ಮದೇಹವ ಧರಿಸಿ ಬೆಳಗುತಿರು ಶರಣಾ ! ॥೧೪॥



೬

ಪ್ರಾಣಲಿಂಗ ದೇಹ

ಸೂಕ್ಷ್ಮದೇಹವೆಂಬುದು ಸಕಲ ಜೀವಿಗಳಿಗುಂಟು
ಸೂಕ್ಷ್ಮದೇಹವದಿರದೆ ಜಡದೇಹಕಿರದು ಬಲ
ಜಡತನುವನಾಳುವುದು ಸೂಕ್ಷ್ಮಬಲ ಶರಣಾ ! ||೧||

ಸಕಲವನು ಅರುಹುವುದು ಸಕಲವನು ಮಾಡುವುದು
ಸಕಲ ಶಕ್ತಿಯ ಧರಿಸಿ ಸ್ವತಂತ್ರ ತಾನಿಹುದು
ಸೂಕ್ಷದೇಹದ ಬಲವ ಪಡೆದಿರು ಶರಣಾ ! ||೨||

ಸೂಕ್ಷ್ಮದೇಹವು ತಾ ಕಣ್ಗಳಿಗೆ ಕಾಣಿಸದು
ಸಕಲ ಬಲ ನೋಡುವುದು ತಾ ಬೇರೆಯಾಗಿಹುದು
ವಾಯುವಲಿ ವಾಯುವಾಗಂಟದಿಹುದು ಶರಣಾ ! ||೩||

ವಾಯುವಲಿ ತಾ ಚಲಿಸಿ ತಾ ಬೇರೆ ಬಲ ಧರಿಸಿ
ತನ್ನಿಷ್ಟ ಬಲದಂತೆ ಕಾಯಗಳ ಧರಿಸುತಲಿ
ಸರ್ವಬಲ ಶಕ್ತಿಗಳ ವ್ಯಾಪಿಪುದು ಶರಣಾ ! ||೪||

ಸೂಕ್ಷ್ಮದೇಹದ ಬಾಳು ಸತ್ಯ ಶರಣರ ಬಾಳು
ಜಗದಿ ಸಂಚರಿಸುತ್ತ ಸುಜನರನು ಸಲಹುತಲಿ
ಸಕಲ ವಿಧದ ಜ್ಞಾನದ ಭಂಡಾರವಾಗುವುದು ಶರಣಾ ! ||೫||

ಪಂಚಮಹ-ಭೂತಗಳ ಹಿರಿಶಕ್ತಿ ಪಡೆದಿರುತ
ಅಗ್ನಿ ಜಲ ವಾಯುಗಳ ಮಹಶಕ್ತಿಯನೆ ಮೀರಿ
ಸರ್ವ ವ್ಯಾಪಕತೆಯನು ತೋರಿದು ಸ್ವತಂತ್ರ ಶರಣಾ ! ||೬||

ಸೂಕ್ಷ್ಮಕಾಯವ ಧರಿಸಿ ನೀನಮರನಾಗಯ್ಯ
ಭವದ ಜೀವನದಲ್ಲಿ ಧರ್ಮರಕ್ಷಕನಾಗಿ
ಸತ್ಯ ಶಿವಲಿಂಗವನು ದರ್ಶಿಸು ಶರಣಾ ! ||೭||

ಸತ್ಯ ಸೂಕ್ಷ್ಮದ ಶಕ್ತಿ ಮರ್ಮವಿದನರಿತರೆ
ಜಗ ಮೀರಿದಾನಂದ ಭಯವಿರದ ನಿಜಬಂಧ
ಮರಣವನು ಮೀರಿದಾ ಬಲವಿದರಿ ಶರಣಾ ||೮||

ಲೋಕಕಿದು ಕಾಣಿಸದು ಲೋಕವಿದನ್ನರಿಯದು
ಲೋಕ ಮೀರುತ ನಿಂತು ವಿಶ್ವವನೆ ಕಾಯುವುದು
ಬಾಳಿನಲಿ ಹಿರಿಶಕ್ತಿ ಪಡೆಯಲರಿ ಶರಣಾ ! ||೯||

ಕಾಸಿನಾಸೆಯ ಜೀವ ರತ್ನ ಬಯಸುವುದೇನು ?
ಕಾಸನೇ ರತ್ನವೆಂದು ಜೀವ ತಾ ಭ್ರಮಿಸುವುದು
ರತ್ನವನು ಕೊಳ್ಳಲು ಬಲವೆಲ್ಲಿ ಶರಣಾ ? ! ||೧೦||

ಹಿರಿಯಾದ ಗುಣದಾಸೆ ಹಿರಿ ಗುಣದಿ ನಡೆವಾಸೆ
ಹಿರಿದೈವಬಲ ಕಾಣ್ವ ನಿತ್ಯ ಚಿಂತನದಾಸೆ
ಸತ್ಯ ಸಾಧನದಿಂದ ಸದ್ಬಲವ ನೀ ಧರಿಸು ಶರಣಾ ! ॥೧೧॥

ದುಡಿಮೆಯಾ ಬಾಳಲ್ಲಿ ಸರಿಯಾದ ದುಡಿಮೆಯರಿ
ಸರಿ ದುಡಿಮೆ ಬಾಳೆಲ್ಲ ಕಿರಿಗಾಗಿ ಕಳೆದಂದು
ಹಿರಿ ದುಡಿಮೆ ಸಂಪದವ ಎಂತು ಪಡೆಯುವೆ ಶರಣಾ ? ॥೧೨॥



೭

ಶರಣಲಿಂಗ ಪೂಜೆ

ಅಜ್ಞಾನ ತಾಳದಿರು ಹಿರಿಶಕ್ತಿ ಸಾಧನದಿ
ಕಿರಿ ಮನದಿ ಬಾಳದಿರು ಸೂಕ್ಷ್ಮಬಲ ಬಾಳಲ್ಲಿ
ಹಿರಿ ಸೊತ್ತಿಗಾಶಿಸಿ ಬಾಳುತಿರು ಶರಣಾ ! ||೧||

ವಿಧ ವಿಧದ ನಂಬಿಕೆಯು ವಿಧವಿಧದ ಭಕ್ತಜನ
ವಿವಿಧ ನಾಮವ ನುಡಿದು ದೈವವನು ಕಂಡಿಹರು
ಸರ್ವ ಸಾಧಕರು ಕಂಡ ನಿಜರೂಪವೊಂದೆ ಶರಣಾ ! ||೨||

ಬ್ರಹ್ಮ ಹರಿ ರುದ್ರಾದಿ ಶಕ್ತಿಯೊಂದೇ ಇಹುದು
ಭೇದ ಬಲ ಕಂಡವರು ಅಜ್ಞಾನಿ ಅಧಮಿಗಳು
ಆವ ನಾಮವ ಜಪಿಸೆ ಒಂದೆ ಬಲ ಶರಣಾ ! ||೩||

ಹರಿ ರುದ್ರ ಬ್ರಹ್ಮಾದಿ ಭೇದವೆಂದೆಣಿಸದಿರು
ಸಕಲರಲಿ ಕಿರಿ ಭಾವ ಸಂಶಯವ ತಾಳದಿರು
ಸಕಲವೂ ಒಂದೆಂದು ಸತ್ಯವರಿ ಶರಣಾ ! ||೪||

ಆವ ನದಿ ಜಲವಿರಲಿ ನೀಡುವುದೊಂದೇ ಫಲವು
ಕಾಯುವನು ಶುದ್ಧಿಸಿ ದಾಹ ಕಳೆಯುವ ಬಲವು
ನದಿ ನಾಮ ಬೇರೆಯಿರೆ ಜಲದ ಗುಣವೊಂದೇ ಶರಣಾ ! ॥೫॥

ವಿವಿಧ ನಾಮ ರೂಪದ ಬೋಧ ವೈವಿಧ್ಯತೆಗೆ
ಮರುಳಾಗಿ ಮತ್ಸರದಿ ಸಂಶಯವ ತಾಳದಿರು
ಸತ್ಯ ಶಕ್ತಿಯು ಮೂಲದೈವವರಿ ಶರಣಾ ! ॥೬॥

ಅಜ್ಞಾನಿಗಳು ನುಡಿವ ಅನುದಿನದ ನುಡಿ ಕೇಳಿ
ದೈವಾದಿದೈವದಲಿ ಭೇದವನ್ನೆಣಿಸದಿರು
ಸಕಲ ದೈವದ ಬಲವು ಒಂದೆ ತಿಳಿ ಶರಣಾ ! ॥೭॥

ಹಿರಿಯಾದ ಜ್ಞಾನಿಗಳು ಹಿರಿ ದೈವ ಶರಣರು
ದೈವದಲಿ ಎಂದಿಗೂ ಭೇದವೆಣಿಸದೆ ಬದುಕಿ
ಸಕಲ ದೈವದ ಮೂಲ ಕಂಡಿಹರು ಶರಣಾ ! ॥೮॥

ಅಂಗ ಲಿಂಗದ ರೂಪ ರೂಪಿಸುವ ಲೀಲೆಯಲಿ
ಜಗದೆಲ್ಲ ರೂಪಗಳ ನಿರ್ಮಿಸಿದ ಗುಣವಿಹುದು
ಜಗದ ವಾಸನೆಯಂತೆ ದೈವಕೆ ರೂಪ ಶರಣಾ ! ॥೯॥

ಲಿಂಗವೆನ್ನುವ ನಾಮ ಜಾತಿಮತ್ಸರವಲ್ಲ
ಲಿಂಗವೆಂಬಾಕಾರ ರೂಪ ಮತ್ಸರವಲ್ಲ
ಜಗವೆಲ್ಲ ಲಿಂಗಕ್ಕೆ ಮರು ರೂಪ ಶರಣಾ ! ॥೧೦॥

ಕ್ರಿಯೊಾಲಿಂಗದ ಪೂಜೆ ಭಾವಲಿಂಗದಿ ಭಕುತಿ
ಯೋಗದಲಿ ತೇಜವು ಜ್ಞಾನದಲಿ ತತ್ವಗಳು
ಸಕಲ ವಿಧ ರೂಪಗಳು ಲಿಂಗಗಳೆ ಶರಣಾ ! ||೧೧||

ಸತ್ಯ ಲಿಂಗವನರಿತ ಸುಜ್ಞಾನಿ ಲಿಂಗಿಯು
ಜಗತತ್ವಗಳನೆಲ್ಲ ಲಿಂಗವೆಂದರಿಯುತಲಿ
ಸಕಲ ತತ್ವದ ಲಿಂಗ ಪೂಜಿಪನು ಶರಣಾ ! ||೧೨||

ಅಖಿಲ ಜಗ ತತ್ವದಲಿ ಲಿಂಗ ವ್ಯಾಪ್ತಿಯು ಕಂಡು
ಸಕಲ ತತ್ವಕೆ ಜನಕಶಕ್ತಿ ಶಿವಲಿಂಗವು
ಪರಮಶಿವ ಪರಮಾತ್ಮನಿವನನರಿ ಶರಣಾ ! ||೧೩||

ಭೇದ ಕಾಣಲು ಬೇಡ ಭೇದವೊಪ್ಪಲು ಬೇಡ
ಭೇದವೆಣಿಸಿರಲೇನು ? ಜಗಮೂಲ ಶಕ್ತಿಯದು
ಹಿರಿ ತತ್ವಬಲ ಶಕ್ತಿಲಿಂಗ ತಿಳಿ ಶರಣಾ ! ||೧೪||

ಲಿಂಗ ಪೂಜಿಪ ಜೀವ ಲಿಂಗವರಿತಿಹ ಜೀವ
ಸಕಲ ಜಗ ಜೀವದಲಿ ಲಿಂಗ ಕಾಣುವ ಜೀವ
ಲೋಕದಲಿ ಹುಚ್ಚಂತೆ ಬಾಳುವುದು ಶರಣಾ ! ||೧೫||

ಸತ್ಯದರಿವಿನ ಜೀವ ಸತ್ಯದಾನಂದದಲಿ
ಸಾವಿರ ತೆರದಿ ಲೋಕ ಅದಲು ಬದಲಾಗಿರಲು
ಲಿಂಗ ಪೂಜಿಸಿ ಬಾಳಿ ಸ್ಥಿರವಿಹುದು ಶರಣಾ ! ||೧೬||

ಬ್ರಹ್ಮಾಂಡ ಸೂತ್ರವನು ಲಿಂಗ ಹಿಡಿದಿಹುದು ದಿಟ
ಜಗ ಸೂತ್ರ ಮೂಲವನು ಲಿಂಗವೆಂದರಿವವರು
ಪೂಜಿಸಿದ ದೈವಗಳು ಲಿಂಗವಲ್ಲವೆ ಶರಣಾ ?! ||೧೭||

ಲಿಂಗಾಂಶ ಪುರುಷರು ಲಿಂಗಾಂಗ ಜೀವಿಗಳು
ಅಂಗದಿ ಲಿಂಗವಾಗಿ ಲಿಂಗ ಭಾವದಲಿದ್ದು
ಲಿಂಗ ಬಲ ಶಕ್ತಿಯಲಿ ನೆಲೆಸುವರು ಶರಣಾ ! ||೧೮||

ಸತ್ಯಬಲ ಲಿಂಗವನು ಅರಿತು ತಾ ಧರಿಸಿದೊಡೆ
ಕಾಮ ಮದ ಮೋಹಗಳ ಸಂಗ್ರಹದ ಮನವಿರದು
ತಾನೆಂಬ ಅಭಿಮಾನ ಉಳಿಯದರಿ ಶರಣಾ ! ||೧೯||

ಲಿಂಗವನು ಪೂಜಿಪಗೆ ವಾದ ವ್ಯಾಜ್ಯಗಳಿಲ್ಲ
ಭೇದ ಭಾವಗಳಿಲ್ಲ ಅಭಿಮಾನ ನುಡಿಯಿಲ್ಲ
ದಯೆ ತುಂಬಿ ಬಾಳುವನು ದೈವ ತೆರ ಶರಣಾ ! ||೨೦||

ಸಾಲಾಗಿ ಜೀವನದಿ ಸೋಲನಪ್ಪಿದ ಮನದಿ
ಹಿರಿಭಾವ ತಪಸಿನಲಿ ಹಿರಿಶಕ್ತಿ ಉದಯಿಪುದು
ದೈವ ಕೃಪೆಯಿಂದಲೇ ದೈವವನು ಅರಿಯುವುದು ಶರಣಾ ! ||೨೧||

ದೈವ ತನ್ನಯ ಬಲವ ಉನ್ನತಾತ್ಮರಿಗರುಹೆ
ವಿಧ ವಿಧದ ಸ್ಥಿತಿಯಿತ್ತು ಪರಿಕಿಸುತ ಕರುಣಿಪುದು
ದೈವ ಕೃಪೆಯಾ ಬಾಳು ಹಿರಿ ಭಾಗ್ಯ ಶರಣಾ ! ||೨೨||

ದೈವವನೆ ಪ್ರೀತಿಸುತ ದೈವದಲೆ ಮನವಿರಲು
ದೈವಬಲ ನಂಬಲು ಸುಕೃತದ ಬಲವಿರಲು
ದೈವದಲಿ ಸ್ಥಿರಮನವು ನೆಲೆಸುವುದು ಶರಣಾ ! ॥೨೩॥

ಸಕಲ ಶಾಂತಿಯು ಮನವು ಸಕಲ ಕ್ಷಮೆ ದಯೆ ಮನವು
ಸರ್ವತ್ರ ದೈವದಾ ಹಿರಿಶಕ್ತಿ ಕಾಣುವುದು
ಅಂಥ ನಿಜ ಶರಣನಿಗೆ ಲಿಂಗದರಿವು ಶರಣಾ ! ॥೨೪॥

ಪರಿಪಕ್ವವಾಗಿರುವ ಸವಿಯಾದ ಹಣ್ಣಿಂದ
ಇರುವಲ್ಲೆ ಸುವಾಸನೆ ತಾ ಹೊಮ್ಮಿ ಬರುವಂತೆ
ದೈವ ಮನ ಜಗಕೀವ ಸುಬಲ ಗಂಧಗಳು ಶರಣಾ ! ॥೨೫॥

ದೈವ ಜೀವನದ ಗುಣವು ಸಕಲದಲಿ ಕೋಮಲವು
ಹೃದಯದಲಿ ನಿರ್ಮಲತೆ ನಿಷ್ಠೆಯಾ ನಿರ್ಣಯವು
ಸಕಲ ವೈರಾಗ್ಯದಲಿ ತೇಜಿಪುದು ಶರಣಾ ! ॥೨೬॥

ಲೋಕ ಜೀವನದಲ್ಲಿ ವೈರಾಗ್ಯ ತಾ ಮೊಳೆತು
ದೈವ ಜೀವನದಾಸೆ ನಿತ್ಯದಲಿ ಬೆಳೆದಿರಲು
ದೈವದಲಿ ಲೋಕವಸು ಕಾಣುವುದು ಶರಣಾ ! ॥೨೭॥



೮

ಪಂಚ ಜೀವಾಣು

ದೈವ ಲಿಂಗಾಣುವಲಿ ಪಂಚ ಜೀವಾಣುಗಳು
ಜೀವಾಣುಗಳ ಶಕ್ತಿ ಪಂಚ ಭೂತದಿ ಸೇರಿ
ವಿಧವಿಧದ ರೂಪ ಗುಣ ಕಾಯ ಪಡೆವುದು ಶರಣಾ ! ॥೧॥

ಮಾನಸವೆಂಬ ಹಿರಿ ಶಕ್ತಿಮಯ ಜೀವಾಣು
ಜರಾಯುಜವೆಂಬುವ ಕಿರಿಶಕ್ತಿ ಜೀವಾಣು
ಅಂಡಜ, ಸ್ವೇದಜ, ಉದ್ಭಿಜವೆಂಬಿವು ಕಿರಿಜೀವ ಶರಣಾ ! ॥೨॥

ಮಾನಸ ಜೀವಾಣು ಸೂಕ್ಷ್ಮಕಾಯವ ಧರಿಸಿ
ನಾರದಾದಿ ಮಹಾ ಋಷಿಕಾಯ ಧರಿಸುತಲಿ
ದೃಶ್ಯಾದೃಶ್ಯದ ರೂಪ ಧರಿಸುವುದು ಶರಣಾ ! ॥೩॥

ಗರ್ಭದಲಿ ತಾ ಬೆಳೆದು ತನು ಧರಿಸಿ ಜನಿಪುದನು
ಜರಾಯುಜವೆನ್ನುವರು ತರುಲತೆಗಳಾಗುದಿಸಿ
ಭೂಮಿಯಿಂದುದಯಿಪುದು ಉದ್ಭಿಜವು ಶರಣಾ ! ॥೪॥

ಮೊಟ್ಟೆಯೊಡೆಯುತ ಜನಿಸಿ ಹಾವು ಹಕ್ಕಿಯು ರೂಪ
ಧರಿಸುತಿದೆ ಅಂಡಜವು ಬೆವರು ಮಜ್ಜದಲುದಿಸಿ
ಹೇನು ಕೀಟದ ರೂಪ ಧರಿಸುವುದು ಸ್ವೇದಜವು ಶರಣಾ ! ॥೫॥

ಪಂಚವಿಧ ಜೀವಾಣು ವಿವಿಧ ಕಾಯವ ಪಡೆದು
ವಿವಿಧ ಜೀವನ ತಾಳಿ ವಿಧ ವಿಧದಿ ಬೆಳೆದಿರುತ
ವಿವಿಧ ಗುಣ ತೋರಿದರು ಸಕಲಕೊಂದೇ ಮೂಲ ಶರಣಾ ! ॥೬॥

ಜೀವಾಣು ಶಕ್ತಿಯನು ಹಿರಿತನದಿ ಬೆಳೆಸುತಲಿ
ಉದ್ಭಿಜ ಸ್ವೇದಜ ಅಂಡಜ ಜರಾಯುಜ
ಶಕ್ತಿಗಳ ಮೀರಿದಾ ಮಾನಸ ಶಕ್ತಿ ಪಡೆ ಶರಣಾ ! ॥೭॥

ಹಿರಿತನದ ಜೀವಾಣು ಕಿರಿ ಜೀವವಾಗದು
ದಿನದಿನವು ಬೆಳೆಯುತಲಿ ಮುಂದೆ ಸಾಗುತಲಿಹುದು
ಸತ್ಯ ಜೀವನದಿಂದ ಹಿರಿಯಾಗು ಶರಣಾ ! ॥೮॥

ಜೀವವೆಂಬಣು ಅಮರ ವಾಸನಾ ಸಹಿತವು
ಜನುಮ ಜನುಮಗಳಲ್ಲಿ ಬೇರೆ ಕಾಯವ ಪಡೆದು
ಪೂರ್ವ ಜನ್ಮದ ಬದುಕ ಮರೆಯುವುದು ಶರಣಾ ! ॥೯॥

ನೂರು ಕಾಯವ ಪಡೆದು ನೂರು ಜನ್ಮವ ಪಡೆದು
ಜನ್ಮ ಗುರಿಯರಿಯದೇ ಮನದಾಟದಲಿ ಬಾಳಿ
ತನ್ನ ಜೀವನ ಧ್ಯೇಯ ಮರೆಯುವುದು ಶರಣಾ ! ॥೧೦॥

ಹಿರಿಯಾತ್ಮ ಧರ್ಮಿಗಳು ಜೀವ ಸಂಪದ ಬೆಳೆಸಿ
ಯೋಗ ಜೀವನದಿಂದ ಧರ್ಮವನು ಬೋಧಿಪರು
ಸತ್ಯ ಭೋಧವನರಿತು ಜೀವಬೆಳೆಸಯ್ಯ ಶರಣಾ ! ॥೧೧॥

ತ್ರಿವಿಧದಾ ಶಕ್ತಿಯಲಿ ತುಂಬಿರುವ ಲಿಂಗವು
ಅದ್ಭುತದ ಲೀಲೆಯಲಿ ನಿರ್ಮಲ ಲಿಂಗವು
ದೃಶ್ಯ ಜಗದಾದಿಯಲಿ ತಾನಿಹುದು ಶರಣಾ ! ॥೧೨॥

ಇಚ್ಛೆಯೊಳಾರು ಶಕ್ತಿ ಜ್ಞಾನದೊಳು ಹದಿನೈದು
ಕ್ರಿಯೆಯೊಳದಿನೈದು ಮುವತ್ತಾರು ಶಕ್ತಿಯಲಿ
ಸಕಲ ಶಕ್ತಿಯು ತುಂಬಿ ಲಿಂಗ ತಾನಿತ್ತು ಶರಣಾ ! ॥೧೩॥



೯

ಲಿಂಗ ಸ್ವೀಕರಿಸು

ಮಾನವನ ಮನವನ್ನು ಕಟ್ಟುವುದು ಕ್ರಿಯಾಲಿಂಗ
ಮಾನವನ ಜ್ಞಾನವನು ತೇಜಿಪುದು ಮನಲಿಂಗ
ಮಾನವ ಪ್ರಾಣವನು ಕಾಯುವುದು ಪ್ರಾಣಲಿಂಗ ಶರಣಾ ! ||೧||

ಲಿಂಗಾಯತನೆಂದು ಲಿಂಗಬಲ ಗುಣವಿರದೆ
ಲಿಂಗಾಂಗಿ ಅವನೆಂದು ಲಿಂಗವೊಂದನು ಧರಿಸೆ
ಲಿಂಗವಿದ್ದು ಅಧಮನವ ತಿಳಿಯಯ್ಯ ಶರಣಾ ! ||೨||

ಲಿಂಗನಾಯಕನಾದ ಲಿಂಗಾಯತ ಸುಗುಣಿಯು
ಸರ್ವಜ್ಞನಾಗಿರುತ ಸುಬಲ ಕಾರ್ಯವ ಹಿಡಿದು
ಸಕಲದಲಿ ಸುಗುಣವನೆ ಕಾಣುವನು ಶರಣಾ ! ||೩||

ಮನದ ಹಿರಿ ಸುಬಲದಲಿ ಹಿರಿಕಾರ್ಯಗೈಯುತಲಿ
ಮಾನವ ಕುಲಕ್ಕೆಲ್ಲ ದಿನದ ನಡೆ ನುಡಿಯಲ್ಲಿ
ನಿಜ ಸುಗುಣಿ ಗುರುವಾಗೆ ಲಿಂಗಾಯ್ತ ಶರಣಾ ! ||೪||

ಲಿಂಗಾಯ್ತನೆಂದರೆ ಮೋಸ ದೋಷಗಳಿರದ
ಮಮತಾ ದಯಾವಂತ ದೀನಪಾಲಕ ಸುಗುಣಿ
ಅಚಲ ನಿಷ್ಠೆಯು ಪಿಡಿದ ಬಲವಂತನೆಂದರಿ ಶರಣಾ ! ॥೫॥

ಲಿಂಗ ಕುಲದಲಿ ಜನಿಸಿ ಲಿಂಗಜ್ಞಾನವಿಲ್ಲದೆ
ಲಿಂಗಾಯ್ತನೆಂತವನು ? ಕೀಳುಬಾಳಿನವನು
ಲಿಂಗಜ್ಞಾನವನರಿಯುದವನಾವ ಲಿಂಗಾಯತ ಶರಣಾ ?! ॥೬॥

ಲಿಂಗ ಗುಣ ಬಲಗಳನು ಕಾಯುದಲಿ ತುಂಬುತಲಿ
ಲಿಂಗ ಗುಣ ಶಕ್ತಿಯನು ಭಾವದಲಿ ತುಂಬಿಕೊ
ಲಿಂಗದಲಿ ಜೀವವನು ಲಯಿಸಲರಿ ಶರಣಾ ! ॥೭॥

ಶರಣರಾ ಗುಣವೆಲ್ಲ ಜಗಕೆ ಗುರುವಾಗುವುದು
ಶರಣರು ನಡೆದಮಾರ್ಗ ಜಗಕೆ ಸುಲಭದ ಮಾರ್ಗ
ಶರಣರ ಸಂಗ ಸ್ನೇಹ ಜೀವೈಕ್ಯ ಶರಣಾ !॥ ॥೮॥

ಧರ್ಮ ಗುಣವಡಿಪಾಯು ಧರ್ಮ ಜೀವನ ಹೊನ್ನು
ಯಾರಾದರೇನಂತೆ ? ಎಂತಿದ್ದರೇನಂತೆ ?
ನಿಜಧರ್ಮಿಯಾದವಗೆ ಹಿರಿಬಲವು ಶರಣಾ ! ॥೯॥

ಶರಣ ವಿದ್ಯಾಲಯುವು ನಿಜ ಸುಖವ ತೋರುವುದು
ಶರಣ ವಿದ್ಯಾ ಜ್ಞಾನ ನಿರ್ಭಯುವ ನೀಡುವುದು
ಶರಣ ವಿದ್ಯಾಲಯುದ ಶಿಶುವಾಗು ಶರಣಾ ! ॥೧೦॥

ಮಾನವ ಕುಲವೆಲ್ಲ ದೈವಕುಲವೆಂದರಿತು
ಮಾನವ ಕುಲಕೆಲ್ಲ ಶಾಂತಿ ಸುಖವನು ಕಲಿಸು
ಭೂಲೋಕದಲಿ ಸ್ವರ್ಗ ಕಾಣುವುದು ಶರಣಾ ! ॥೧೧॥

ಆಟನೋಟಗಳೆಲ್ಲ ಪಾಠ ಕೂಟಗಳೆಲ್ಲ
ಪಾವನ ಕರ್ಮಗಳೆಲ್ಲ ಲಿಂಗಮಯವೆಂದು ತಿಳಿ
ಅನಂದ ಸುಖ ಶಾಂತಿ ಸತ್ಯ ಲಭ್ಯವು ಶರಣಾ ! ॥೧೨॥

ಅನ್ಯರಿಗೆ ಹೊರೆಯಿರದ ತನ್ನ ಕಾಯಕ ಬಾಳು
ಅನ್ಯರಿಗೆ ನೋವಿಡದ ತನ್ನ ಸುಗುಣದ ಬಾಳು
ಹೊನ್ನಂತೆ ಹೊಳೆಯುತಲಿ ನಗೆ ನೀಡುವುದು ಶರಣಾ ! ॥೧೩॥

ಪಾಪ ಮಾಡದ ಬಾಳು ಕರ್ಮ ಬೆಳೆಸದ ಬಾಳು
ಕಷ್ಟವಿಡದಾ ಬಾಳು ಕರುಣೆ ತುಂಬಿದ ಬಾಳು
ಮಾನವನ ಬದುಕಿಗೇ ಸುಖ ಪ್ರದವು ಶರಣಾ ! ॥೧೪॥

ಬಾಲ್ಯದಾ ಪಾಠಗಳು ಬಾಳಿಗೇ ತಳಪಾಯ
ಬಾಲ್ಯ ಪಾಠದ ಗುಣವು ಪ್ರೌಢದಲಿ ಕಾಯುವುದು
ಬಾಲ್ಯದಲಿ ಸರಿ ಪಾಠ ಕಲಿತುಕೊ ಶರಣಾ ! ॥೧೫॥

ಶರಣ ಬಾಳಿನ ಪಾಠ ಬಾಲ್ಯದಿಂದಲೆ ಕಲಿಯೆ
ಪ್ರೌಢದಲಿ ಸಾಧಿಸುತ ಸುಖಿಸಿ ಸುಖ ನೀಡುವೆ
ಬಾಲ್ಯದಲಿ ಶರಣತ್ವ ಅರಿಯುತಿರು ಶರಣಾ ! ॥೧೬॥

ಮೂರು ವರ್ಷದ ಗುಣವೆ ನೂರು ವರ್ಷಕು ಸತ್ಯ
ಬಾಲ್ಯದಲಿ ಕಂಡದ್ದು ಕೊನೆವರೆಗೆ ಕಾಣುವುದು
ಬಾಲ್ಯದಾ ಬಲವರಿತು ಪಾಠ ಕಲಿಸು ಶರಣಾ ! ||೧೭||

ಗಿಡವಾಗಿ ಬಗ್ಗದ್ದು ಮರವಾಗಿ ಬಾಗದು
ಸಸಿಯಂತ ಮನವನ್ನು ಕಟ್ಟಿ ಬೆಳೆಸಲು ಮುಂದೆ
ಮರವಾಗಿ ನಿಲುವನ್ನು ಕಾಯುವುದು ಶರಣಾ ! ||೧೮||

ಪ್ರೀತಿ ಕ್ಷಮೆ ಶಾಂತಿಯಾ ದಾನ ಭಕ್ತಿಯ ಪಾಠ
ಪರ ಹಿಂಸೆ ಮಾಡದಾ ಕಾರುಣ್ಯ ಗುಣ ಪಾಠ
ಬಾಲ್ಯದಲೆ ಕಲಿಸುತಿರು ಮನಕೆಲ್ಲ ಶರಣಾ ||೧೯||

ಆಚಾರ ಮಾರ್ಗದಲಿ ಲಿಂಗವನು ಪೂಜಿಸುತ
ಲಿಂಗತತ್ವವನರಿತು ಧರ್ಮಿಯಾಗಿ ಬಾಳೆ
ದೊರೆವ ಅದೃಶ್ಯ ಫಲ ನೀ ಕೇಳು ಶರಣಾ ! ||೨೦||

ಮಾನವಗೆ ನಿಲುಕದಾ ಜನನ ಮರಣದ ಸಮಯ
ಬಾಳಿನಲಿ ಬರಲಿರುವ ಲಾಭ ಹಾನಿ ಕಷ್ಟಗಳು
ಮಾನಾಪಮಾನಗಳು ಮೊದಲೆ ಗೋಚರಿಸುವುವು ಶರಣಾ ! ||೨೧||

ದೈವಲೀಲೆಯನರಿವ ಆಧಾರ ಶಕ್ತಿಯಿಂ
ಮನದರಿವನರಿಯುತಲಿ ಜ್ಞಾನಿಯವನಾಗುವನು
ಸಕಲ ಜ್ಞಾನದ ಪೀಠವಾಗುವುದು ಆ ಅರಿವು ಶರಣಾ ! ||೨೨||

ಅಪಮಾನವಿರದಂತೆ ಅಪಮೌಲ್ಯವಿರದಂತೆ
ಅನುದಿನದ ಕಾರ್ಯಕ್ಕೆ ಹಾನಿ ತಟ್ಟದೆ ನಿಂತು
ಸರಿಯಾದ ಕಾಲದಲಿ ಕೊನೆಯುಸಿರನೆಳೆಯುವನು ಶರಣಾ! ||೨೩||

ಕರ್ಮಯೋಗದ ಮಧ್ಯೇ ಬಂದೊದಗಿ ನಿಲ್ಲುವಾ
ಸತಿ ಸುತ ಪರಿವಾರ ಮಿತ್ರ ಬಾಂಧವರೆಲ್ಲ
ಸಕಲರೂ ಉತ್ತಮರೆ ದೊರೆಯುವರು ಶರಣಾ ! ||೨೪||

ದುರ್ಗುಣದ ವಾಸನೆಯು ಮೊದಲಲ್ಲೆ ತಿಳಿಯುವುದು
ದುರ್ಮರಣ ಕಾಲವನು ದೂರದಲಿ ನಿಲಿಸುವುದು
ದೀನನಾಗಿತ್ತೆಲ್ಲ ಹರಸುವುದು ಶರಣಾ ! ||೨೫||

ದೈವಬಲ ಸಂಗ್ರಹಿಸೆ ದೀನ ದಾರಿದ್ರ್ಯದಲು
ದಾರಿಯಲ್ಲಡಿಗಡಿಗೆ ದೈವವನ್ನರಿವವರು
ದೇವ ಧರ್ಮದಲಿಂಗವರಿತವರು ಶರಣಾ ! ||೨೬||

ಸ್ಥಿರವಾದ ಮನದಲ್ಲಿ ದೈವಲಿಂಗ ಪೂಜಿಸೆ
ಸ್ಥಿರವಾದ ಶಕ್ತಿಯಲಿ ಧರ್ಮ ದಾರಿಯನರಿಯೆ
ಸ್ಥಿರ ಸುಖದಿ ಅಮರರಾಗುಳಿಯುವರು ಶರಣಾ ! ||೨೭||

ಜಗ ಮೂಲ ಲಿಂಗದಾ ಜ್ಞಾನವಿರದಾ ಜೀವಿ
ಮಾಡಿದೆಲ್ಲಾ ಪೂಜೆ ಕ್ರಿಯಾ ಪೂಜೆಯು ಮಾತ್ರ
ಎಷ್ಟು ಸಾಧಿಸಲೇನು? ಬಲು ವ್ಯರ್ಥ ಶರಣಾ ! ||೨೮||

ಮಾನವರ ಕುಲವೆಲ್ಲ ಸತ್ಯ ಶಾಂತಿಯ ಪಡೆದು
ಇಹ ಪರಗಳೆರಡರಲಿ ಸುಖಿಸಿ ಬಾಳಲಿ ಎಂದು
ಯೋಗಿ ಋಷಿ ಮುನಿಗಳು ಅರುಹಿ ಹರಸಿಹರು ಶರಣಾ ! ||೨೯||



೧೦

ಶಿವ ಶಕ್ತಿ ತತ್ವ

ಶಿವ ಮೂಲ ಲಿಂಗದಲಿ ಆರು ಮಾಯಾ ಶಕ್ತಿ
ಶಿವ ಶಕ್ತಿ ಸದಾಶಿವ ಈಶ್ವರ ಶುದ್ಧವಿದ್ಯಾ ಮಾಯ
ಈ ಆರು ಶಕ್ತಿಯೇ ಜಗ ಕಾರಣವು ಶರಣಾ ! ||೧||

ಶಿವತತ್ವವೆನ್ನುವುದು ತಾನಿರುವ ಸ್ಥಳದಲ್ಲಿ
ಮಾಯಾ ಶಕ್ತಿಯಿಂದ ಜಾಲವನು ನಿರ್ಮಿಸಿ
ಜಾಲದೊಳು ತಾನಾಡಿ ತಾ ಬೇರೆಯಿರುತಿಹುದು ಶರಣಾ ! ||೨||

ಜೇಡರಾಹುಳು ಬಲೆಯು ರಚಿಸಿ ಸಂಚರಿಸುತ್ತ
ಬಲೆಯಲ್ಲಿ ತಾ ಸಿಗದೆ ತಾ ಬೇರೆಯಾಗಿರಲು
ಶಿವತತ್ವ ಶಕ್ತಿಯುಲಿ ಬಲೆಯಾಯ್ತು ಶರಣಾ ! ||೩||

ಬಲೆಯು ತಾ ನಿರ್ಮಿಸುತ ಬಲೆಯಲ್ಲಿ ನೆಲೆಸಿರಲು
ಮಧ್ಯದಲಿ ಉದ್ಭವಿಪ ಹಿರಿಯಾದ ಶಕ್ತಿಯು
ಶಕ್ತಿತತ್ವವದಾಗಿ ನೆಲೆಸಿಹುದು ಶರಣಾ ! ||೪||

ಬಲೆಯು ನಿರ್ವಿಕಲ್ಪ ಜ್ಞಾನ ಶಿವತತ್ವ ತಾನಿಹುದು
ಬಲೆಯು ರಸ ಶಕ್ತಿಯೋ ಶಕ್ತಿ ತತ್ವವದಾಗಿ
ಎರಡಕ್ಕು ಅಂಟದಲಿ ಬೇರಿಹುದು ಶರಣಾ ! ॥೫॥

ಶಿವತತ್ವ ಶಕ್ತಿಯು ಜ್ಞಾನ ಕ್ರಿಯೆಗಳಲ್ಲಿ
ಸಕಲವನು ತಾ ಬಿಟ್ಟು ಬೇರಾಗಿ ನೆಲೆಸಿಹುದು
ಬೇರಾದ ಮೂಲವೇ ಲಿಂಗವು ಶರಣಾ ! ॥೬॥

ಬೀಜ ನೀರಲಿ ನೆನೆದು ಮೈಯುಬ್ಬಿಕೊಳ್ಳುವ
ಹಿರಿ ಶಕ್ತಿ ಸಂಪರ್ಕ ರೂಪಮಯ ಮಾಯೆಯು
ಸದಾಶಿವ ತತ್ವವದು ರೂಪಬಲ ಶರಣಾ ! ॥೭॥

ಶಿವ ಶಕ್ತಿ ಕಾರಣದಿ ಜ್ಞಾನಶಕ್ತಿಯು ತುಂಬಿ
ಬೀಜದೊಳಗಿಹ ಮೂಲ ಜಲದಲ್ಲಿ ನೆನೆಯುತೆ
ಮೈಯುಬ್ಬಿ ಅಂಕುರಿಸುವುದೆ ಈಶ್ವರ ತತ್ವ ಶರಣಾ ! ॥೮॥

ಮಾನವಗೆ ಮಿಗಿಲಿರುವ ಈಶ್ವರ ತತ್ವವೇ
ಬೀಜದಿಂ ಸಸಿವೊಡೆದು ಅದೃಶ್ಯ ಅಣುವನ್ನು
ಹೊರ ತರುವ ಶಕ್ತಿಯಾಗಿಹುದು ತಿಳಿ ಶರಣಾ ! ॥೯॥

ಸಕಲ ನಿರ್ಮಾಣಕ್ಕು ಕಾರಣವು ತಾನಾಗಿ
ಎಂದಿಗೂ ಅಂಟದೇ ಬೇರೆಯಾಗಿಹುದು ತಿಳಿ
ಸಕಲವೂ ತಾನೆಂಬ ಅರಿವೆ ವಿದ್ಯೆಯು ಶರಣಾ ! ॥೧೦॥

ಈ ತೆರದಿ ನಿರ್ಮಿಸಿದ ಸತ್ಯ ವಿದ್ಯಾದಿಗಳು
ಶುದ್ಧ ವಿದ್ಯಾದಿಗಳು ಶುದ್ಧ ವಿದ್ಯಾತತ್ವ
ದೈವಲಿಂಗದಲಿಂತು ಮೂಲವಾಗಿಹುದು ಶರಣಾ ! ||೧೨||

ಸದಾಶಿವ ತತ್ವವು ತನ್ನ ಬಲರೂಪದಲಿ
ಸತ್ಯ ರೂಪಾಕಾರ ತಾನೆಲ್ಲ ಧರಿಸುತಲಿ
ಸತ್ಯ ನಿತ್ಯದುಗಮವೇ ದೈವಬಲ ಶರಣಾ ! ||೧೨||

ಸದಾಶಿವ ತತ್ವವು ತಾನರಳಿ ತೆರೆಯುತಲಿ
ತನ್ನ ಹೃದಯದಲಿರುವ ಅನ್ಯ ಶಕ್ತಿಯ ನಿಲಿಸಿ
ಬೆಳೆಸುವ ಮೂಲವೇ ಲಿಂಗಮೂಲ ಶರಣಾ ! ||೧೩||

ಹಾಲಿನೊಳಗಡಗಿರುವ ತುಪ್ಪದಾ ಬಲದಂತೆ
ಬೀಜದೊಳಗಡಗಿರುವ ವೃಕ್ಷದಾ ಬಲದಂತೆ
ದೇಹದೊಳು ಶಿವಲಿಂಗ ಗುಪ್ತವಿಹುದರಿ ಶರಣಾ ! ||೧೪||

ನವಿಲಿನಾ ಮೊಟ್ಟೆಯಲಿ ಒಂದೆ ರೂಪದ ರಸದಿ
ನವಿಲಿನಾ ಚೆಲುರೂಪ ಕರ್ಣ ಬಣ್ಣ ವೈಚಿತ್ರ್ಯ
ಶಕ್ತಿಯಿಂದಿರುವುದು ಶುದ್ಧ ವಿದ್ಯಾತತ್ವ ಶರಣಾ ! ||೧೫||

ಸಕಲ ಶಕ್ತಿಯ ತುಂಬಿ ಜೀವದಣು ಮೂಲವದು
ಎಲ್ಲ ವಿಧದಲಿ ಬೆಳೆವ ವಿಚಿತ್ರ ಶಕ್ತಿಯದು
ಮಾಯಾ ತತ್ವದ ಶಕ್ತಿ ಸತ್ಯವಿಹುದು ತಿಳಿ ಶರಣಾ ! ||೧೬||

ಶಿವಶಕ್ತಿ ಸದಾಶಿವ ಈಶ್ವರತತ್ವ ತತ್ವಗಳು
ಶುದ್ಧ ವಿದ್ಯಾ ತತ್ವ ಮಾಯಾದಿ ತತ್ವಗಳು
ಲಿಂಗ ಇಚ್ಛಾಶಕ್ತಿ ತತ್ವಗಳು ಶರಣಾ ! ||೧೭||

ಮಾನವನ ಮನ ಬಲಕೆ ಅರಿಯಲಾಗದ ತತ್ವ
ಮಾನವನ ಜ್ಞಾನದಲಿ ಧರಿಸಲಾಗದ ತತ್ವ
ಇದುವೆ ನಿಜ ಶಿವಲಿಂಗ ಮಾಯಾಶಕ್ತಿ ಶರಣಾ ! ||೧೮||

ಲಿಂಗಮಯ ಶಕ್ತಿಯಲಿ ಇಚ್ಛೆ ತತ್ವಗಳಾರು
ಮೂಲ ಜೀವಾಣುವಲಿ ಅದೃಶ್ಯ ತಾನಿಹುದು
ಲಿಂಗಪೂಜಾ ಜ್ಞಾನ ಬಲದಲರಿ ಶರಣಾ ! ||೧೯||

ಹಾಲನ್ನು ಕಂಡೊಡನೆ ತುಪ್ಪವಿಲ್ಲೆನಬಹುದೆ ?
ಬೀಜವನು ಕಂಡೊಡನೆ ವೃಕ್ಷವಿಲ್ಲೆನಬಹುದೆ ?
ಜಗವನ್ನು ಕಂಡೊಡನೆ ಶಕ್ತಿಯಿಲ್ಲೆನ್ನದಿರು ಶರಣಾ ! ||೨೦||

ವೈಚಿತ್ರ್ಯದೀ ಜಗಧ ಮೂಲ ಕಾರಣ ತತ್ವ
ಮನುಜ ಮತಿಗೆಟುಕದಿರೆ ಕಿರುಜ್ಞಾನ ತಾಳಿರುತ
ಮೂಲವನೆ ಇಲ್ಲವೆನ್ನುತಂಧನಾಗದಿರು ಶರಣಾ ! ||೨೧||

ಮಾನವನು ಜ್ಞಾನವು ಹಿರಿಯಾದರೇನಂತೆ ?
ಹಿರಿಶಕ್ತಿಯಾಧೀನ ಮಾನವನೆ ತಾನಿರಲು
ಆವ ಕಾಲದೊಳೇನು ಬದಲಿಸನು ಶರಣಾ ! ||೨೨||

ಹನ್ಮಿನೊಳು ಮೆರೆವವರ ಬಿನ್ಮಿನೊಳು ಅಲೆವವರ
ದೈವವೇ ಇಲ್ಲವೆಂದು ತಲೆಯೆತ್ತಿ ಅಲೆವವರ
ಸರ್ವ ನಾಶವ ಮಾಡಿ ತೋರುವುದು ಲೀಲೆ ಶರಣಾ ! ॥೨೩॥

ಅಭಿಮಾನ ತಾಳದಿರು ಹಿರಿಯು ನೀನೆನ್ನದಿರು
ಲಿಂಗ ಮಾಯೆಯು ಶಕ್ತಿ ನಿನ್ನ ತಲೆ ಮೇಲಿಹುದು
ಮರೆತದನು ಹನ್ಮಿನಲಿ ಬಾಳದಿರು ಶರಣಾ ! ॥೨೪॥

ಹಿರಿಯಾದ ಶಕ್ತಿ ನಿನ ತಲೆ ಮೇಲೆ ನಿಂತಿರಲು
ಆ ಶಕ್ತಿಯನು ದ್ವೇಷ ಮಾಡದಿರು ಬಾಳಿನಲಿ
ಶಕ್ತಿ ದ್ವೇಷದ ಕ್ಷಣದಿ ನೀನಿಲ್ಲ ಶರಣಾ ! ॥೨೫॥

ಸಕಲ ಸುಖ ಶಾಂತಿಗೂ ಸಕಲ ಆನಂದಕೂ
ಸತ್ಯವಿಹ ಹಿರಿದೈವ ಶಿವಲಿಂಗ ನಿಜದಿ ತಿಳಿ
ಲಿಂಗ ಪೂಜಾ ಬಲದಿ ಬಲ ಧರಿಸು ಶರಣಾ ! ॥೨೬॥

ಅಧಮರು ನುಡಿವಂತೆ ನುಡಿದಾಡಿಕೊಳ್ಳದಿರು
ಪಾಪಿಗಳು ನಡೆವಂತೆ ನಡೆದಾಡಿಕೊಳ್ಳದಿರು
ಶರಣ ಶಾಂತಿಯ ಲಿಂಗ ಮರೆಯದಿರು ಶರಣಾ ! ॥೨೭॥



೧೧

ದೈವ ಭಜನೆಯೇಕೆ ?

ಪಾಪಿಗಳು ಪಾಮರರು ದೈವವನ್ನರಿಯರು
ಅಧರ್ಮಿಗಳ ವಾದಕ್ಕೆ ನೀ ಬೆಲೆಯು ಕೊಡದೆಂದು
ಸತ್ಯ ದೈವದ ಜ್ಞಾನವೊಂದಕೇ ಮಣಿ ಶರಣಾ ! ||೧||

ದೈವ ಲೀಲೆಯು ಲಿಂತು ಹಿರಿಮೂಲ ಬಲವಾದ
ದೈವ ಕರುಣಾ ಪ್ರೀತಿ ದೈವದಾಧೀನವಿರೆ
ದೈವವೇ ತನ ಬಲದಿ ರಕ್ಷಿಪುದು ಶರಣಾ ! ||೨||

ಮಾನವನ ಸೃಷ್ಟಿಸಿ ಮಾನವನ ಬೆಳೆಸುತಲಿ
ಮಾನವಗೆ ಬಲು ಬುದ್ಧಿ ಜ್ಞಾನ ಶಾಂತಿಯನೀವ
ಮೂಲ ಶಕ್ತಿಯೆಂದೆಂದು ಅದೃಶ್ಯವಿದೆ ಶರಣಾ ! ||೩||

ಧರ್ಮಮಾರ್ಗವನರಿತು ಧರ್ಮಿಯಾಗಿರಬಯಸಿ
ಧರ್ಮ ದೈವದ ಬಲದ ಹಿರಿಮಾರ್ಗ ಅನುಸರಿಸೆ
ದೈವಬಲ ಶಕ್ತಿಯನೆ ಧರಿಸುವನು ಶರಣಾ ! ||೪||

ಕಾಣದಾ ನಿಜದೈವ ಮಹಾಮಾಯಾ ಶಕ್ತಿ
ಕಾಣದಿರಲೇನಂತೆ? ದೈವವಿಲ್ಲವೆನದಿರು
ದೈವವೇ ಜಗಕಾಯ್ತು ಹಿರಿ ಮಾಯೆ ಶರಣಾ ! ||೫||

ಜ್ಞಾನ ಮತಿ ಬಲಗಳಿಗೆ ಮೀರಿರುವ ಮಾಯೆಯನು
ಮಾನವೀ ಶಕ್ತಿಗೆ ಅರಿತುಕೊಳಲಾಗದು
ಅದನರಿತು ಬಾಳದಿರೆ ಎಂತಯ್ಯ ಶರಣಾ ! ||೬||

ಜಗವೆಲ್ಲ ಸತ್ಯ ದೈವೀ ಮಾಯೆಯಿರುವನಕ
ಜ್ಞಾನ ಬಲ ಬುದ್ಧಿಗಳ ಮೀರಿರುವ ಈ ಮಾಯೆ
ದೂರವಾಗಲು ವಿಶ್ವವೆಲ್ಲ ಮಿಥ್ಯ ಶರಣಾ ! ||೭||

ದೈವಮಾಯೆಗೆ ತಾನು ಅಲ್ಪ ದೂರವಾಗಲು
ಮಾನವನು ಬಾಳಿನಲಿ ಸೃಜಿಸಿದೀ ಸಂತೋಷ
ಎಷ್ಟಿದ್ದರೇನಂತೆ? ತಾ ಹುಚ್ಚು ಶರಣಾ ! ||೮||

ಹಮ್ಮಿನಲಿ ತಾನೆಂದು ಬಿಮ್ಮಿನಲಿ ತಾ ಕಟ್ಟ
ರಾಜಾಧಿರಾಜರೊಲು ಮೆರೆವೆನಿತೊ ಜನಕೋಟಿ
ಮಾಯೆಬಲ ದೂರವಾಗಲೆಲ್ಲಿಹರು ಶರಣಾ ! ||೯||

ರಾಜಾಧಿರಾಜರು ಬಲು ಹೆಮ್ಮೆ ಪಟ್ಟವರು
ಜಗದಲ್ಲೆ ಹಿರಿಯೆಂದು ಮೆರೆದಿರ್ದ ಜೀವಿಗಳು
ಯಾರಿಂದು ಉಳಿದಿಹರು ಭವಜಗದಿ ಶರಣಾ ?! ||೧೦||

ಜಗಕಟ್ಟಿ ಆಳಿರುವ ಬಲುಶಕ್ತ ಜೀವಿಗಳು
ತಮ್ಮ ಜೀವವ ಕಟ್ಟಿ ಶಾಶ್ವತದಿ ಆಳಿಹರೆ ?
ಎಷ್ಟು ಆಳಿದರೇನು ? ದೈವಾಧೀನವು ಶರಣಾ ! ॥೧೧॥

ಆಳಾಗಿ ತಾ ಬಂದು ಅರಸಾಗಿ ತಾ ಮೆರೆದು
ತಾ ಬಂದ ಆಳುತನ ಅಜ್ಞಾನದಿಂ ಮರೆತು
ಅರಸಾಗಲು ಹೋಗಿ ಅರಿಯಡಲಿ ಮಡಿವರು ಶರಣಾ ! ॥೧೨॥

ಹುಟ್ಟುವಾ ಮುನ್ನ ತಾವೆಲ್ಲಿದ್ದರರಿತಿಹರೆ ?
ಮಡಿದ ಮೇಲೆಲ್ಲಿಹರು ? ಏನೊಂದನರಿಯರು
ಎಲ್ಲಿಂದ ಜನಿಸಿ ತಾವೆಲ್ಲಿ ಹೋಗುವರು ಶರಣಾ ? ॥೧೩॥

ದೈವ ತಾನಧಿಕಾರಿ ಎಲ್ಲಿಂದಲೋ ಬಂದು
ಎಲ್ಲೋ ಹೋಗುವವರನು ಬಲದಿಂದ ಹಿಡಿದಿರಲು
ಮಧ್ಯೆ ಮಾಡುವುದೆಂತು ಸತ್ಯವಿರಬಲ್ಲದು ಶರಣಾ ? ! ॥೧೪॥

ಮಧ್ಯೆ ಪಡೆದಿಹ ಕಾಯ ಬಿಟ್ಟುಹೋಗುವ ಮಾಯ
ಕಟ್ಟನಿಂ ನಿಲ್ಲುತಲಿ ಗಟ್ಟಿಯೆಂದರಿತರೂ
ಕೊನೆಗೆ ನೀ ಕಟ್ಟಿಹುದು ಯಾರಿಗೆ ಶರಣಾ ? ! ॥೧೫॥

ಜಗವೆಲ್ಲ ನಲಿದಾಡಿ ಜೀವನದಿ ತಣಿಯಲು
ಜಗದ ಬಾಳಿನ ಸಕಲ ಸುಖದ ಸೌಂದರ್ಯವಿರೆ
ಸಕಲಕ್ಕು ಅಧಿಕಾರಿ ದೈವವೊಂದೇ ಶರಣಾ ! ॥೧೬॥

ದೈವಲೀಲಾ ಜಗದಿ ದೈವಸೂತ್ರದ ಬಲದಿ
ದೈವದಾಧೀನದಲಿ ದೈವವೇ ಆಳುತಿರೆ
ನಿನಗಧೀನವೆಂಬುದು ಏನಿಹುದು ಶರಣಾ? ! ||೧೭||

ಮಾನವನ ಕಾಯದಲಿ ನೀನೆಂತು ಬಂದಿರುವೆ ?
ನೀನಲ್ಲಿ ನಡೆಯೆಂದು ಯಾರು ನಿನ ಕಳಿಸಿಹರು ?
ಸಕಲಕೂ ಮೂಲ ಬಲ ಆವುದೆಂಬುದ ತಿಳಿ ಶರಣಾ ! ||೧೮||

ದೈವವೇ ಕಳಿಸಿಹುದು ನಿಜದೈವವರಿಯೆಂದು
ಸಕಲ ಬಲ ತಾನಿತ್ತು ತನ್ನ ಗುಣವರಿಯೆಂದು
ದೈವ ಕಳಿಸಿಹ ಕಾರ್ಯ ಮರೆಯದಿರು ಶರಣಾ ! ||೧೯||

ಪಡೆದಿಟ್ಟ ಸಕಲವನು ದೈವಬಲವರಿತಿಹುದು
ದೈವಬಲವರಿಯದೇ ನಿನ್ನಲ್ಲಿ ನೀ ಮೆರೆಯೆ.
ದೈವ ಕುರುಡಾಗಿಲ್ಲ ಎಚ್ಚರಿರು ಶರಣಾ ! ||೨೦||

ನೂರಾರು ಬಗೆಯಲ್ಲಿ ಸಕಲ ತಾಪವನಿತ್ತು
ದೈವವೇ ಮೂಲವೆಂದೊಂದು ದಿನ ಅರುಹುವುದು
ದೈವವರುಹುವ ಮುನ್ನ ಶರಣಾಗು ಶರಣಾ ! ||೨೧||

ದೈವದಾ ಮೂಲದಲಿ ಭಯವಿರದ ಜೀವಿಗಳು
ಜೀವನದ ಯಾತ್ರೆಯಲಿ ಸುಖವಲ್ಪ ಪಡೆಯರು
ದುಃಖವೇ ಸುಖವೆಂದು ಸವಿಯುವರು ಶರಣಾ ! ||೨೨||

ಕೊಟ್ಟ ಸಂಪತ್ತಿರಲು ಪಟ್ಟ ಸಂಪತ್ತಿಲ್ಲ
ಕೊಟ್ಟ ಸಂಪತ್ತೆಲ್ಲ ಪಟ್ಟ ಸಂಪತ್ತೆಂದು
ಪಟ್ಟಾಗಿ ಮೆರೆವವರ ಸೊತ್ತ್ಯಾರದು ಶರಣಾ ?! ||೧೩||

ಸತಿ ಸುತ ಬಾಂಧವರು ಕನಕ ಸಂಪದವೆಲ್ಲ
ಕೊಟ್ಟ ಸಂಪದವಲ್ಲದೆ ಪಟ್ಟ ಸಂಪದವಲ್ಲ
ಕೊಟ್ಟ ಸಂಪದವೆಲ್ಲ ಕೊಟ್ಟವನದು ಶರಣಾ ! ||೧೪||

ದೈವ ನೀಡಿದ ಸಿರಿಯು ದೈವವೇ ಕೊಳ್ಳುವುದು
ದೈವ ಕೊಳ್ಳುವ ಸಿರಿಯು ನಿನದೆಂದು ಪಿಡಿದರೆ
ನಿನದನ್ನು ನಿನ್ನನ್ನು ಬಿಡದೊಯ್ಯುವುದು ಶರಣಾ ! ||೧೫||

ದೈವದಾ ಸಂಪದವು ದೈವವರಿಯಲು ಬಲವು
ದೈವವನ್ನರಿಯದೇ ಸೊಕ್ಕಿನಿಂದಲಿ ಬಾಳೆ
ದೈವ ನಿನ ಸೊತ್ತೆಲ್ಲ ಕಳೆಯುವುದು ಶರಣಾ ! ||೧೬||

ದೈವ ನೀಡುವ ಸಿರಿಯು ಜೀವನಿಗೆ ಬರೆದಿಹುದು
ಸರಿಯಾಗಿ ಅರಿಯದಲಿ ಮರಳಿ ಪಡೆವೆನೆನದಿರು
ದೈವಲಿಪಿ ಬದಲಿಸದು ಮರೆಯದಿರು ಶರಣಾ ! ||೧೭||

ದೈವ ಸಂಪದವಿದನು ನಿಷ್ಠೆಯಲಿ ಭೋಗಿಸುತ
ದೈವವನು ಭಕ್ತಿಯಿಂ ಭಜಿಸಲದೆ ಸಂಪತ್ತು
ಬಾಳಲದೆ ಪರಮ ಸುಖ ಭಜಿಸುತಿರು ಶರಣಾ ! ||೧೮||

ಸಕಲ ಸಂಪದವೆಲ್ಲ ದೈವ ಭಜಿಸಲು ಮೂಲ
ದೈವವಸರಿಯುಲಿತ್ತ ಸಂಪದವ ಭೋಗಿಸುತ
ಸಂಪದದಿ ಸತ್ಯವರಿ ಶರಣಾಗಿ ಶರಣಾ ! ||೨೯||

ಕೃಪೆಯಿಂದ ದೈವ ತಾ ಕರುಣಿಸಿದ ಸಂಪತ್ತು
ನಿನದೆಂದು ಪನ್ಮಿಸಲಿ ಅಧಿಕಾರ ನಡೆಸದಿರು
ನೀನಾರು ? ನಿನದೇನು ? ಎಂಬುದರಿ ಶರಣಾ ! ||೩೦||

ನಿನದೆಂದು ನುಡಿದರೇ ತನದೆಂದು ಪಡೆಯುವುದು
ತನಗಾಗಿ ತಾ ಪಡೆದು ನಿನಗಿಲ್ಲದಾಗಿಪುದು
ದೈವದಾ ಹಿರಿ ಬಲಕೆ ದಾಸನಿರು ಶರಣಾ ! ||೩೧||

ಅಧಿಕಾರ ಅಭಿಮಾನ ಹೆಮ್ಮೆಯಲಿ ಮೆರೆಯುತಲಿ
ಪ್ರತಿದಿನದ ಪ್ರತಿ ನಿಮಿಷ ಬಾಳಲಿ ಮರೆತು ಕಳೆಯೆ
ದೈವ ತಾ ಕುರುಡಲ್ಲ ಮರೆಯದಿರು ಶರಣಾ ! ||೩೨||

ಅನಂತ ಜೀವಿಗಳ ಅಮಿತ ದುಃಖವನರಿತು
ಸಕಲರಿಗು ದುಃಖವನೆ ನೀಡೊ ಕಾರಣವರಿತು
ನಿನ್ನ ಜೀವನವೇನು ಎಂಬುದರಿ ಶರಣಾ ! ||೩೩||

ಪಡೆದ ವಿಧ ವಿಧ ಭಾಗ್ಯ ನಿನ್ನದೆಂದೆನಿಸುತಲಿ
ಹೆಣ್ಣು ಹಣ ಹೊನ್ನು ನಿನ್ನದೆಂದರಿತರೇ
ನಿನಗಿರದೆ ತನದೆಂದು ತೋರುವುದು ಶರಣಾ ! ||೩೪||

ಕೋಪ ತಾಪಾದಿಗಳು ದುಃಖ ದಾರಿದ್ರ್ಯಗಳು
ನಿಸದೆಂದು ನಿನಗೆಂದು ನೆನದಲ್ಲಿ ಬೆಳೆಯುವುವು
ದುಃಖವಿಲ್ಲದ ಶಾಂತಿ ಬಾಳ ನಡೆಸು ಶರಣಾ ! ||೩೫||

ನೂರೊಂದು ಮಾಡಿದರು ನೂರೊಂದು ಕಟ್ಟಿದರು
ಕೆಲವಲ್ಪ ಮಾಡದಲೆ ಕಟ್ಟಿಡಲು ಬರದಿಹವು
ನೂರೊಂದಕೆಲ್ಲದಕು ಕೆಲ ಮೂಲವಿದೆ ಶರಣಾ ! ||೩೬||

ಬಾಳಿಸಲಿ ವಿಧಿನಿಯಮವನುಸರಿಸಿ ದೊರೆಯುವುವು
ಸುಕೃತ ಸೌಭಾಗ್ಯಗಳು ಆರೋಗ್ಯ ಶಾಂತಿಗಳು
ಅರಿದಸು ಪಡೆಯಲು ಸಾಧ್ಯವಿಹುದು ಶರಣಾ? ! ||೩೭||

ಸುಕೃತಪ ಬಲವಿರದೆ ಆರೋಗ್ಯ ಸಿರಿಯಿರದೆ
ಪ್ರಾಣ ತ್ರಾಣಗಳಿರದೆ ಏನಿದ್ದರೇನಿಹುದು ?
ಸಕಲವಿದ್ದರು ಶೂನ್ಯವೆನಿಸುವುದು ಶರಣಾ ! ||೩೮||

ಸಕಲ ಸುಖವನುಭವಿಸೆ ದೈವಕೃಪೆಯೇ ಬೇಕು
ದೈವ ಕೃಪೆಯಿಲ್ಲದಿರೆ ಬಾಳೆಲ್ಲ ದುಃಖಮಯ
ಸುಖ ಬಾಳು ಮೂಲವೇ ದೈವಕೃಪೆ ಶರಣಾ ! ||೩೯||

ಅಂಧರೂ ಅಧಮರೂ ಶಾಂತಿಯಿಲ್ಲದ ಜನರು
ದೈವಕೃಪೆಯಿರದವರು ದೈವದ್ರೋಹದ ಜನರು
ಸುಖಲೋಕ ಭಾಗ್ಯವಿರೆ ದುಃಖಿಪರು ಶರಣಾ ! ||೪೦||

ಶಾಂತಿ ಸುಖವೆನ್ನುವುದು ದೈವಕರುಣೆಯ ಸೊತ್ತು
ದೈವಬಲ ಸಿರಿಯಲ್ಪವಿಲ್ಲದಾ ಜೀವಿಗಳು
ದೈವವನ್ನರಿಯದೇ ದುಃಖಿಪರು ಶರಣಾ ! ||೪೧

ಸತಿ ಪುತ್ರರಿದ್ದಲ್ಲ ಸೊತ್ತು ಸಂಪದವಿದ್ದು
ನಾಡಿನಾ ಅಧಿಕಾರ ಹಿರಿನಾಮ ಬಲವಿದ್ದು
ಶಾಂತಿ ಸುಖವಿರದವರು ಬಹಳುಂಟು ಶರಣಾ ! |೪೨

ಜಗ ಭಾಗ್ಯವಿನಿತಿರದೆ ಬಿಡಿಕಾಸು ಕೈಗಿರದೆ
ಎಲ್ಲರಿಗು ಕಡೆಯಾಗಿ ದೈವಕರುಣೆಯಿರುವವರು
ಸುಖ ಶಾಂತಿ ಸಾಗರದಿ ಮುಳುಗಿದವರುಂಟು ಶರಣಾ ! ||೪೩

ಲೋಕ ಸಿರಿಯಿದ್ದರೇನಿರದಿದ್ದರೇನಂತೆ ?
ಶಾಂತಿ ಸುಖ ಬಾಳನ್ನು, ನಡೆಸಿ ಬಾಳಿರೆ ನಿಜದಿ
ಲೋಕವೇ ಶಿರಬಾಗಿ ಮಣಿಯುವುದು ಶರಣಾ ! ||೪೪

ದೈವವಾಡಿಸಲೀಯೆ ಲೋಕದಾ ದುಃಖಗಳು
ದೈವಕರುಣೆಯು ತನಗೆ ದೂರವಾಗಿಹುದೆನಿಸೆ
ದೈವವನು ಭಜಿಸುತಲಿ ಕರುಣೆ ಪಡೆ ಶರಣಾ ! ||೪೫

ನೀನಾರು ನೀನೆಲ್ಲಿ ನೀನೇಕೆ ಎಂಬುದನು
ಅರಿಯದಲಿ ಅಂಧನೊಲು ಅಲೆದಾಡಿಮ್ಮೈಮರೆಯೆ
ಎಲ್ಲುಳಿಯಬಲ್ಲೆ ನೀನೆಂಬುದರಿ ಶರಣಾ ! ||೪೬

ನಿನ್ನ ಬಾಳಿನ ಮೂಲ ನೀನರಿಯದಾವರೆಗೆ
ಲೆಕ್ಕವಿರದನಿತು ಸಲ ಹುಟ್ಟು ಸಾವನು ಹೊಂದಿ
ಬಂಧನದ ದುಃಖವನನುಭವಿಸುವೆ ಶರಣಾ ! ॥೪೭॥

ಜನಿಸಿ ಜನಿಸಿ ಪಡುತಿಹ ಸುಖ ದುಃಖ ತಾಪಗಳ
ಕಾರಣವ ಯೋಚಿಸುತ ಕರ್ಮಗುಣವರಿಯುತಲಿ
ಬಾಳಿನಾ ನಿಜಸುಖವ ಕಂಡರಿಯಲರಿ ಶರಣಾ ॥೪೮॥

ಸುಕೃತವಿಲ್ಲದ ಬಾಳು ದುಸ್ಸಂಗದಿಹ ಬಾಳು
ಸುಖ ಶಾಂತಿ ಸಂಗವನು ಪಡೆಯಬಲ್ಲುದೆ ಭವದಿ ?
ಸುಖಶಾಂತಿಗೆ ದೈವಮೂಲವಿಹುದರಿ ಶರಣಾ ! ॥೪೯॥

ಸಕಲ ಸಂಪದೊಡನೆ ಲೋಕ ಸಂಪದ ಕೂಡಿ
ಲೋಕ ಸಿರಿಯೂ ಸುಕೃತವೆನುವಂತೆ ನೀನಾಗು
ಸುಕೃತ ಜೀವನ ನಡೆಸಿ ಶಾಂತದಿರು ಶರಣಾ ! ॥೫೦॥

ದೈವ ಸಾಧನಕಾಗಿ ಲಿಂಗ ಪೂಜೆಯ ಪಿಡಿದು
ಮನುಜ ಜೀವನವರಿತು ದೈವವನು ದರ್ಶಿಸು
ದೈವದಾ ಶಿವಲಿಂಗ ಬಲವಾಗು ಶರಣಾ ! ॥೫೧॥

ಅಜ್ಞಾನವಳಿಯದಲೆ ಸುಜ್ಞಾನವಿರದಲ್ಲಿ
ಅಜ್ಞಾನಕೆಡೆಗೊಡದೆ ಸುಜ್ಞಾನ ಮನ ಪಡೆದು
ಸುಗುಣದಲಿ ಸುಖಬಾಳ ಭಾಗ್ಯ ಪಡೆ ಶರಣಾ ! ॥೫೨॥

೧೨

ಲಿಂಗ ಪೂಜಾ ಜ್ಞಾನ

ಲಿಂಗವೆಂದರೆ ಏನು ? ಲಿಂಗ ಪೂಜೆಯು ಏಕೆ ?
ಲಿಂಗ ಜ್ಞಾನವದೇನು ? ಲಿಂಗದಲಿ ಲಯವೇನು ?
ಲಿಂಗ ಮರ್ಮವನರಿತು ಲಿಂಗದಲಿ ಲಯವಾಗು ಶರಣಾ ! ॥೧॥

ಲಿಂಗದಿಂದುದ್ಭವವು ಅಖಿಲಾಂಡ ಬ್ರಹ್ಮಾಂಡ
ಲಿಂಗ ಕಾರಣದಿಂದ ಕೋಟಿ ರೂಪದಿ ಬೆಳೆದ
ಜಗದೆಲ್ಲ ರೂಪವನು ಪೂಜಿಸು ಶರಣಾ ! ॥೨॥

ಸಕಲ ಜಗವುದ್ಭವಿಪ ಮಾಯಾಣು ಶಕ್ತಿಯಲಿ
ಅಗೋಚರ ತಾನಿದ್ದು ಜಗವೆಲ್ಲ ಬೆಳೆಸಿಹುದು
ಸಕಲ ಜಗ ಕಾರಣವು ಲಿಂಗದಣು ಶರಣಾ ! ॥೩॥

ಲಿಂಗದಿಂದುದಯಿಸಿದ ಜಗವೆಲ್ಲ ಲಿಂಗಾಂಶ
ಲಿಂಗಾಂಶ ಶಕ್ತಿಯದು ಬ್ರಹ್ಮಾಂಡ ವ್ಯಾಪಕವು
ಭುವನಗಳ ಸೂಕ್ಷ್ಮದಲಿ ಲಿಂಗಮಯ ಶರಣಾ ! ॥೪॥

ಲಿಂಗ ರೂಪವೆ ಜಗವು ಜಗರೂಪವೇ ಲಿಂಗ
ನೂರಾರು ಗುಣದಿಂದ ಜಗವೆಲ್ಲ ಬೆಳೆದಿಹುದು
ಸಕಲವನು ಬೆಳೆಸಿಹುದು ಲಿಂಗತತ್ವವು ಶರಣಾ ! ||೫||

ಲಿಂಗ ತತ್ವವನರಿತು ಲಿಂಗತತ್ವವ ಭಜಿಸಿ
ಲಿಂಗದುದ್ಭವ ಜಗವ ಲಿಂಗವೆಂದರಿಯುತಲಿ
ಲಿಂಗ ಜಗತತ್ವಗಳ ಪೂಜಿಸು ಶರಣಾ ! ||೬||

ಲಿಂಗದಲ್ಪಾಕಾರ ಶಿಲೆಯೆಂದು ಜರೆಯದಿರು
ಲಿಂಗಮಯ ಜಗತತ್ವದರಿವೆ ಲಿಂಗದ ಜ್ಞಾನ
ತತ್ವ ಜ್ಞಾನವದೆಲ್ಲ ಲಿಂಗ ಜ್ಞಾನವು ಶರಣಾ ! ||೭||

ಕರಲಿಂಗವೆಂದರಿತು ಕಿರಿ ಪೂಜೆ ಮಾಡದಿರು
ನಿತ್ಯ ಪೂಜಿಪ ಲಿಂಗ ಕರದಿ ತೂಗುವ ಲಿಂಗ
ಜಗ ವ್ಯಾಪಿಸಿಹ ತತ್ವ ನಿಜ ತತ್ವವು ಶರಣಾ ! ||೮||

ಲಿಂಗ ಪೂಜಿಪರೆಲ್ಲ ವಿಶ್ವವನೆ ಪೂಜಿಪರು
ಜಗವೇ ಲಿಂಗವೆಂದು ಪ್ರೇಮದಿಂ ಬಾಳುವರು
ಲಿಂಗ ಪೂಜೆಯೆಂಬುದೆ ಜಗ ಪೂಜೆ ಶರಣಾ ! ||೯||

ಜಗವೆಲ್ಲ ಲಿಂಗದಲಿ ಕಾಣಲದು ಕರಲಿಂಗ
ಜಗ ಗುಣವ ಲಿಂಗದಲಿ ಅರಿಯಲದು ಗುಣಲಿಂಗ
ಲಿಂಗದಲಿ ಲಿಂಗವಾಗೆ ಲಿಂಗಲಯ ಶರಣಾ ! ||೧೦||

ಕರದಲ್ಲಿ ಪೂಜಿಸಲು ತತ್ವ ಜ್ಞಾನದ ಲಿಂಗ
ಜ್ಞಾನದಲಿ ಪೂಜಿಸಲು ತತ್ವಜ್ಞಾನದ ಲಿಂಗ
ಲಿಂಗದಲಿ ಲಯಿಸುವ ಯೋಗವೇ ಪ್ರಾಣಲಯ ಶರಣಾ ! ||೧೧||

ಅಲ್ಪ ಜ್ಞಾನದಿ ಮೆರೆದು ಲಿಂಗ ಪೂಜಿಸಬೇಡ
ಲಿಂಗದೆಲಿ ಅಡಗಿರುವ ದಶಮೂರು ಮೇಲಾರು
ತತ್ವಗಳ ಅರಿಯುತಲಿ ಪೂಜಿಸು ಶರಣಾ ! ||೧೨||

ಲಿಂಗದಲಿ ಪೂಜೆಯೇ ಜಗದಲ್ಲಿ ಮಮತೆಯು
ಲಿಂಗಮಯ ಜ್ಞಾನವೇ ಜಗದಲ್ಲಿ ಹಿರಿಜ್ಞಾನ
ಲಿಂಗದಲಿ ಲಯಿಸಿರೆ ಅವರೆಲ್ಲ ಲಿಂಗವೇ ಶರಣಾ ! ||೧೩||

ಲಿಂಗ ಜ್ಞಾನದ ಪೂಜೆ ಸರ್ವಜ್ಞತೆಯ ಕಡಲು
ಲಿಂಗ ಪೂಜಕ ಭಕ್ತ ಮಮತೆಯಾ ಸಾಗರವು
ಕಾಮ ಮತ್ಸರವಿರದ ಜಗಮಾನ್ಯ ಶರಣಾ ! ||೧೪||

ಸಕಲದರ ಬಲವರಿತು ಸಕಲವೂ ಬಲವಾಗಿ
ಸಕಲ ಜಗ ಬಲದಲ್ಲಿ ತಾ ಹಿರಿಯ ಜ್ಞಾನಿಯಿರೆ
ತಾನೆಂತು ಜಗತತ್ವ ದ್ವೇಷಿಪನು ಶರಣಾ ?! ||೧೫||

ಲಿಂಗದಲಿ ಪ್ರೀತಿಯಿರೆ ಜಗದಲ್ಲಿ ಅದೆ ಪ್ರೀತಿ
ಲಿಂಗದಲಿ ನಿಷ್ಠೆಯಿರೆ ಜಗದಲ್ಲಿ ಅದೆ ನಿಷ್ಠೆ
ಲಿಂಗದಲಿ ಶಾಂತಿಯಿರೆ ಜಗದೊಳಗು ಅದೆ ಶಾಂತಿ ಶರಣಾ ! ||೧೬||

ಲಿಂಗ ನಿಜ ಪೂಜಕರ ಭವ ಬಾಳಿ ಉತ್ತಮವು
ಲಿಂಗದಲಿ ಯೋಗವು ಜೀವನದೊಳುತ್ತಮವು
ಲಿಂಗದಲಿ ಲಯವೇ ಜೀವೈಕ್ಯ ಶರಣಾ! ॥೧೭॥

ಲಿಂಗದಲಿ ಐಕ್ಯವಾಗುತ ಲಿಂಗವಾದವರು
ಆದೃಶ್ಯ ದೇಹಿಗಳು ಜಗದಲ್ಲಿ ಅಮರರು
ಸಕಲ ಯುಗಯುಗದಲ್ಲಿ ಶಾಶ್ವತರು ಶರಣಾ! ॥೧೮॥



೧೩

ಲಿಂಗ ಧರಿಸಿ ಆರಾಧಿಸು

ಪಂಚಸೂತ್ರವಗೂಡಿ ನಿರ್ಮಿಸಿದ ಲಿಂಗದಲಿ
ಪಂಚಾಕ್ಷರೀ ಮಂತ್ರದಿಂ ಗುರುವು ಶುದ್ಧಿಸಲು
ಶಾಸ್ತ್ರವಿಧಿಗನುಸಾರ ಶುದ್ಧಿ ಸಾರಾಧಿಸು ಶರಣಾ ! ||೧||

ಗುರುವಿತ್ತ ಲಿಂಗವನು ದೈವವೆಂದರಿಯುತಲಿ
ದೈವಕರ್ಪಣಭಕ್ತಿ ಭಾವ ನಂಬಿಕೆಯಿಡುತ
ಶಿವರೂಪಿ ದೈವವೇ ಲಿಂಗವರಿ ಶರಣಾ ! ||೨||

ಪಂಚಸೂತ್ರದ ಲಿಂಗ ಬಹು ಕಾಲ ಬಾಳಲು
ವಜ್ರದಂತೆ ಹೊಳೆಯಲು ವಜ್ರಕಾಂತಿಯನಿರಿಸಿ
ವಜ್ರಕಾಂತಿಯ ಲಿಂಗ ನಿರ್ಮಿಸು ಶರಣಾ ! ||೩||

ವಜ್ರಕಾಂತಿಯ ಲಿಂಗವನು ನಿತ್ಯ ತೊಳೆಯುತಿರೆ
ತೇಜದಲಿ ಹೊಳೆಯುವುದು ಕರದೊಳದ ಪೂಜಿಸು
ನಿತ್ಯ ಪೂಜಿಸಲು ಲಿಂಗ ಧರಿಸು ನೀ ಶರಣಾ ! ||೪||

ದೇಹ ಬಿಟ್ಟಗಲದಲಿ ಸದಾ ನಿನ್ನೊಡನಿರಲು
ದೇಹ ನೋಯದ ತೆರದಿ ಕರದಲ್ಲಿ ಶಿರದಲ್ಲಿ
ಹಸ್ತದಲಿ ಬಂಧಿಸುತ ಎಚ್ಚರಿರು ಶರಣಾ ! ॥೫॥

ಲಿಂಗ ನಿನ ಹಸ್ತದಲಿ ಲಿಂಗ ನಿನ ದೇಹದಲಿ
ಲಿಂಗ ನಿನ ಸಂಗದಲಿ ದೈವವೇ ತಾನಾಗಿ
ಅನುದಿನವು ಅನುಕ್ಷಣವು ಕಾಪಿಡುವುದು ಶರಣಾ ! ॥೬॥

ಸಕಲಕೂ ಹಿರಿ ಶಕ್ತಿ ಶಕ್ತಿಮಯ ಶಿವಲಿಂಗ
ನನ್ನೊಳಗು ನಿನ್ನೊಳಗು ಸ್ನೇಹದಿಂದಿರುತಿರಲು
ಈ ಕ್ರಿಯಾಲಿಂಗವನು ಸಲಹುತಿರು ಶರಣಾ ! ॥೭॥

ಮನದಲ್ಲಿ ಭಯಪಿರಲಿ ಹೃದಯದಿ ಕರುಣೆಯಿರಲಿ
ದೈವ ದೇಹದಲಿರಲಿ ಸುಮನ ತಾ ನೆಲೆಸುವುದು
ಭಕ್ತಿಯಿಂ ಲಿಂಗವನು ದೇಹದಲಿ ಕಾಪಾಡು ಶರಣಾ ! ॥೮॥

ಲಿಂಗ ದೇಹದಲಿರಲು ದುರ್ಮನವ ತಾಳದಿರು
ದುರ್ಭಾವ ದುಷ್ಕ್ರಿಯೆಗಳಲ್ಪವನು ಮಾಡದಿರು
ಲಿಂಗ ನಿನ್ನಂಗದಲಿ ಸಾಕ್ಷಿಯಿಹುದರಿ ಶರಣಾ ! ॥೯॥

ಹಿರಿಶಕ್ತಿ ಪರದೈವ ಪಾವನಲಿಂಗವೆಂದು
ಲಿಂಗ ದೀಕ್ಷೆಯ ಪಡೆದು ಅಂಗದಲಿ ಧರಿಸಿರಲು
ಎಚ್ಚರದಿ ಬಾಳದಿರೆ ನರಕವದು ಶರಣಾ ! ॥೧೦॥

ಲಿಂಗವೆಂಬೀ ದೈವವನು ಧರಿಸಿ ದೇಹದಲಿ
ಅವಿವೇಕ ನಡೆನುಡಿಗಳಿಂದಲ್ಪ ಜಾರಿದರೆ
ಪರದೈವ ಲಿಂಗವದು ಕುಪಿಸುವುದು ಶರಣಾ ! ॥೧೧॥

ಲಿಂಗ ಅಂಗದಲಿರಲು ಶರಣಭಾವದಿ ಬಾಳು
ಲಿಂಗ ದೀಕ್ಷೆಯು ಬಳಿಕ ಬೇರೇನು ಬಯಸದೇ
ಲಿಂಗವೇ ಪ್ರಾಣವೆಂದರಿತು ಬಾಳುತಿರು ಶರಣಾ ! ॥೧೨॥

ಪರರ ಧನ ಧಾನ್ಯ ಸಿರಿ ನರಕವೆಂದೆಚ್ಚರಿರು
ಪರಸ್ತ್ರೀ ಪರವಸ್ತು ಅಗ್ನಿಯೆಂದರಿಯುತಲಿ
ಪರಸೊತ್ತಿಗಾಶಿಸದೆ ಬಾಳುತಿರು ಶರಣಾ ! ॥೧೩॥

ಪಾವನದ ಲಿಂಗವನು ಪ್ರೀತಿಯಿಂ ಪೂಜಿಸುತ
ಪಾಪಕೂಪದ ಮನವು ಅರೆ ನಿಮಿಷ ಚಲಿಸದಿರೆ
ಸುಗುಣ ಸದ್ಬುದ್ಧಿಗಳು ಬೆಳೆಯುವುವು ಶರಣಾ ! ॥೧೪॥

ಹಿರಿಯಾದ ವರಶಕ್ತಿ ಶಿವಲಿಂಗ ದೀಕ್ಷೆಯಲಿ
ನಡೆನುಡಿಗಳೊಂದಾಗಿ ಕಾರ್ಯಗಳ ಮಾಡಲರಿ
ನಡೆ ನುಡಿ ತಪ್ಪಿದೊಡೆ ನರಕವದು ಶರಣಾ ! ॥೧೫॥

ಶಿವನಾಮ ನುಡಿಯುವ ನಾಲಿಗೆ ಶುದ್ಧವಿರಲಿ
ಶಿವಲಿಂಗ ಪೂಜಿಸುವ ಕರಗಳು ಶುದ್ಧವಿರಲಿ
ಶಿವಲಿಂಗ ಕಾಣುವ ಶುದ್ಧ ಕಂಗಳಿರಲಿ ಶರಣಾ ॥೧೬॥

ಶಿವಲಿಂಗ ಧ್ಯಾನಿಸುವ ಮನವು ಶುದ್ಧವಿರಲಿ
ಶಿವಲಿಂಗ ಪ್ರೀತಿಸುವ ಹೃದಯದಿ ಕರುಣೆಯಿರಲಿ
ಸಕಲ ಶುದ್ಧಾಂಗದಲಿ ಪೂಜಿಸದನು ಶರಣಾ ! ॥೧೭॥

ಶುದ್ಧಾಂಗವೆಂದರೇ ಜಲದಿ ಶುದ್ಧಿಪುದಲ್ಲ
ಅನ್ಯರಿಗೆ ನೋವಿಡದ ಹಿಂಸಿಸದ ಕರಣಗಳು
ಕರುಣ ಹೃದಯಿಯಾಗಿ ನೆಲೆಸಿರು ಶರಣಾ ! ॥೧೮॥

ಪಾವಿತ್ರ್ಯದಿಂದಿರಿಸಿ ಸಕಲ ಶುದ್ಧಾಂಗದಲಿ
ಸರ್ವ ಶಕ್ತಿಯು ಲಿಂಗ ನಿತ್ಯದಲಿ ಪೂಜಿಸಿರೆ
ಮಾನವನ ಜೀವನವೆ ಶರಣತನ ಶರಣಾ ! ॥೧೯॥

ಕಾಯು ಮನ ಭಾವಗಳ ಶುದ್ಧಿಸಲು ಸುಖಬದುಕು
ಸುಖ ಜೀವನದ ಪಥವೆ ಲಿಂಗಪೂಜಾಬಲವು
ಸತ್ಕಾರ್ಯ ಸಾಧನೆಯೆ ಲಿಂಗಪೂಜಕನ ಗುರಿಯು ಶರಣಾ ! ॥೨೦॥

ಸರಿಕ್ರಮದ ಶಿವಪೂಜೆ ಕಾಯುವನು ಶಾಂತಿಪುದು
ದೃಷ್ಟಿ ಸರಿ ನಿಲ್ಲಿಸಲು ಮನವೆಲ್ಲ ನಿಲ್ಲುವುದು
ಮನವ ನಿಲ್ಲಿಪ ಪೂಜಾ ಕ್ರಮವನರಿ ಶರಣಾ ! ॥೨೧॥

ಸ್ಥೂಲ ದೇಹವನೆಲ್ಲ ಜಲದಿಂದ ಶುದ್ಧಿಸುತ
ಮಡಿವಸ್ತ್ರ ಧರಿಸುತಲಿ ಪ್ರಶಾಂತ ಸ್ಥಳದಲ್ಲಿ
ಸಕಲ ಪೂಜಾವಸ್ತು ಶಿವಪೂಜೆಗಣಿಮಾಡು ಶರಣಾ ! ॥೨೨॥

ಲಿಂಗದಭಿಷೇಕಕ್ಕೆ ಶುದ್ಧ ಜಲವನು ತಂದು
ಭಸ್ಮ ಚಂದನ ಪತ್ರೆ ಕುಂಕುಮಾಕ್ಷತೆ ಪುಷ್ಪ
ಧೂಪ ದೀಪಾರತಿ ನೈವೇದ್ಯವಿಡು ಶರಣಾ ! ||೨೩||

ಪದ್ಮಾಸನದಿ ಕುಳಿತು ತನು ನೇರವಾಗಿರಿಸಿ
ಗುರುವಿತ್ತ ಮಂತ್ರವನು ಭಕ್ತಿಯಿಂ ಜಪಿಸುತಲಿ
ಸ್ಥೂಲಕಾಯದಲೆಲ್ಲ ಭಸ್ಮ ಧರಿಸೈ ಶರಣಾ ! ||೨೪||

ಅರೆ ನಿಮಿಷ ಶಾಂತದಲಿ ಶಿವಲಿಂಗ ಭಾವಿಸುತ
ಕೊರಳಲ್ಲಿ ಧರಿಸಿರುವ ಶಕ್ತಿ ಗುರು ಲಿಂಗವನು
ಹಸ್ತದಲಿ ಸರಿಯಿಡುತ ಪೂಜಿಸು ಶರಣಾ ! ||೨೫||

ವಾಮಹಸ್ತದ ಮಧ್ಯೆ ಶಿವಲಿಂಗ ವಿರಿಸುತಲಿ
ತರ್ಜನಿಯು ಬೆರಳಿನಿಂ ಲಿಂಗವನು ಹಿಡಿಯುತಲಿ
ಬಲ ಹಸ್ತದಲಿ ಶುದ್ಧ ಜಲವಿರಿಸು ಶರಣಾ ! ||೨೬||

ಲಿಂಗಪೂಜೆಗೆ ಮೊದಲೆ ಅಣಿಮಾಡಿ ಸಾಮಗ್ರಿ
ಮಹಾ ಮಂತ್ರ ಜಪಿಸುತ ಪೂರ್ಣಲಿಂಗವ ತೊಳೆದು
ಶುದ್ಧ ಮನದಭಿಷೇಕ ಮಾಡು ಕ್ರಮದಲಿ ನಿತ್ಯ ಶರಣಾ ! ||೨೭||

ಪದ್ಮಾಸನದೆದುರಿರಲಿ ಅರಡಿ ಎತ್ತರದ ದೀಪ
ಬ್ರಹ್ಮಾಂಡಮಯ ಲಿಂಗವನ್ನು ಪೂಜಿಸುವಲ್ಲಿ
ಮನವೆಲ್ಲ ಲಿಂಗದಲಿ ಚಲಿಸದಿರಲಿ ಶರಣಾ ! ||೨೮||

ಅರೆ ದೃಷ್ಟಿಯಿಂದಲೀ ಲಿಂಗವನು ಪೂಜಿಸುತ
ಭಸ್ಮ ಚಂದನ ಪತ್ರೆ ಪುಷ್ಪಗಳನರ್ಪಿಸುತ
ಶಿವಮಂತ್ರ ಜಪಿಸುತಲಿ ಲಿಂಗ ಪೂಜಿಸು ಶರಣಾ ! ||೨೯||

ಧೂಪ ನೈವೇದ್ಯ ದೀಪಾರತಿಗಳರ್ಪಿಸುತ
ಗಂಟೆನಾದವ ಮಾಡಿ ಶಿರಬಾಗಿ ನಮಿಸುತಲಿ
ಚೆಲುವಾದ ಲಿಂಗವನು ದೃಷ್ಟಿಸು ಶರಣಾ ! ||೩೦||

ಸಕಲ ಪೂಜಾಕಾಲ ಗುರು ಮಂತ್ರ ಜಪಿಸುತಲಿ
ಪೂಜಾಂತ್ಯ ಕಾಲದಲಿ ಲಿಂಗವನು ದೃಷ್ಟಿಸುತ
ಲಿಂಗವೇ ಶಿವನೆಂದು ಕಾಣುತಿರು ಶರಣಾ ! ||೩೧||

ಕರಲಿಂಗವಿರಲಿ ನಿನ ಕಣ್ಣಿಗರೆಯಡಿ ದೂರ
ಸ್ಥಿರವಾದ ಆಸನದಿ ಅಲುಗದೇ ಸ್ಥಿರವಿದ್ದು
ಅರೆದೃಷ್ಟಿಯಿಂದಲಿ ಶಿವನ ಕಾಣು ಶರಣಾ ! ||೩೨||

ಸರ್ವಾಲಂಕಾರದಲಿ ಪೂಜಿಸಿದ ಶಿವಲಿಂಗ
ನೋಡುತಿರೆ ಮಿಂಚುವುದು ವಜ್ರಕಾಂತಿಯಿಂದ
ಲಿಂಗವನೆ ದೃಷ್ಟಿಸುತ ಮನಕಟ್ಟು ಶರಣಾ ! ||೩೩||

ಲಿಂಗದಿ ನೆಟ್ಟದೃಷ್ಟಿ ಬಲು ಶಕ್ತಿಗೊಳ್ಳುವುದು
ಮನದ ಬಂಧನದಿಂದ ಬಲ ತುಂಬಿ ಹರಿಯುವುದು
ಕಾಣು ಶಿವಪೂಜೆಯಾ ಹಿರಿಶಕ್ತಿ ಶರಣಾ ! ||೩೪||

ಲಿಂಗ ಪೂಜಕನೆದುರು ಬೆಳಗುತಿಹ ಕಿರುದೀಪ
ಲಿಂಗ ಪೂಜಿಸಿದವನ ಮುಖವೆಲ್ಲ ಬೆಳಗುವುದು
ಪೂಜಕನ ಮುಖವೆಲ್ಲ ಲಿಂಗದಲಿ ಕಾಣುವುದು ಶರಣಾ ! ||೩೫||

ಪೂಜಕನ ಕಂಗಳಲಿ ಕಿರುಜ್ಯೋತಿ ರೂಪವು
ಲಿಂಗ ಕಾಂತಿಯಲಿ ಪ್ರತಿಬಿಂಬಿಪುದು ಶುಭ್ರದಲಿ
ಕಾಂತಿ ಲಿಂಗದಲೆರಡು ತಾರೆ ಕಾಂಬುದು ಶರಣಾ ! ||೩೬||

ಲಿಂಗದಲಿ ಮನವಿಟ್ಟು ತಾರೆಗಳ ದೃಷ್ಟಿಸಿರೆ
ಲಿಂಗದಲಿ ಕಾಣುವಾ ತಾರೆಗಳೆ ಒಂದಾಗಿ
ಮನದ ಬಲ ತೂರ್ಯಕೆಬಿಯ್ಯುವುದು ಶರಣಾ ! ||೩೭||

ಮನ ದೃಷ್ಟಿ ಒಂದಾಗಿ ಮನದೆಲ್ಲ ಶಿವನಿರಲು
ಲಿಂಗವೇ ಒಂದಾಗಿ ಜ್ಯೋತಿಯಂತಲೆ ಬೆಳಗಿ
ಮನವೆಲ್ಲ ಬಲಗೊಂಡು ಶಾಂತಗೊಳುವುದು ಶರಣಾ ! ||೩೮||

ಲಿಂಗದಲಿ ಲಯ ಹೊಂದಿ ಮನವೆಲ್ಲ ಶುದ್ಧಿಸಲು
ಮುಂದರಿವಿನಾ ಶಕ್ತಿ ಲಿಂಗ ಪೂಜಕಗುಂಟು
ಸಕಲ ಕಾಲದ ಕಾರ್ಯದರಿವಾಗುವುದುದು ಶರಣಾ ! ||೩೯||

ತಾನು ತನ್ನದು ಮರೆತು ತನಗೆಂಬುದಿಲ್ಲದಿರೆ
ಅಭಿಮಾನ ನಶಿಸುತಲಿ ಕರುಣಗುಣ ಹರಿಯುತಲಿ
ಮನಕೆ ಇಚ್ಛಾಬಲದ ಪ್ರಾಪ್ತಿಯುಂಟು ಶರಣಾ ! ||೪೦||

ಸಕಲ ಜ್ಞಾನದ ಮೂಲ ಸಕಲ ತತ್ವದ ಮೂಲ
ಸಕಲ ಜಗದುಗಮಲಯ ಕಾಲದಾ ಗುಣಮೂಲ
ಲಿಂಗ ಪೂಜಕ ಮನಕೆ ಗೋಚರವಾಗುವುದು ಶರಣಾ ! ॥೪೧॥

ಸಕಲವರಿತಿಹ ಬಾಳು ಲಿಂಗಪೂಜಕ ಬಾಳು
ಸಕಲ ಶಕ್ತಿಯು ತುಂಬಿ ಶಾಂತಿ ನೀಡುವ ಬಾಳು
ಸರಿಲಿಂಗ ಪೂಜೆಯಲಿ ಶಕ್ತಿಯಿದೆ ಶರಣಾ ! ॥೪೨॥

ಕಾಯ ಮನ ಪ್ರಾಣಗಳ ಲಿಂಗದಲಿ ಲಯಗೊಳಿಸೆ
ಸರಿ ಕ್ರಮದ ಶಿವಲಿಂಗ ಪೂಜೆಯಲಿ ಹಿರಿ ಬಲವು
ಲಿಂಗ ಪೂಜಾಬಲವ ನೀನರಿ ಶರಣಾ ! ॥೪೩॥

ಲಿಂಗದಲಿ ಸರಿ ಪೂಜೆ ಸತ್ಯದನುಷ್ಠಾನದಿರೆ
ಜಗವೆಲ್ಲ ಲಿಂಗಮಯ ಲಿಂಗವೇ ಜಗವೆಂದು
ಹಿರಿ ಶಕ್ತಿ ಮಯ ಜ್ಞಾನ ದೊರೆಯುವುದು ಶರಣಾ ! ॥೪೪॥

ಶಿವಲಿಂಗ ಪೂಜಕಗೆ ದ್ವೇಷವೆಂಬುದು ಇಲ್ಲ
ಸಕಲ ದ್ವಂದ್ವವನಳಿದ ಶಕ್ತಿಯಲಿ ಒಂದೆಣಿಸಿ
ಸಕಲ ಮೂಲದ ಮರ್ಮವರಿಯುವನು ಶರಣಾ ! ॥೪೫॥

ಸರಿ ಲಿಂಗ ಪೂಜಕನು ನಿಜಲಿಂಗ ಜ್ಞಾನಿಯು
ಸಕಲ ಸತ್ಯಾಸತ್ಯ ಗುಣ ಶಕ್ತಿಯರಿಯುತಲಿ
ಸಕಲರಿಗು ಸರ್ವಜ್ಞನಾಗುವನು ಶರಣಾ ! ॥೪೬॥

ಸತ್ಯ ಭಕ್ತಿಯು ಬಲದಿ ಲಿಂಗವನು ಪೂಜಿಸಲು
ಸತ್ಯ ಮಾನವ ಶಕ್ತಿ ಶರಣಶಕ್ತಿಯದಾಗಿ
ಶರಣ ಗುಣ ಬಲವೆಲ್ಲ ದೊರೆಯುವುದು ಶರಣಾ ! ||೪೭

ಶರಣಾದ ತನುವಲ್ಲಿ ಶರಣಾದ ಮನದಲ್ಲಿ
ಪ್ರಾಣವಾಯುವಿನಲ್ಲಿ ಶರಣ ಶಕ್ತಿಯು ತುಂಬಿ
ಇಚ್ಛಾಮರಣ ಶಕ್ತಿ ದೊರೆಯುವುದು ಶರಣಾ ! ||೪೮

ಶರಣಾದ ಜೀವಕ್ಕೆ ಈ ಮನುಜ ದೇಹದಲಿ
ದೈವ ಶಕ್ತಿಯು ತುಂಬಿ ಶಕ್ತಿಮಯವಾಗುವುದು
ಶರಣ ಶಕ್ತಿಯ ಬಲವ ನೀ ಧರಿಸು ಶರಣಾ ! ||೪೯

ಜನುಮ ಜನುಮದಿಗೈದ ಕರ್ಮವೆಲ್ಲವನಳಿಸಿ
ಜನನ ಮರಣದ ಬಾದೆಯಿನಿತಿರದ ಬಾಳಿತ್ತು
ಸೂಕ್ಷ್ಮದೇಹವ ನಿಲಿಸಿ ಸಲಹುವುದು ಶರಣಾ ! ||೫೦

ಲಿಂಗೈಕ್ಯವಾಗುತ್ತ ಲಿಂಗಬಲವನು ಧರಿಸಿ
ಲಿಂಗಾನುಭವದಲ್ಲಿ ಆನಂದ ತಾಳುತಲಿ
ಅಂಗದಲೆ ಜಗಜ್ಯೋತಿಯಂತಾಗು ಶರಣಾ ! ||೫೧

ಜಗಮೂಲ ಜಗದಂತ್ಯ ಮೂಲ ಶಕ್ತಿಯ ಕಾಣು
ಲಿಂಗ ಪೂಜೆಯ ಮಹಿಮೆ ಪೂಜೆಯಿಂದಲೆ ಕಾಣು
ಇಂಥ ಮಹಿಮೆಯ ಲಿಂಗಶಕ್ತಿಯರಿ ಶರಣಾ ! ||೫೨

೧೪

ಲಿಂಗ ಜ್ಞಾನವೇಕೆ?

ಮಾನವನ ಜನ್ಮಕ್ಕೆ ಕಾರಣಗಳೇನಿಹವು?
ಮಾನವನ ಜ್ಞಾನಕ್ಕೆ ಕಾರಣಗಳೇನಿಹವು?
ಜೀವಿಗೇತಕೆ ಮರಣವೆಂಬುದರಿ ಶರಣಾ! ॥೧॥

ಮಾನವನ ಸುಖದುಃಖದುಗಮವೆಲ್ಲಿಂದಹುದು?
ಮಾನವನ ಕಾಯಬಲ ಕರ್ಮಬಲವೆಲ್ಲಿಹುದು?
ಮಾಡಿದೆಲ್ಲದರಲ್ಲಿ ಸತ್ಯ ಮಿಥ್ಯಗಳೇನು ಶರಣಾ? ॥೨॥

ಹಲವರು ದುಃಖಿಸುತ ಹಲವರು ಸುಖಿಸುತಿಹರು
ಹಲವರು ಮತಿಯಿರದೆ ಹುಚ್ಚರಾಗಿಹರೇಕೆ?
ಹಲವು ಜನರ ಜೀವನ ಹಾಳಾಗುತಿಹುದೇಕೆ? ಶರಣಾ! ॥೩॥

ಅಂಗಹೀನರು ಇಹರು ಬುದ್ಧಿಹೀನರು ಇಹರು
ಸಕಲ ತೆರ ಸುಖವಿದ್ದು ಅಳು ಬಾಳು ಹಲವರದು
ಈ ವೈಚಿತ್ರ್ಯಗಳ ಕಾರಣವನರಿ ಶರಣಾ! ॥೪॥

ಮಾನವಂತರು ಇಹರು ಮಾನಹೀನರು ಇಹರು
ಪ್ರಾಪ್ತಿವಂತರು ಇಹರು ಪ್ರಾಪ್ತಿಹೀನರು ಇಹರು
ಈ ಭೇದಗಳಿಗೆಲ್ಲ ಆವ ಕಾರಣ ತಿಳಿ ಶರಣಾ ! ॥೫॥

ಸುಖವೆಂದು ಪಡೆದ ಸತಿಸುತರಿಂದಲೂ ತಾಪ
ಸುಖಕಾಗಿ ಮಾಡಿರುವ ವ್ಯವಹಾರದಲೂ ದುಃಖ
ಸುಖಕೆಂದೆ ಕಟ್ಟಿದರು ಏಕಿಂತು ದುಃಖವರಿ ಶರಣಾ ! ॥೬॥

ಸಕಲರು ಬಲುವಿಧದಿ ಸುಖದುಃಖ ಪಡುತಿರಲು
ಸತ್ಯ ಸುಖ ಪಡೆದವರು ಯಾರಿಹರು ತಿಳಿಯಯ್ಯ
ಸುಖವೇನು ? ಸುಖವೆಲ್ಲಿ ? ಅರಿತಿರು ಶರಣಾ ! ॥೭॥

ಸುಖವೀಯಬಲ್ಲ ನಿಜ ವಸ್ತುವಿಹುದಾವುದರಿ
ಸುಖಶಾಂತಿ ಅನುಭವಕೆ ಕಾರಣವೆ ಮನವಿಹುದು
ಮನಕೆ ಸುಖವಿಡುವುದು ಜೀವಗುಣ ಶರಣಾ ! ॥೮॥

ಜೀವದಾ ಗುಣದಣುವು ಸುಕೃತಮಯವಾಗಿರಲು
ಜೀವನದಿ ಮನವೆಲ್ಲ ಸುಖ ಶಾಂತಿ ಪಡೆಯುವುದು
ಜೀವಬಲವಿರದವರು ದುಃಖಿಗಳು ಶರಣಾ ! ॥೯॥

ಸುಖಶಾಂತಿ ಬಾಳರಿಯೆ ಜೀವನದಿ ಕೊರವೇನು ?
ಬಾಳಿನ ಸಕಲವಸ್ತು ಸುಖವನ್ನೆ ನೀಡುವುದು
ಸುಖವ ನೀಡುವ ಜೀವಬಲಗಳಿಸು ಶರಣಾ ॥೧೦॥

ಕಂಗಳಿಗೆ ಕಾಣದಿಹ ಹಿರಿಶಕ್ತಿ ಪ್ರಾಣದಲಿ
ಸುಗುಣ ದಯ ಕರುಣದಲಿ ಸುಕೃತವು ಬೆಳೆಯುವುದು
ಸತ್ಯ ಧರ್ಮದ ಬಲದಿ ಬಲ ಬೆಳೆಸು ಶರಣಾ ! ॥೧೧॥

ಕಾಣದಂತಿಹ ಪ್ರಾಣ ಜ್ಞಾನವನು ಅರಿಯುವುದು
ಜ್ಞಾನದಿಂ ಪ್ರಾಣಕ್ಕೆ ಬಲಿವಿರಿಸು ಸಾಧನದಿ
ಸತ್ಯ ಪ್ರಾಣದ ಬಲವೇ ಸುಕೃತವು ಶರಣಾ ! ॥೧೨॥

ಪ್ರಾಣಬಲ ಹಿರಿಯಾಗೆ ಸಕಲ ಸುಖವಲ್ಲಿಹುದು
ಪ್ರಾಣಬಲ ಕೊರವಾಗೆ ಸುಖವಿರದೆ ಕೊರಗುವರು
ಸುಖವೀವ ಪ್ರಾಣಬಲ ಬೆಳೆಸಿಕೋ ಶರಣಾ ! ॥೧೩॥

ಬದುಕಿನಲಿ ಶಾಂತಿಗೇ ಸುಖವಾದ ಜೀವನಕೆ
ಪ್ರಾಣದಾ ಹಿರಿಶಕ್ತಿ ಗಳಿಸಿದವರಾರಿರಲಿ
ಅವರೆ ನಿಜ ಸುಖಿಗಳು ಬಾಳಿನಲಿ ಶರಣಾ ! ॥೧೪॥

ಸುಖ ಶಾಂತಿಯರಿಯದಿರೆ ಹಿರಿ ಲೋಕ ಪದವಿಯಲು
ಸುಖದಲ್ಲಿ ದಾರಿದ್ರ್ಯ ದುಃಖಮಯ ಬಾಳಹುದು
ಸಕಲ ಸುಖ ಮೂಲಬಲ ದೈವಬಲ ಶರಣಾ ! ॥೧೫॥

ಯಾರಿಗೇ ಯಾರಿಹರು ? ಯಾರಿಗೇ ಎಷ್ಟಿಹುದು ?
ಯಾರು ಯಾರಿಗೆ ನಿಜದಿ ಜೊತೆ ಬರುವ ಜನರಿಹರು ?
ಸುಕೃತದ ದೈವವೇ ಜೊತೆಗಿಹುದು ಶರಣಾ ! ॥೧೬॥

ಮರಣ ಕಾಲದಲಿ ಜೊತೆ ಹೋಗುವುದದಾವ ಬಲ?
ಜನನದಾ ಸಮಯದಲಿ ಜೊತೆ ಬರುವುದದಾವ ಬಲ?
ಜೀವನಿಗೆ ಜೊತೆ ಸ್ನೇಹ ಸುಕೃತವೊಂದೇ ಶರಣಾ! ॥೧೭॥

ಸುಕೃತದ ಸ್ನೇಹವೇ ಜನುಮದಲಿ ಕಾಯುವುದು
ಜೀವನವ ಸಲಹುತಲಿ ನಿಜ ಸುಖವ ನೀಡುವುದು
ಸುಕೃತವೆ ಸುಖ ಶಾಂತಿಗಳ ಮೂಲ ಶರಣಾ! ॥೧೮॥

ಸುಕೃತವೆನ್ನುವುದು ಲೋಕ ಸಂಪದವಲ್ಲ
ಜೀವಿಗಳ ಪ್ರಾಣದಲಿ ಸುಕೃತ ಸಂಪದವಿರಲು
ಅವರಲ್ಲವೆ ಸುಖಿಗಳು ಜೀವನದಿ ಶರಣಾ?! ॥೧೯॥

ದೈವದಲಿ ಮನವಿರಿಸಿ ದೈವಕೇ ಬಾಳಿರಿಸಿ
ದೈವವನೆ ಧ್ಯಾನಿಸುತ ದೈವವನೆ ಪೂಜಿಸು
ದೈವದಲಿ ಸಮಯವನು ಕಳೆಯುತಿರು ಶರಣಾ! ॥೨೦॥

ದೈವಬಲವನರುಹುವ ಕಾರಣಕೆ ಸಾಧನದಿ
ಲಿಂಗವೆಂಬಾ ಶಿವನ ರೂಪವನು ಪೂಜಿಸುತ
ಲಿಂಗದಲಿ ಸಕಲವನು ಅರ್ಪಿಸು ಶರಣಾ! ॥೨೧॥

ಲಿಂಗದಲಿ ಅರ್ಪಿಸಿದ ಭಕ್ತಿ ಸೇವಾ ಪೂಜೆ
ಸುಕೃತದ ಬಲವಾಗಿ ಜೀವನಿಗೆ ದೊರೆಯುವುವು
ಜೀವ ಸುಕೃತದಣುವೆ ಸುಖ ಶಾಂತಿ ಶರಣಾ! ॥೨೨॥

ಸುಕೃತವೆನ್ನುವುದು ಕಂಗಳಿಗೆ ಕಾಣಿಸದು
ಸುಕೃತದ ವಾಸನೆಯು ಜ್ಞಾನಿಗಳು ಅರಿಯುವರು
ಸುಕೃತದ ಶಕ್ತಿಯನು ಪಡೆಯಲರಿ ಶರಣಾ ! ||೧೩||

ಮಲ್ಲಿಗೆಯ ಪುಷ್ಪದಲಿ ಸುವಾಸನೆಯಿರುವಂತೆ
ಜೀವನದಿ ಸುಕೃತದ ಸುಗಂಧ ಸೂಸುವುದು
ಗಂಧವಿಲ್ಲದ ಬದುಕು ನೀರಸವು ಶರಣಾ ! ||೧೪||

ಲಿಂಗ ಪೂಜಾ ಬಲವೆ ಸುಕೃತ ಸಂಪದ ಬಲವು
ಪೂರ್ವಪಾಪದ ಬೇರುಗಳ ಕಡಿಯುವಾಯುಧವು
ಸಕಲ ದೋಷವನಳಿಸಿ ಶಾಂತಿ ಕೊಡುವುದು ಶರಣಾ ! ||೧೫||

ವೇದಾಂತ ಸಾರುತಿದೆ ಪರಬ್ರಹ್ಮವದುವೆಂದು
ವೈಷ್ಣವರು ನುಡಿಯುವರು ವಿಷ್ಣುವೆ ದೈವವೆಂದು
ಶೈವರು ನುಡಿಯುವರು ಶಿವನೇ ದೈವವೆಂದು ಶರಣಾ ! ||೧೬||

ಯಾರೇನು ನುಡಿದರೂ ಎಲ್ಲವೂ ದೈವವೇ
ನಾಮರೂಪಗಳಲ್ಲಿ ಭೇದವಿದ್ದೊಡೆ ಏನು ?
ಸಕಲವೂ ದೈವವೇ ನಂಬಿ ನಡೆ ಶರಣಾ ! ||೧೭||

ಜಗದಲ್ಲಿ ನೀ ಜನಿಸಿ ಗುಣಿಯಾಗಿ ನೀ ಬಾಳಿ
ಜಗಬದುಕಿ ಗಂಟೆದಲಿ ದಿನಯಾತ್ರೆ ನಡೆಸುತಲಿ
ಲಿಂಗದಾರಾಧನೆಗೆ ಲಿಪ್ತನಿರು ಶರಣಾ ! ||೧೮||

ದೈವದಲಿ ಮನವಿಟ್ಟು ದೈವಚಿಂತನಕಂಟಿ
ದೈವಬಲ ಲಾಭದಿಂದನುದಿನದ ಬದುಕಿನಲಿ
ಶರಣ ಭಾವದಿ ನೆಲೆಸಿ ಸುಖಿಸು ನೀ ಶರಣಾ ! ॥೨೯॥

ಶರಣ ಜೀವನ ನಡೆಸಿ ಚಂದ್ರನಂತಲೆ ಬೆಳಗಿ
ಸಕಲ ಜ್ಞಾನವ ಪಡೆದು ಧರ್ಮಿಯಾಗ್ವನು ಶರಣ
ಶರಣ ಜೀವನ ಜ್ಯೋತಿ ಬೆಳಗಿಸು ಶರಣಾ ! ॥೩೦॥

ಕಬ್ಬಿಣವನಾಗಲೀ ಚಿನ್ನವಾಗಿಸಬಲ್ಲ
ಹಿರಿಯಾದ ಸಾಧನವೆ ಲಿಂಗಾಂಗ ಸಾಧನವು
ಸತ್ಯ ಸುಖ ಬದುಕನ್ನು ಸಾಧಿಸಿಕೊ ಶರಣಾ ! ॥೩೧॥

ದೈವ ಸಾಧನೆ ಬಲವು ಪರಶುಮಣಿಯಿದ್ದಂತೆ
ಸ್ಪರ್ಶಗೈದೆಲ್ಲವನು ಹೊನ್ನಾಗಿ ಬದಲಿಪುದು
ಚಿನ್ನದಂಥಾ ಬಾಳ ನಡೆಸಲರಿ ಶರಣಾ ! ॥೩೨॥

ದೈವಸಾಧನೆ ಸಕಲ ಸುಕೃತಕೆಂದಿಗು ಮೂಲ
ಸುಗುಣಮಯ ಜೀವನವು ಮಾನವಗೆ ಭೂಷಣವು
ಧರ್ಮ ಜೀವನವನ್ನೆ ಸಾಧಿಸು ಶರಣಾ ! ॥೩೩॥

ಲಿಂಗಪೂಜಾಬಲದಿ ದೈವಬಲ ಪಡೆದವರು
ಬದುಕಿನಲ್ಲೆಲ್ಲ ಕಡೆ ಸುಖಿಸುವುದನೆ ಕಲಿವರು
ಸುಖ ಬದುಕ ನಡೆಸುತಲಿ ಬೆಳಗುತಿರು ಶರಣಾ ! ॥೩೪॥

ಮನದ ಹಿರಿಮೆಯು ಬೆಳೆಸಿ ಬಲವೀವ ಪೂಜೆಯು
ತಾಪಗಳು ಬರದಂತೆ ಕಾಯುವಾ ಸಾಧನವು
ದೋಷಗಳ ಕಳೆಯಲದೆ ಧರ್ಮಸಾಧನ ಶರಣಾ ! ||೩೫||

ದೈವವೆನ್ನುವ ಬಲವ ಶೋಧಿಸಲು ಪೋಗದಿರು
ಶೋಧನದಿ ದೈವಬಲವೇನಲ್ಪ ತೋರಿಸದು
ದೈವ ಶಿವಲಿಂಗವನು ನಂಬಿರು ಶರಣಾ ! ||೩೬||

ದೈವವದು ತಾ ಬಂದು ತನ್ನ ಬಲ ತೋರಿದೊಡೆ
ನಿನಗಲ್ಪ ಸಂತೋಷ ಉಳಿಸದೆ ಪರಿಕಿಸುವುದು
ದೈವವನು ನಂಬುತಲಿ ಶರಣಾಗು ಶರಣಾ ! ||೩೭||

ಜೀವನದ ಕಾಲದಲಿ ಈ ಅಲ್ಪ ಬದುಕಿನಲಿ
ನೂರಾರು ತಾಪಗಳು ನಿದ್ರೆ ಸ್ವಪ್ನದಲುಂಟು
ಜಾಗ್ರತದಿ ಶಿವನನ್ನು ನಂಬಿ ಸುಖಿಯಾಗು ಶರಣಾ ! ||೩೮||

ಮುಂಬರುವ ಗಳಿಗೆಯಲಿ ಏನಿಹುದೊ ಗೊತ್ತೇನು ?
ಮುಂದೆ ಬರುವಾ ಕ್ಷಣದ ಸುಖಕೆ ದೈವವ ನಂಬು
ದೈವ ಶಿವನನು ತೊರೆದು ಬಾಳದಿರು ಶರಣಾ ! ||೩೯||

ಕಿರಿಯ ಮಾನವ ನೀನು ಹೋರಾಡಿ ಜಯಿಸುವೆಯ ?
ನಿನ್ನ ಬಲಕೂ ದೈವ ಹಿರಿಶಕ್ತಿಯಾಗಿಹುದು
ಹಿರಿಶಕ್ತಿ ಜೊತೆಗೇಕೆ ಹೋರಾಟ ಶರಣಾ ? ||೪೦||

ಹಿರಿಶಕ್ತಿಯಾಗಿರುವ ದೈವ ಮಾಯಾ ಬಲಕೆ
ಏನೊಂದು ಯೋಚಿಸದೆ ದಿನವೆಲ್ಲ ನಮಿಸುತಿರು
ಎಂತೆಂತೊ ಸಲಹುತಲಿ ಕಾಯುವುದು ಶರಣಾ ! ||೪೧||

ಜಗದೆಲ್ಲ ವಸ್ತುಗಳ ಮಾಯೆಯಿಂದಲಿ ಸೃಜಿಸಿ
ಮಾಯೆಯಲಿ ಜಗಕಾಯ್ದು ಜಗಲಯವ ಮಾಡುವುದು
ಅಂಥ ಮಹಾನ್ ಶಕ್ತಿಗೆ ಶರಣಾಗು ಶರಣಾ ! ||೪೨||

ಬದುಕಿನಾ ಕಾಲದಲಿ ಏನಲ್ಪ ತ್ಯಜಿಸದಿರು
ಸರ್ವವನು ನಿಜದಿಂದ ನೀತಿಯಿಂದಲಿ ಕಾಯ್ದು
ತ್ಯಾಗ ಭಾವನದಿಂದ ಬಾಳಲರಿ ಶರಣಾ ! ||೪೩||

ದೈವ ಶಿವ ಲಿಂಗವನು ಮನದಿ ಧಾರಣೆಗೈದು
ನೀನೊಳ್ಪ ಸಕಲವನು ದೈವಕರ್ಪಿಸಿ ಬಾಳು
ದೈವದಾಳಿನ ತೆರದಿ ಒಪ್ಪಿಸದನು ಶರಣಾ ! ||೪೪||

ಲೋಕದಿನ್ನಾವಬಲಕೂ ಮೂಢತನ ಬೇಡ
ದೈವಬಲವೊಂದನೇ ತರ್ಕಗೈಯದೆ ನಂಬು
ಸತ್ಯ ಲಿಂಗಕೆ ಬಾಳು ಮುಡಿಪಿರಿಸು ಶರಣಾ ! ||೪೫||

ದೈವವರಿಯಲು ಹೊರಟ ನಿಜ ದೈವಭಕ್ತನೇ !
ಮೊದಲು ನೀನಾಗಯ್ಯ ದೈವಬಲ ಪಥಗಾಮಿ
ಪಥವಿರದೆ ಸಾಧಿಸಿರೆ ವ್ಯರ್ಥಶ್ರಮ ಶರಣಾ ! ||೪೬||

ಕಪಟ ಬುದ್ಧಿಯು ತೊರೆದು ಸುಮತೆ ಭಾವವ ಬೆಳೆಸು
ಕರುಣೆ ದಯೆ ಭಾವದಲಿ ಪ್ರೇಮಿಸಲು ಕಲಿ ಮೊದಲು
ಚಿಂತೆ ವ್ಯಸನಗಳಿರದೆ ಶುದ್ಧ ಮನ ಧರಿಸು ಶರಣಾ ! ॥೪೭॥

ದೈವ ಶಿವನನು ತೋರಬಲ್ಲ ಸರಿ ಪಥವರಿಯೆ
ಮೋಸ ವಂಚನೆ ತೊರೆದು ಪರಸೊತ್ತಿಗಾಶಿಸದೆ
ಮನದಾಸೆಗಳ ತೊರೆದು ಒಂದಾಗು ಶರಣಾ ! ॥೪೮॥

ಜಗದಲ್ಲಿ ಎಲ್ಲಕಡೆ ದೋಷಗಳೆ ತುಂಬಿರಲು
ನೀ ಕಂಡ ದೋಷಗಳ ನೆನೆಯದೆ ಬದುಕಲು ಕಲಿ
ದೋಷಿಗಳ ಮನದ ಮೇಲ್ಕರುಣೆಯಿಡು ಶರಣಾ ! ॥೪೯॥

ಅನ್ಯ ದೋಷವ ಕಂಡು ನಿನ್ನ ಮನ ಕದಲಿಸದೆ
ಸಾಧನೆಯು ಮನಕಲ್ಪ ದೋಷವನು ಅಂಟಿಸದೆ
ಶುದ್ಧ ಮನ ಶಕ್ತಿಯಲಿ ಬೆಳಗಲರಿ ಶರಣಾ ! ॥೫೦॥

ಲೋಕದೀ ಪೇಟೆಯಲಿ ನೂರೊಂದು ಗುಣವಿರಲು
ದೈವಬಲ ಸಾಧನೆಗೆ ಬೇಕಾದ ಗುಣ ಪಡೆದು
ದೈವಶಿವ ಪಾದದಲಿ ಬಲ ಧರಿಸು ಶರಣಾ ! ॥೫೧॥

ಸರಿಯಾದ ಗುಣವಿರುವ ಸತ್ಯಗುಣಿ ಸಂಗದಲಿ
ಗುಣವೆಲ್ಲ ನೀ ಕಂಡು ಗುಣ ಬಿಡದೆ ಪಾಲಿಸುತ
ಸತ್ಯತೆಯು ಸುಗುಣ ಮನ ಧರಿಸಯ್ಯ ಶರಣಾ ! ॥೫೨॥

ಮತಿಯಿಲ್ಲದೀ ಜಗದಿ ಮತಿಯಿರದೆ ಬಾಳದಿರು
ಸದ್ಬುದ್ಧಿ ಸುಗುಣಗಳ ಧರಿಸಿ ನೀ ಬಾಳಿದರೆ
ಶರಣ ಗುಣ ಬಲದಿಂದ ಜಯಿಸುವೆ ಶರಣಾ ! ||೫೩||

ಮನದ ಗುಣ ಭಾವ ಕ್ರಿಯೆ ಆನಂದ ಬುದ್ಧಿಗಳು
ಅಂತರಂಗದ ಜೀವಬಲ ತೂಗೆ ಕನ್ನಡಿಯು
ಸಕಲ ಜೀವದ ಬಲವ ಮನದಿ ಕಾಣಯ್ಯ ಶರಣಾ ! ||೫೪||

ಜೀವದಲಿ ತುಂಬಿರ್ದ ಬಲಶಕ್ತಿ ಅಣುಗಳು
ವಾಸನದಿ ಪರಿಣಮಿಸಿ ಮನದಲ್ಲಿ ಮೂಡುವುವು
ವಾಸನದಿ ಜೀವಬಲ ಕಂಡು ತಿಳಿ ಶರಣಾ ! ||೫೫||

ಜೀವ ಬಲದಣುವಲ್ಲಿ ಪಾಪಗುಣ ತುಂಬಿರಲು
ಪುಣ್ಯಕರ ಭಾವಗಳು ಕಾಣಿಸದು ಬಾಳಲ್ಲಿ
ಸುಗುಣ ಮನದಲಿ ಜೀವಬಲವ ಕಂಡರಿ ಶರಣಾ ! ||೫೬||

ಜೀವನದ ತುಂಬೆಲ್ಲ ದೈವದಣು ತುಂಬಿರಲು
ಅಂಥ ಜೀವದ ಮನವು ದೈವವನೆ ಚಿಂತಿಪುದು
ಅನ್ಯ ವಿಷಯವನೆಂದು ಲಕ್ಷಿಸದು ಶರಣಾ ! ||೫೭||

ವಿಷಯಾದಿ ಕೂಟಗಳು ಕೋಟ್ಯಾನುಕೋಟಿಯಿರೆ
ಹಿರಿಬಲದ ಜೀವ ತಾನೇನೊಂದು ಗಮನಿಸದು
ಅನ್ಯವನು ಗಮನಿಸದೆ ಲಿಂಗ ನೆನೆ ಶರಣಾ ! ||೫೮||

ಪಾಪಿಗಳು ಕೋಪಿಗಳು ತಾಪಿಗಳು ಕಪಟಿಗಳು
ಸಕಲ ಜನ ಸೇರಿರುವ ಸಂತೆ ಕೂಟದ ಬಲದಿ
ಜಾಗರದಿ ಮರೆಯದೇ ಲಿಂಗ ನೆನೆ ಶರಣಾ ! ||೫೯||

ಸಂತೆಯೊಳು ಸೇರಿದರೆ ಶಬ್ದಗಳು ಸಹಜವು
ಸಂತೆಯೊಳ್ ಸೇರದಿರು ಸೇರಿದರು ಕೇಳದಿರು
ಅಂಥ ನಿಜ ಬಲಶಾಲಿ ಮನ ಧರಿಸು ಶರಣಾ ! ||೬೦||

ಮನಕೆಲ್ಲ ಅಲೆ ತರುವ ಕೂಟವನು ಸೇರದಿರು
ಕೂಡದಲಿ ನೀನಿರಲು ಅಲೆಗಳಿಗೆ ಅಂಟದಿರು
ಅಂತಿರುತ ಸಾಧಿಸುತ ಸಬಲನಾಗು ಶರಣಾ ! ||೬೧||

ಪ್ರಾಣವಾಯುವಿನ ಬಲ ಮನದ ಬಲ ಶುದ್ಧಿಪುದು
ಮನದ ಶುದ್ಧತೆಯು ಬಲ ಪ್ರಾಣ ಬಲ ಶುದ್ಧಿಪುದು
ಮನ ಪ್ರಾಣವೆರಡರಲಿ ನಿಕಟತ್ವವಿದೆ ಶರಣಾ ! ||೬೨||

ಪ್ರಾಣವನರಿವ ಬಲವೆ ಮನವನರಿಯುವ ಬಲವು
ಎರಡರೊಳಗೊಂದರಿತು ಸಾಧನದಿ ನೀ ಗಳಿಸು
ಅದು ಸರ್ವಬಲಗಳನು ನೀಡುವುದು ಶರಣಾ ! ||೬೩||

ಸಕಲ ಕಾರಣಗಳಿಗು ಮನವೆ ಹಿರಿ ಬಲವಿರಲು
ಮನದ ಬಲ ಶಕ್ತಿಯನು ನಿನ್ನ ವಶದಲ್ಲಿರಿಸು
ಸಕಲ ಸಾತ್ವಿಕ ಶಕ್ತಿ ತುಂಬಿರಲಿ ನಿನ್ನಲಿ ಶರಣಾ ! ||೬೪||

ಸಕಲ ಸಾತ್ವಿಕ ಮನವು ಸತ್ಯವನು ದರ್ಶಿಪುದು
ಶುದ್ಧಾಚರಣೆಯಿಂದ ಶಕ್ತಿಯನು ಧರಿಸುವುದು
ಅಂಥ ಬಲವುನ ಧರಿಸು ಶಿವಲಿಂಗ ಶರಣಾ! ||೬೫||

ಹಿರಿಗುಣವೆ ತುಂಬಿರುವ ಉತ್ತಮರ ಮನವೆಲ್ಲ
ಅಧಮವನು ಅರೆ ನಿಮಿಷ ಮನದಿ ಧರಿಸುವುದಿಲ್ಲ
ಅದುವೆ ನಿಜ ಹಿರಿ ಬಲವು ಅರಿತಿರು ಶರಣಾ ! ||೬೬||

ಉತ್ತಮರು ಎಂದಿಗೂ ಉತ್ತಮವ ಕಾಣುವರು
ಅಧಮವೆನಿಪುದನೆಲ್ಲ ಕರುಣದಲಿ ಹರಸುತಲಿ
ಅಧಮವನು ಉತ್ತಮಕೆ ಬೆಳೆಸುವರು ಶರಣಾ ! ||೬೭||

ಅಧಮತ್ವ ತುಂಬಿರುವ ಅಜ್ಞಾನಿ ಜೀವಿಗಳ
ಅಂತರಂಗವ ತಿದ್ದಿ ಉತ್ತಮವಾಗಿಸುತಲಿ
ಮಾರ್ಪಡಿಸುವರಯ್ಯ ಅದುವೆ ಹಿರಿತನವು ಶರಣಾ ! ||೬೮||

ಸದ್ಗುಣ ಸುವಿಚಾರ ಸದ್ಭಾವ ಸಂಪದವ
ಎಡೆಬಿಡದಲಾರ್ಜಿಸುತ ಕರುಣ ಹೃದಯುವ ತಾಳು
ಅಂತಾಗಿರಲು ಮಾತ್ರ ದೈವಬಲ ಶರಣಾ ! ||೬೯||

ಲೋಕದಲೆಡರು ತೊಡರುಗಳು ತೊಡಕು ತಾಪಗಳು
ನಿಂದೆ ನೊಂದಾದಿಗಳು ನಿತ್ಯವೂ ಮುತ್ತಿದರು
ಏನೊಂದ ಕಂಟದೊಲು ಮನವಿರಿಸು ಶರಣಾ ! ||೭೦||

ದೈವವೊಂದನು ಬಿಟ್ಟು ಬೇರೊಂದು ಯೋಚಿಸದೆ
ಸಕಲ ಚಿಂತೆಯ ಮರೆತು ದೈವದಲಿ ಮನವಿಡಲು
ದೈವದ ಸಕಲ ಶಕ್ತಿ ನಿನಗುಂಟು ಶರಣಾ ! ॥೨೦॥

ದೈವ ಚಿಂತಿಪ ಮನದಿ ನೂರಲೆಯ ತುಂಬದಿರು
ಬೇರೊಂದು ಯೋಚಿಸದೆ ಭಾವವ ಭದ್ರಗೊಳಿಸಿ
ದೈವ ಶಿವಲಿಂಗದಲಿ ಮನವನಿಡು ಶರಣಾ ! ॥೨೧॥

ಶುದ್ಧಮನವಾಗಿ ದೈವೀಶಕ್ತಿ ಗಳಿಸಿರಲು
ಶುದ್ಧತೆಯನುಳಿದೆಲ್ಲು ಅಶುದ್ಧವ ಕಾಣದಿರು
ಅಂತಿರುವ ಶಿವಲಿಂಗ ಸತ್ಯಬಲ ಶರಣಾ ! ॥೨೨॥

ನಿನ್ನ ಮನವನು ತೊಳೆಯೆ ನೀನೆ ಹಿರಿ ಕಾರಣನು
ನಿನ್ನ ಬಲ ಬೆಳೆಸಲೂ ನೀನೆ ಹಿರಿ ಶಕ್ತನು
ನಿನ್ನ ನೀನೇ ಅರಿತು ನೀ ಬೆಳಗು ನಿನ್ನಿಂದ ಶರಣಾ ! ॥೨೩॥

ನೂರು ಹೇಳಿದರಿಲ್ಲ ನೂರು ಕೇಳಿದರಿಲ್ಲ
ನಿನ್ನಲ್ಲಿ ನೀ ಕಂಡು ನಿನ್ನ ನೀ ತೊಳೆದಂದೆ
ಅನ್ಯ ಹಂಗಿರದಂತೆ ಬೆಳಗುವೆ ಶರಣಾ ! ॥೨೪॥



೧೫

ಸತ್ಯ ಸಾಧಿಸು

ಸಾವಿರ ಗ್ರಂಥಗಳ ಓದಿ ತಿಳಿದರೆ ಏನು ?
ನೂರಾರು ತತ್ವಗಳ ಅರಿತರೂ ಇಹುದೇನು
ತನ್ನ ತಾ ತಿದ್ದಿಕೊಳ್ಳದಿರೆ ವ್ಯರ್ಥ ಶರಣಾ ! ||೧||

ವಾದಿಸಿ ಗೆಲಿದರೇನು ? ವೇದ ಪಠಿಸಿದರೇನು ?
ಲೋಕ ಬಲ ಹಿರಿಯಾಗಿ ಸಂಪದಿಸಿ ಮೆರೆದರೂ
ತನ್ನ ತಾ ತಿದ್ದಿಕೊಳ್ಳದಿರೆ ವ್ಯರ್ಥ ಶರಣಾ ! ||೨||

ತನ್ನ ತಾ ತಿದ್ದಿಕೊಳ್ಳುತ ಬಾಳು ಬೆಳಗಿಸಲು
ಬರಿ ಓದಿ ಕೇಳಿದರೆ ಬಲು ಸಮಯ ವ್ಯರ್ಥ ನಿಜ
ಓದಿ ಕೇಳಿದರೂ ಸರಿ ಮನ ತಿದ್ದು ಶರಣಾ ! ||೩||

ತಿದ್ದಿದಾ ಮನವರಳಿ ತಾ ಜ್ಯೋತಿಯಂತಾಗೆ
ನಿನ್ನ ನೀ ಮರೆವ ಕಲೆಯರಿತು ಮನ ಶುದ್ಧಿಯಿಂ
ದೈವ ಶಿವಲಿಂಗದಲಿ ನಂಬಿ ನಡೆ ಶರಣಾ ! ||೪||

ಶುದ್ಧತೆಯ ಕಾಯುತಿಹ ಸತ್ಯವಂತರ ಬಾಳು
ಎಲ್ಲಿದ್ದರೇನಂತೆ? ಎಂತಿದ್ದರೇನಂತೆ?
ಎಲ್ಲೆಡೆಗು ಶಾಂತಿಯನೆ ಹರಡುವುದು ಶರಣಾ! ||೫||

ತನಗೆ ತಾ ಬೆಳಕಾಗಿ ಅನ್ಯರಿಗೆ ಹಿತವಾಗಿ
ದೈವ ಶಿವ ಲಿಂಗದಲಿ ದಾರಿಯನು ತೋರುವಗೆ
ಇಹದಲ್ಲು ಪರದಲ್ಲು ಸ್ವರ್ಗವಿದೆ ಶರಣಾ! ||೬||

ಶುದ್ಧವಿಹ ಜೀವಿಮನ ಸತ್ಯವನೆ ತಿಳಿಯುವುದು
ಸರ್ವಜ್ಞ ಬಲ ಧರಿಸಿ ಸರ್ವವನು ಮೀರುವುದು
ಅಂತಿರುವ ಶಕ್ತಿಮಯ ಬಾಳ್ನಡೆಸು ಶರಣಾ! ||೭||

ತನ್ನ ಬೆಳಗಿಸಿಕೊಂಡ ಹಿರಿ ಶರಣ ಜೀವನವು
ಸಕಲಕ್ಕು ಹಿರಿದಾಗಿ ಸರ್ವಮಾನ್ಯವದಾಗಿ
ಜಗಕೆಲ್ಲ ಗುರುವಾಗಿ ನಡೆಸುವುದು ಶರಣಾ! ||೮||

ಶಿವಲೀಲೆ ಲೋಕದಲಿ ಜೀವಿಗಳ ಸಂತೆಯಲಿ
ಸ್ವಾರ್ಥ ಸಂಗ್ರಹ ಆಸೆ ಅಭಿಮಾನವಿರದವರು
ಎಲ್ಲ ಮಾನವರಲ್ಲಿ ಹಿರಿಯಾತ್ಮರು ಶರಣಾ! ||೯||

ನೂರಾರು ಕಾರ್ಯಗಳ ಬಿಡುವಿರದೆ ಮಾಡಿದರು
ತನಗಾಗಿ ತನದೆಂಬುದಿರದೆ ಮಾಡಿದ ಕಾರ್ಯ
ಲಿಂಗೈಕ್ಯ ಸಾಧನವು ಅಂತರದಿ ಶರಣಾ! ||೧೦||

ತಾನು ತನದೆನ್ನುತಲಿ ತನಗಾಗಿ ನಿರ್ಮಿಸುತ
ತನದೆಂಬ ಅಜ್ಞಾನ ನಿದ್ರೆಯಲಿ ಭ್ರಮಿಸುವರು
ಮಮಕಾರದಗ್ನಿಯಲಿ ಬೇಯುವರು ಶರಣಾ ! ॥೧೧॥

ನೀ ಹುಟ್ಟಿ ಬಂದಿರುವೆ ಆವ ಕಾರಣದಿಂದ ?
ನೀ ಮಾಡಬಲ್ಲ ನಿಜ ಸಾಧನೆಯು ಪರಿಯೆಂತು ?
ಎಂದರಿತು ನಿಜ ಕಾರ್ಯ ಗುರಿಯು ಪಿಡಿ ಶರಣಾ ! ॥೧೨॥

ಯಾರುದರದಲೊ ಜನಿಸಿ ಯಾವ ಕಾರ್ಯಕೊ ಬಂದು
ಯಾರದೋ ಬದುಕನ್ನು ತನ್ನದೆನ್ನುತ ಕಟ್ಟಿ
ನಿನದಾದ ಕಿರಿ ಜಗದಿ ಅಂಧನಾಗದಿರು ಶರಣಾ ! ॥೧೩॥



೧೬

ಜೀವರಾಶಿಗಳು

ಬ್ರಹ್ಮಾಂಡ ತುಂಬಿಹುದು ಸರ್ವ ಶಕ್ತಿಯು ವಾಯು
ಸಕಲವನು ವ್ಯಾಪಿಸುತ ಬಹುಕಾಲ ನೆಲೆಸಿಹುದು
ವಾಯು ತತ್ವದ ಬಲವ ನೀನರಿ ಶರಣಾ ! ॥೧॥

ವಾಯು ತತ್ವಗಳಲ್ಲಿ ಗೋಚರಿಪ ಹಲವಸ್ತು
ಗೋಚರಿ ಸದಾ ವಸ್ತು ವಾಯುವಲಿ ನೆಲೆಸಿಹುದು
ನಿತ್ಯದಲಿ ಬೆಳೆಯುವುದು ಅರಿತಿರು ಶರಣಾ ! ॥೨॥

ವಾಯು ತತ್ವದಿ ಬೆಳೆದ ಹಲವು ವಿಧ ವಸ್ತುಗಳು
ದೃಷ್ಟಿ ಗೋಚರವಲ್ಲ ಜ್ಞಾನಕವು ಗೋಚರವು
ಜ್ಞಾನದಲಿ ಕಾಣುವುದು ಏನೆಂದರಿ ಶರಣಾ ! ॥೩॥

ಶುದ್ಧಾಶುದ್ಧಗಳೆಲ್ಲ ವಾಯುವಲಿ ಚಲಿಸುತಿರೆ
ಸಕಲವನು ಶುದ್ಧಿಸುತ ತಾ ಶುದ್ಧವಾಗುವುದು
ತಾ ಶುದ್ಧವಿಹುದೆಲ್ಲ ಕಡೆಯಿಹುದು ಶರಣಾ ! ॥೪॥

ಈ ತೆರದಿ ಜಗತುಂಬಿ ನಲಿಯುತಿಹ ವಾಯುವಲಿ
ಜೀವವಾಯುವೆನಿಸಿದ ಶಕ್ತಿಮಯ ವಾಯುವಿದೆ
ಆ ಶಕ್ತಿ ವಾಯುವೇ ಜೀವಗಳು ಶರಣಾ ! ||೫||

ಜೀವದಣು ವಾಯುವಲಿ ಬಲುವಿಧದ ಅಣುವಿಹವು
ವಿಧ ವಿಧದ ಅಣುತುಂಬಿ ವಿಧ ವಿಧದಿ ಬೆಳೆಯುವುವು
ಆ ವಾಯು ಬಲವೆಲ್ಲ ಜಗ ಪ್ರಾಣ ಶರಣಾ ! ||೬||

ಶುದ್ಧ ಬಲವಾಯುವಿಹ ಜೀವದಣು ತುಂಬಿರುತ
ಪಂಚಭೂತದ ಬಲದಿ ಮನುಜ ದೇಹದಿ ನೆಲೆಸೆ
ಮಾನವನೆಂಬ ಜೀವಿ ಬೆಳೆಯುವನು ಶರಣಾ ! ||೭||

ಮಾನವನ ಜೀವದಣು ದೇಹಾಂಗ ಬಲ ಕೂಡಿ
ಸಕಲ ದೇಹಾಂಗಗಳ ಬೆಳೆಸುವುದು ತನ ಬಲದಿ
ಪಂಚಬಲ ತತ್ವದಲಿ ಬೆಳೆಸುವುದು ಶರಣಾ ! ||೮||

ಆಕಾಶದಿಂ ರಾಗದ್ವೇಷ ಭಯ ಮೋಹಗಳು
ವಾಯುವಿನಿಂ ಪ್ರಾಣಾಪಾನಾದಿ ವಾಯುಗಳು
ಅಗ್ನಿಯಿಂ ಹಸಿವು ನೀರಡಿಕೆ ನಿದ್ರಾಲಸ್ಯಗಳು ಶರಣಾ ! ||೯||

ಜಲದಿಂದ ಕಫ ಪಿತ್ತ ರಕ್ತ ಮೂತ್ರಾದಿಗಳು
ಪೃಥ್ವಿಯಿಂ ನರ ರೋಮ ಚರ್ಮಾಸ್ಥಿ ಮಾಂಸಗಳು
ಪಂಚ ಮಹಾಭೂತಗಳಿಂದಲೇ ತನುವು ಶರಣಾ ! ||೧೦||

ಸಕಲ ತತ್ವಗಳಲ್ಲಿ ತಸುವಿಂತು ಬೆಳೆಯುಲು
ಮೂಲ ತತ್ವವದಾಗಿ ಜೀವತತ್ವವಿಹುದು
ಈ ದೇಹ ಧಾರಣಕೆ ಜೀವವಾಗಿದೆ ಬೇರು ! ॥೧೧॥

ಜೀವದಾ ಬೇರಿನಲಿ ಸಕಲಬಲ ತುಂಬಿರಲು
ಸರ್ವಾಂಗ ಚೆಲುವಿಂದ ಬೆಳೆಯುವುದು ಈ ಕಾಯು
ಬೇರು ಬಲವಿಹ ಜೀವವನು ಸಲಹು ಶರಣಾ ! ॥೧೨॥

ಜೀವಿಗಳ ಬಾಳಿನಲಿ ಬೆಳಕನ್ನು ಚೆಲ್ಲಲು
ಜೀವದಣು ಬಲವಿದ್ದು ಧೀರನಾಗಿರಬೇಕು
ಬಲವು ತಾ ಕೊರವಿರಲು ಸರಿಪಡಿಸು ಶರಣಾ ! ॥೧೩॥

ಜೀವದಣು ಬಲವನ್ನು ಸರಿಕ್ರಮದಿ ಬೆಳೆಸಿದರೆ
ಸಕಲ ಸುಕೃತದ ಫಲದಿ ಸುಖ ಬಲವು ದೊರೆಯುವುದು
ಸುಖ ಶಾಂತಿ ಜೀವಬಲ ಬೆಳೆಸಿಕೋ ಶರಣಾ ! ॥೧೪॥

ಜೀವದೀ ಅಣುವಿನಲಿ ಸಕಲ ಶಕ್ತಿಗಳುಂಟು
ದೇಹಬಲ ಬೆಳೆಯುಲು ಜ್ಞಾನ ಬುದ್ಧಿ ವೃದ್ಧಿಸಲು
ಹಿರಿ ಶಕ್ತಿ ಬಲವಿಹುದು ತಿಳಿ ನೀನು ಶರಣಾ ! ॥೧೫॥

ಸರ್ವ ಜನ ಜೀವನಕೆ ಜೀವದಣುಗಳೆ ಮೂಲ
ಶೂನ್ಯವಹುದು ಸಕಲವು ಜೀವದಣುವಿಲ್ಲದಿರೆ
ಬಾಳ ಮೂಲವನರಿತು ನೀ ಬದುಕು ಶರಣಾ ! ॥೧೬॥

ಜೀವದಣು ಸರಿಯಿರಲು ಶಾಂತಿ ಸುಖ ತುಂಬಿಹುದು
ದೇಹಮನ ಜೀವನವು ಸ್ವರ್ಗಕಿಂತಲೂ ಮಿಗಿಲು
ಅರಿತು ನೀ ಜೀವದಣು ರಕ್ಷಿಸಿಕೊ ಶರಣಾ ! ॥೧೭॥

ಎಲ್ಲೆಡೆಯು ವಾಯುವಲಿ ಪ್ರಾಣವಾಯುಗಳುಂಟು
ಪ್ರಾಣವಾಯುವಿನಣುವೆ ದೇಹವನು ಬೆಳೆಸುವುದು
ತನ್ನ ಅಣು ಬಲದಂತೆ ತನು ರಚನೆ ಶರಣಾ ! ॥೧೮॥

ಆಕಾಶ ಭೂಗರ್ಭ ವಾಯುಜಲಗಳಲೆನಿತೊ
ಕೋಟ್ಯಾನುಕೋಟಿ ಜೀವದಣುಗಳು ತುಂಬಿಹವು
ಜೀವದಣು ವೈಚಿತ್ರ್ಯ ಅಪಾರ ತಿಳಿ ಶರಣಾ ! ॥೧೯॥

ಕೋಟ್ಯಾಂತರಣುಗಳಲಿ ಕ್ರಿಮಿಕೀಟ ಜೀವಾಣು
ಪಶುಪಕ್ಷಿ ಜೀವಾಣು ಮಾನವ ಜೀವಾಣು
ವೃಕ್ಷ ಜೀವಾಣುಗಳು ಸಕಲ ವಿದೆ ಶರಣಾ ! ॥೨೦॥

ಜೀವಾಣು ಗುಣದಂತೆ ದೇಹ ಧರಿಸುವುವೆಲ್ಲ
ಜನಿಜನಿಸಿ ಮಡಿಯುತಲಿ ಅಣು ಬೇರೆಯಾಗಿಹುದು
ಜನನವಿರದಣುವೆ ಸುಖಿ ಹಿರಿ ಜೀವ ಶರಣಾ ! ॥೨೧॥

ಪಂಚತೆರ ಜೀವಾಣು ಗಣನೆಗೆ ಎಟುಕದಷ್ಟು
ಕ್ರಿಮಿಕೀಟ ಮೃಗಪಕ್ಷಿ ಸರ್ಪ ಜೀವಾಣುಗಳು
ಮನುಜ ಜೀವಾಣುಗಳು ಎಲ್ಲ ಕಡೆ ತುಂಬಿಹವು ಶರಣಾ ॥೨೨॥

ತನ್ನಣುವಿನ ಬಲದಲಿ ತಾ ಬಂದು ಬೆಳೆಯುತಲಿ
ತನ್ನಿಂದಲೇ ತನ್ನ ಬಲವೃದ್ಧಿಗೊಳಿಸುತಿರೆ
ತನ್ನ ಜೀವನದಣುವು ಬಲಿಯುವುದು ಶರಣಾ ! ||೨೩||

ಮಾನವನ ದೇಹವನು ಬೆಳೆಸುವ ಜೀವಾಣು
ಆಕಾಶದಲಿ ವಿವಿಧ ಹಂತದಲಿ ತುಂಬಿಹವು
ನಾಲ್ದಶ ಶಕ್ತಿಯಲಿ ನೆಲಸಿಹವು ಶರಣಾ ! ||೨೪||

ನಾಲ್ಕುದಶ ಗುಂಪುಗಳೆ ನಾಲ್ಕುದಶ ಮನೆಗಳು
ನಲವತ್ತು ಗುಣದಿಂದ ಬಲತುಂಬಿ ಬೆಳೆಯುತಲಿ
ಜಗದಿ ಜೀವನ ನಡೆಸಿ ಕಾಣುತಿವೆ ಶರಣಾ ! ||೨೫||

ನಲವತ್ತು ಗುಂಪಾಗಿ ಜೀವಿಸಿಹ ಜೀವಾಣು
ಉತ್ತಮ ಮಧ್ಯಮ ಅಧಮವೆಂದು ಮೂರು ಬಗೆಯಿಹವು
ಪ್ರತಿ ದಳದಿ ಹದಿಮೂರು ಗುಣವಿಹವು ಶರಣಾ ! ||೨೬||

ಅಧಮ ಹದಿಮೂರು ಮನೆ ಮಧ್ಯ ಹದಿಮೂರು ಮನೆ
ಉತ್ತಮ ಜೀವಾಣು ಹದಿಮೂರು ಮನೆಯಾಗಿ
ಮೂವತ್ತೊಂಭತ್ತು ಮನೆಯಾಗಿಹವು ಶರಣಾ ! ||೨೭||

ವಿಧ ವಿಧದ ಜೀವಾಣು ವಿಧ ವಿಧದ ಬಲ ತುಂಬಿ
ವಿಧ ವಿಧದ ಮನ ಗುಣದಿ ಬಹು ತೆರದಿ ಬಾಳಿಹವು
ಇದುವೆ ಮಾನವ ಬಾಳ ವೈಚಿತ್ರ್ಯ ಶರಣಾ ! ||೨೮||

ಬುದ್ಧಿ ಮನ ತನು ಜ್ಞಾನ ಭಾವ ರುಚಿಗಳಿವೆಲ್ಲ
ಆವ ತೆರ ಅಣು ಬಲವೊ ಆ ತೆರದಿ ಬೆಳೆಯುವುವು
ಸತ್ಯದೀ ಸಂಗತಿಯನರಿತುಕೋ ಶರಣಾ ! ॥೨೯॥

ವಿವಿಧ ಬಲದಣುವಿರುತ ವಿಥ ವಿಥದಿ ಬೆಳೆಯುತಿರೆ
ವಿಥ ವಿಥದ ಜನರುಂಟು ಬಗೆ ಬಗೆಯ ಬಾಳುಂಟು
ಇದುವೆ ಆ ಜೀವದಣು ಮರ್ಮವರಿ ಶರಣಾ ! ॥೩೦॥

ಬುದ್ಧಿ ಬಲ ಭಾವ ಬಲ ಎಲ್ಲರಲಿ ಸಮವಿಲ್ಲ
ಜ್ಞಾನ ಬಲ ದೇಹ ಬಲದೆಲ್ಲರೂ ಸಮರಲ್ಲ
ಗಂಥ ಗುಣಗಳು ಬೇರೆ ಬೇರೆ ಬಗೆ ಶರಣಾ ! ॥೩೧॥

ಸಕಲ ಬಲದಣುಗಳಿಹ ಜೀವಾಣುಗಳ ಕಂಡು
ಸರಿ ಕ್ರಮದಿ ಬಲವಿತ್ತು ಬೆಳೆಸಿ ಕಾಯುತಲಿದ್ದು
ಹಿರಿ ಶಕ್ತಿ ಜ್ಞಾನಶಾಲಿಗಳ ಬೆಳಗಿಸು ಶರಣಾ ! ॥೩೨॥

ಬಲದಲ್ಲಿ ಕೊರವಿರುವ ಜೀವಾಣುಗಳಿಗೆಲ್ಲ
ಶಾಸ್ತ್ರವಿಧಿ ನೇಮದಲಿ ಸರಿ ಕ್ರಮದಿ ಬಲತುಂಬಿ
ಸಕಲ ಸುಖ ಜ್ಞಾನದಲಿ ಬಾಳುವಂತೇ ಮಾಡು ಶರಣಾ ! ॥೩೩॥

ಜೀವ ಬಲದಣುವಿನಲಿ ದೇಹಬಲದಣುಗಳು
ತನ್ನ ಬಲದೊಲು ಬಣ್ಣರೂಪಗಳ ತಾಳುವುದು
ಆ ಬಲದ ದೇಹವನು ಬದಲಿಸಲಾಗದು ಶರಣಾ ! ॥೩೪॥

ವಿದ್ಯೆ ಬುದ್ಧಿಯು ಬಲದಿ ಜ್ಞಾನವನು ಬೆಳೆಸುತಲೆ
ಜೀವಾಣು ಮೂಲಬಲ ಗುಣಬಲವ ಬೆಳೆಸಲು
ಸಾಧನದ ಶಕ್ತಿಯಲಿ ಸುಲಭವಿದೆ ಶರಣಾ ! ॥೩೫॥

ಸಾಧನದ ಬಲದಲ್ಲಿ ಮೂಲ ಜೀವಾಣುವಿಗೆ
ಸಕಲ ಶಕ್ತಿಯು ತುಂಬಿ ಬೆಳೆಸುವುದು ಸುಲಭವಿದೆ
ಆ ತೆರದ ಸಾಧನವೆ ಧರ್ಮತಿಳಿ ಶರಣಾ ! ॥೩೬॥

ಬಲವಿರದ ಅಣುಗಳು ಬಲಗೊಳುವ ಪರಿಯನರಿ
ಆಸೆ ಭಾವನೆಯಿಂದ ದೇಹಕಾರ್ಯವಗೈಯ್ಯ
ವಾಸನೆಗಳಾಗುತಲಿ ಬಲಿಯುವುವು ಶರಣಾ ! ॥೩೭॥

ಅಣುಬಲವ ಬೆಳೆಸಲು ಕಾರ್ಯಗಳ ಮಾಡುತಲಿ
ಕರ್ಮಯೋಗದ ಮಾರ್ಗ ಬಿಡದೆ ಹಿಡಿಯುತ ನಡೆಯೆ
ತನ್ನ ಜೀವದ ಬಲವು ವೃದ್ಧಿಪುದು ಶರಣಾ ! ॥೩೮॥

ಕೊರನಾದ ಹಾಗೆಲ್ಲ ಮಾನವ ಜೀವಾಣು
ವಿಧ ವಿಧದ ವಾಸನೆಯು ಮನಗಳನು ತಾಳುವುದು
ಪೂರ್ಣ ಜೀವಾಣುವನು ನೀ ಬೆಳೆಸು ಶರಣಾ ! ॥೩೯॥

ವಿಧ ವಿಧದ ಭಾವಗಳು ವಿಧ ವಿಧದಭಿರುಚಿಗಳು
ವಿಧ ವಿಧದ ಕಾರ್ಯಗಳು ವೈಚಿತ್ರ್ಯಮಯ ಬದುಕು
ಜೀವಾಣು ಕಾರ್ಯದೊಳು ಬಾಳುವೆಯು ಶರಣಾ ! ॥೪೦॥

ಹಲವು ವಿಧ ಬಲವಿರುತ ಹಲವು ಬಲ ಕೊರವಿರಲು
ಆವ ಬಲವನುಗಳಿಸಬೇಕೆಂಬುದನರಿಯಲು
ಹಿರಿ ಜ್ಞಾನ ಸಾಧನವ ಮಾಡಬೇಕು ಶರಣಾ ! ॥೪೧॥

ಬಲವು ಬೇಕಾದವರು ಬಲಗಳರಿಯಲು ಬೇಕು
ತನ್ನ ಮನ ಛಲ ಶ್ರದ್ಧೆಗಳಲಿ ಸಾಧಿಸಬೇಕು
ಅನ್ಯರಿಂದಲಿ ತಿದ್ದಿಕೊಳ್ಳಲಾಗದು ಶರಣಾ ! ॥೪೨॥

ಅರಿವಿಂದೆ ಫಲವಿಲ್ಲ ಛಲವಿಂದೆ ಫಲವಿಲ್ಲ
ಅರಿವು ಛಲಗಳು ಸೇರೆ ಸಾಧನೆಯು ಸುಲಭವು
ಅರಿವಿಲ್ಲದಾ ಛಲವು ಬಲು ವ್ಯರ್ಥ ಶರಣಾ ! ॥೪೩॥

ಜ್ಞಾನಿಗಳ ಭೋಧದಲಿ ಜ್ಞಾನ ಗ್ರಂಥಗಳಲ್ಲಿ
ಧ್ಯಾಸ ಸಾಧನೆಗೈದು ಸರಿ ಮಾರ್ಗ ದರ್ಶನದಿ
ಅರಿವನ್ನು ಸಂಪದಿಸಿ ಸಾಧಿಸದನು ಶರಣಾ ! ॥೪೪॥

ಕೊರವಿರುವ ಬಲಗಳನು ಪಡೆವುದಕೆ ಸಾಧಿಸುತ
ಅನ್ಯ ಬಲಗಳನಲ್ಪ ಮನದಲ್ಲಿ ನಿಲಿಸದಲಿ
ನಿನ್ನ ಪರಿಪೂರ್ಣತೆಗೆ ಮನವಿರಿಸು ಶರಣಾ ! ॥೪೫॥

ಬಲವ ಬೆಳೆಸುವ ವೇಳೆ ಮನವು ನಿಶ್ಚಲವಿರಲಿ
ಮನದಿ ನೂರೆಂಟಲೆಯು ಬರದಂತೆ ಸಾಧಿಸುತ
ನಿನ್ನ ಸಾಧನ ಬಲವ ಬೆಳೆಸುತಿರು ಶರಣಾ ! ॥೪೬॥

ಅನ್ಯ ಯೋಚನೆ ತೊರೆದು ಅನ್ಯವನು ಚಿಂತಿಸದೆ
ಅನ್ಯ ಭ್ರಮೆಗಳನಳಿಸಿ ಸಾಧನೆಯು ಸಲ್ಲಿಸಿರ
ಸಾಧನೆಯು ಬಲವೆಂತು ವ್ಯರ್ಥವಹುದು ಶರಣಾ ? ! ||೪೭||

ಬಲವ ಸಂಪಾದಿಸಲು ಮನವೊಂದು ಧೃಢವಿರಲಿ
ಅಲೆಯಿರದ ಮನವಿರಲಿ ನಿರ್ಮಲ ಹೃದಯವಿರಲಿ
ಅನುದಿನದ ಸಾಧನಕೆ ಸತ್ಯ ಫಲ ಶರಣಾ ! ||೪೮||

ಪರಿಪೂರ್ಣ ಭಾವನದಿ ಬಲಗೊಳ್ಳುವುದು ಬಾಳು
ದೋಷಗಳ ಕಡೆಗಲ್ಪ ನೋಡಿ ಹಿಮ್ಮೆಟ್ಟದಿರು
ಪೂರ್ಣದಲಿ ಒಮ್ಮನವ ಭದ್ರಗೊಳಿಸು ಶರಣಾ ! ||೪೯||

ಪರಿಪೂರ್ಣ ಶಕ್ತಿಯನು ಜೀವನದಿ ಧರಿಸಿರಲು
ಸರ್ವಶಕ್ತಿಯು ಪಡೆದು ಸರ್ವಜ್ಞಬಲ ಪಡೆವೆ
ಸರ್ವ ಸಾಧನೆಗೈಯೆ ಶಕ್ತನಾಗುವೆ ಶರಣಾ ! ||೫೦||

ಮಾನವಗೆ ಸಕಲವನು ಸಾಧಿಸಲು ಸಾಧ್ಯವಿದೆ
ನಿನ್ನ ಸಾಧನೆ ಮಾತ್ರ ಸತ್ಯ ಸಂಪದಕಿರಲಿ
ವ್ಯರ್ಥ ಸಂಪದಕಾಗಿ ಕಳೆಯದಿರು ಶರಣಾ ! ||೫೧||

ಸಕಲ ಮಾನವರೆಲ್ಲ ಸಾಧಿಸುವ ಸಂಪದವು
ಕಿರಿಯೆಂದು ತಿಳಿಯದೇ ಸುಖಿಸದೇ ದುಃಖಿಪರು
ಅಂಥ ಕಿರುತನದ ಬಾಳು ಬಯಸದಿರು ಶರಣಾ ! ||೫೨||

ಸತ್ಯ ಶಾಂತಿಯು ಜನ್ಮ ಸಾಧನದಿ ದೊರೆಯುವುದು
ಹಿರಿಯ ಬಲ ಸಂಪದವು ಕೋಟಿ ಜೀವಕೆ ನೆರಳು
ಕೋಟಿ ಜೀವಕೆ ಶಾಂತಿ ನೀಡಲರಿ ಶರಣಾ ! ||೩೧||

ಹಿರಿಯಾದ ಹೊನ್ನಗಣಿ ನಿರ್ಮಿಸುವ ಬಲವಿರಲು
ಕಿರಿಯಾದ ಕಲ್ಲುಗಣಿ ತೋಡುವುದಕ್ಕಿಳಿಯುವರೆ ?
ಹಿರಿಯೆನಿಪ ನಿರ್ಮಾಣ ಕಾರ್ಯ ಪಿಡಿ ಶರಣಾ ! ||೩೨||

ಪರುಷಮಣಿ ಬಲದಿಂದ ಲೋಹ ಹೊನ್ನಾಗುವುದು
ಲೋಹ ಹೊನ್ನಾದಂದು ಹಿರಿಯಲ್ಲ ಬಾಳಿನಲಿ
ಅನ್ಯವನು ಪರುಷಮಣಿ ಮಾಡಲರಿ ಶರಣಾ ! ||೩೩||

ನಿನ್ನ ಸಾಧನೆಯ ಫಲ ಪರುಷಮಣಿ ಬಲವಾಗಿ
ಕೋಟಿ ಲೋಹದ ಜೀವಗಳ ಚಿನ್ನವಾಗಿಸಲಿ
ಹೊನ್ನಾದ ಜೀವಿಗಳ ಪರುಷವಾಗಿಸು ಶರಣಾ ! ||೩೪||

ಮೊದಲು ನೀ ಬಲ ಗಳಿಸು ಅನ್ಯರಿಗೆ ಬಲ ನೀಡು
ಅನ್ಯರೆಲ್ಲ ನಿನ್ನಂತೆ ಬಲವೀವ ತೆರ ಮಾಡು
ಅಂಥ ಹಿರಿ ಜೀವಿಗಳೆ ಮಹಾತ್ಮರು ಶರಣಾ ! ||೩೫||

ಪರುಷವಾಗುತ ಶಿಲೆಯು ಪರುಷ ಶಕ್ತಿಯ ಧರಿಸೆ
ಯುಗ ಯುಗದಿ ಶಾಶ್ವತದಿ ಬದಲಿಸದ ಬಲವಹುದು
ಅಂತಿರ್ಪ ಬಲ ಪರುಷ ನೀನಾಗು ಶರಣಾ ! ||೩೬||

ದುಃಖ ಸಾಗರದಲ್ಲಿ ತೇಲಿ ಮುಳುಗುವ ಬದುಕು
ಸುಖದ ಸಾಗರದಲ್ಲಿ ಶಾಶ್ವತದಿ ತೇಲಲು
ಮಹಾಗುಣಿಯಾಗಿದ್ದು ಬಲ ಧರಿಸು ಶರಣಾ ! ॥೫೯॥

ಹಿರಿ ಜೀವದಣುವಲ್ಲಿ ಸರ್ವಜ್ಞತೆಯ ಶಕ್ತಿ
ಸತ್ಯತೆ ಮಮತೆ ಕರುಣೆಗಳೆ ಬಲವಾಗಿರಲು
ಮತ್ತನ್ಯ ಬಲವಲ್ಪವಲ್ಲಿರದು ಶರಣಾ ! ॥೬೦॥

ಸಕಲ ಬಲ ತುಂಬಿರುವ ಭದ್ರ ಜೀವನದಲ್ಲಿ
ಕಿರಿಬಲವು ಮೆರೆಯುತಲಿ ನೆಲೆಸಲೆಡೆ ಸಿಗದಲ್ಲಿ
ಕಿರಿಬಲವ ತುಂಬಲು ಬಯಸದಿರು ಶರಣಾ ! ॥೬೧॥

ಸ್ವಪ್ನ ಜಾಗ್ರತೆ ನಿದ್ರೆ ತ್ರಿವಿಧಾವಸ್ಥೆಗಳಲ್ಲಿ
ಎಡೆ ಬಿಡದೆ ಸಾಧಿಸಲು ಸಫಲತೆಯು ದೊರೆಯುವುದು
ಸತ್ಯ ಜ್ಞಾನ ಶಕ್ತಿಗಳು ನಿತ್ಯಬಲ ಶರಣಾ ! ॥೬೨॥

ಹಿರಿ ಶಕ್ತಿ ಬಲಕಾಗಿ ಪರಿಪೂರ್ಣ ಗುರಿಗಾಗಿ
ನಿತ್ಯ ಸಾಧಕನಾಗಿ ನೀ ಬಾಳುತಿರುವಲ್ಲಿ
ಮನದಿ ಕಿರಿಭಾವಕೆಡೆ ನೀಡದಿರು ಶರಣಾ ! ॥೬೩॥

ಸತ್ಯ ಸಂಪದಕಾಗಿ ಶರಣತ್ವ ಬಲಕಾಗಿ
ಸಾಧಿಸುವ ಹಿರಿ ಶುದ್ಧ ಬಲಶಾಲಿ ನೀನಾಗು
ಅಂಥ ಹಿರಿ ಬಲವಾಗಿ ಬೆಳಕಾಗು ಶರಣಾ ! ॥೬೪॥

ಮಾನವನ ಜನುಮದಲಿ ಒಂದೆ ಜೀವನದಲ್ಲಿ
ಸಕಲ ಶಕ್ತಿಯು ಪಡೆವ ಹಿರಿಶಕ್ತಿ ಬಲವಿಹುದು
ಅಂಥ ಹಿರಿ ಬಲ ಮರೆತು ಕಳೆಯದಿರು ಶರಣಾ ! ||೬೫||

ಉತ್ತಮ ಜೀವಿಗಳು ಸುಖದಲ್ಲು ತಿಳಿಯುವರು
ಮಧ್ಯಮ ಜೀವಿಗಳು ತಾಪದಲಿ ತಿಳಿಯುವರು
ಕಷ್ಟ ನಷ್ಟದಿ ಕೂಡ ತಿಳಿಯರಧನೀಗಳು ಶರಣಾ ! ||೬೬||

ಜೀವಗುಣ ಬಲದಂತೆ ಭಾವನೆಯು ತಾ ಮೂಡಿ
ಬಾಳಿನಲಿ ಮನವನ್ನು ದುಡಿವಂತೆ ಮಾಡುವುದು
ಸತ್ಯದಾ ಮನದಿಂದ ಬೆಳಗಲರಿ ಶರಣಾ ! ||೬೭||

ಮನವೆಂಬ ಸಾಗರದಿ ನೂರೊಂದು ಅಲೆಗಳು
ಸಹಜದಲಿ ಏಳುವುವು ಅಪ್ಪಳಿಸಿ ನೊರೆಯುವುವು
ಬಾಳಿನಲಿ ದುಃಖಗಳ ತರುವುವು ಶರಣಾ ! ||೬೮||

ಮನದ ಸಾಗರದಲ್ಲಿ ಅಲೆಗಳೇಳದ ರೀತಿ
ಭಾವ ಬಲ ತುಂಬಿಯೋ ಹಠದಿಂದಲೋ ನಿಲಿಸು
ಅಂತು ಸಾಧನೆಗೈಯೆ ಜೀವಬಲ ಶರಣಾ ! ||೬೯||

ಜೀವ ಬಲ ಹೆಚ್ಚಿಸಲು ಮನಬಲವೆ ಮೂಲವು
ಮನ ಬಲದಿ ಜೀವ ಬಲ ಹೆಚ್ಚಿಸುತಲಿರು ನಿಜದಿ
ಮನ ಬಲದಿ ಜೀವವನು ತೇಜಗೊಳಿಸು ಶರಣಾ ! ||೭೦||

ಹಿರಿ ಬಲದ ಜೀವಸುಖ ಕಿರಿಜೀವಕರ್ಪಿಸಲು
ಕಿರುಬಲದ ಜೀವವೇ ಹಿರಿ ಬಲವ ಧರಿಸುವುದು
ಹಿರಿ ಶಕ್ತಿ ಸುಖಗಳಿಸಿ ನೀಡಿಂತು ಶರಣಾ ! ॥೭೧॥

ಮನದ ಹಿರಿ ಸಾಗರದಿ ಅಸ್ಮ ವಸ್ತುಗಳಿರದೆ
ದೈವಿಕತೆ ತರಬಲ್ಲ ಹಿರಿವಸ್ತು ತುಂಬುತಿರು
ಅಂಥ ಹಿರಿಮೆಯ ವಸ್ತು ಅಲೆಯಲ್ಲ ಶರಣಾ ! ॥೭೨॥

ದೈವಗುಣ ಜೀವದಲಿ ದೈವದಲೆ ತುಂಬಿರಲು
ದೈವ ಜೀವವೆರಡರ ಗುಣವೆಲ್ಲ ಒಂದಾಗಿ
ಸತ್ಯ ಜೀವದ ಬಲವು ತೇಜಿಪುದು ಶರಣಾ ! ॥೭೩॥

ವಾಯುವಲಿ ಬೆಳೆದಿರುವ ಜೀವದಾ ಬಲಕಾಗಿ
ಮನವಾಯು ಬೆಳಗುವಲಿ ನಿಗ್ರಹವೆ ಆಹಾರ
ಜೀವಬಲ ವಾಯು ಬಲಗೊಳ್ಳುವುದು ಶರಣಾ ! ॥೭೪॥

ಹಗಲಿರುಳು ದೈವದಲಿ ತುಂಬಿದಾ ಮನ ವಾಯು
ಭಾವನದ ಮನವಾಯು ನಿಗ್ರಹದ ಸ್ಥಿರವಾಯು
ಜೀವನದಿ ಬಲವಿತ್ತು ಸಲಹುವುದು ಶರಣಾ ! ॥೭೫॥

ಚಾಳಿನಾಂತರ್ಯಕೇ ವಾಯುವದು ಮೂಲವು
ವಾಯು ಬಲದಂತೆಯೇ ಚಾಳಿನಾಂತರ್ಯವು
ವಾಯುಬಲ ಗುಣವನ್ನು ಮರೆಯದಿರು ಶರಣಾ ! ॥೭೬॥

ಪ್ರಾಣಶಕ್ತಿಯದಾಗಿ ವಾಯುವೊಂದೇ ಮೂಲ
ಎಲ್ಲ ಕಡೆ ತುಂಬಿರುತ ಚೈತನ್ಯವಾಗಿರುತ
ಸಕಲ ಜ್ಞಾನದ ಬಲದಿ ಚಲಿಸುವುದು ಶರಣಾ ! ||೭೭||

ಅಜ್ಞಾನದಲರಿಯದೇ ಪ್ರಾಣಬಲ ಮರೆಯದಿರು
ಅವಿಚಾರದಿಂದ ನೀ ಹುಸಿಯೆಂದುಕೊಳ್ಳದಿರು
ಹುಸಿಯೆಂದು ನಿಂತರದು ನಶಿಸುವುದು ಶರಣಾ ! ||೭೮||

ಜಗದ ಚಲನಕೆ ಮೂಲ ಜೀವ ಚಲನಕೆ ಮೂಲ
ಜೀವನದ ಹಿರಿ ಶಕ್ತಿ ತುಂಬಲೂ ಅದೆ ಮೂಲ
ಅಂಥ ಹಿರಿ ವಾಯುವಿಗೆ ನಮಿಸಯ್ಯ ಶರಣಾ ! ||೭೯||

ವಾಯುವಲಿ ತೇಜಿಸುವ ಹಿರಿಶಕ್ತಿ ಜೀವಾಣು
ಸರ್ವಬಲ ಸರ್ವಜ್ಞ ಸರ್ವವ್ಯಾಪಕ ಶಕ್ತಿ
ಅದುವೆ ಶಿವಶರಣರಾ ಪ್ರಾಣಲಿಂಗವು ಶರಣಾ ! ||೮೦||

ಲಿಂಗವೆಂಬುದು ಶಕ್ತಿ ಲಿಂಗವೆಂಬುದು ನಾಮ
ಅಂತಿರುವ ಪ್ರಾಣದಾ ಲಿಂಗಮಯ ಶಕ್ತಿಯನು
ಶೈವರಾರಾಧಿಪರು ಪ್ರಾಣವೇ ಲಿಂಗ ಶರಣಾ ! ||೮೧||

ಪೂರ್ಣಬಲ ಜೀವಾಣು ಮೂಲದಲಿ ತಾನಿರಲು
ತಾನು ತನ್ನದು ತನಗೆ ಎಂಬ ಹಂಬಲವಿರದು
ಹಂಬಲವ ತೊರೆದಲ್ಲಿ ಪೂರ್ಣಾಣು ಶರಣಾ ! ||೮೨||

ಸುಮ್ಮನೇ ತಾನಿರಲು ತಾಪ ದುಃಖಗಳಿರದೆ
ಮನದಿ ಅಲೆಯಿಲ್ಲದಿರೆ ಅದೇ ಶಿವಲಿಂಗ ಬಲ
ಸುಮ್ಮನಿರೆ ತಾನಂದು ಶಿವಲಿಂಗ ಶರಣಾ ! ||೮೩||

ದೇಹದಾಸೆಯುನೆಲ್ಲ ಅಳಿದಂದು ಮನದಾಸೆ
ಮನದಾಸೆ ಅಳಿದಂದು ಪ್ರಾಣದೊಳಗಿರುವಾಸೆ
ಸಕಲ ಆಸೆಗಳಳಿಯೆ ಲಿಂಗನವ ಶರಣಾ ! ||೮೪||

ಜಗದಲ್ಲಿ ಜನ್ಮಿಸುತ ಸಕಲ ತತ್ವಗಳರಿತು
ತತ್ವಗಳಿಗಂಟೆದಲಿ ಭಕ್ತ ತಾನಾಗಿರಲು
ಸಕಲ ತೆರ ಬಲವುಂಟು ಭಕ್ತನಿಗೆ ಶರಣಾ ! ||೮೫||

ಭಾವಿಸು ಜಗವೆಲ್ಲ ಲಿಂಗದುಗಮಿಸಿತೆಂದು
ದೃಷ್ಟಿಸು ಜಗವೆಲ್ಲ ಲಿಂಗದ ರೂಪವೆಂದು
ಜಪಿಸು ಆರಾಧಿಸು ನಿತ್ಯ ಲಿಂಗವ ಶರಣಾ ! ||೮೬||

ಮನವೆತ್ತ ಹರಿದರೂ ಲಿಂಗರೂಪಕೆ ಹರಿಸು
ಮನವೇನು ನುಡಿದರೂ ಲಿಂಗಬಲವನೆ ನುಡಿಸು
ಮನದೆಲ್ಲ ಭಾವದಲಿ ಶಿವನಿರಲಿ ಶರಣಾ ! ||೮೭||

ಭಕ್ತಿಯಾ ಬೀಜವನು ದೈವ ಶಿವ ತೋಟದಲಿ
ಶ್ರದ್ಧೆಯಿಂದಲಿ ನೆಟ್ಟು ಸುಗುಣದಾ ಸಸಿ ಬೆಳೆಸು
ಜ್ಞಾನದಾ ಮರವಾಗೆ ಲಿಂಗವೇ ಫಲ ಶರಣಾ ! ||೮೮||

ಇಂದ್ರಿಯ ನಿಗ್ರಹಕಾಗೆ ನೂರೆಂಟು ಸಾಧನವು
ಮನೋನಿಗ್ರಹಕಾಗೆ ನೂರೆಂಟು ಯೋಗಗಳು
ಇಂದ್ರಿಯಗಳನು ತೊಳೆದರುಳಿವುದೇ ಲಿಂಗ ಶರಣಾ ! ॥೮೯॥

ಇಂದ್ರಿಯಗಳಲೆಗಳಿಗೆ ಮನವೆ ಮೂಲ ಕಾರಣ
ಭಕ್ತಿಯಿಂದಲಿ ನಿಲಿಸು ಯೋಗದಿಂ ಸ್ಥಿರಗೊಳಿಸು
ಎಂತು ನಿಲಿಸಿದರೇನು ? ಬಂಬಂದೇ ಶರಣಾ ! ॥೯೦॥

ಮನ ಪೂರ್ಣ ನಿಲ್ಲಿಸಲು ಮೂಲದರಿವಾಗುವುದು
ಮೂಲವನ್ನರಿಯುತಲಿ ಲಿಂಗವನು ಧರಿಸುತಿರು
ಲಿಂಗದಿ ಲಿಂಗವಾಗೆ ಮನಲಯವಿದೇ ಶರಣಾ ! ॥೯೧॥

ಸಂಸಾರಿ ತಾನಿರಲು ಸರಿಕರ್ಮವಾಚರಿಸಿ
ಲಿಂಗವನು ಪೂಜಿಸುತ ಲಿಂಗದಲಿರಲಿ ಭಕ್ತಿ
ನಿಷ್ಕಾಮದಲಿ ಬಾಳೆ ನಿಜದರಿವು ಶರಣಾ ! ॥೯೨॥

ರಾಜಯೋಗ ಹಠಯೋಗ ಮಾರ್ಗದಲಿ ಸನ್ಯಾಸಿ
ಮನವ ನಿಲಿಸುತ ಜ್ಞಾನಲಿಂಗವನು ಪೂಜಿಸಲು
ಕರ್ಮವಿರದವನಾಗೆ ನಿಜದರಿವು ಶರಣಾ ! ॥೯೩॥

ಸರ್ವ ಜಗಮೂಲವಿಹ ಶಿವಲಿಂಗ ಭಾವಿಸು
ಎಲ್ಲದಲಿ ತಾನಿರುತ ಎಲ್ಲವೂ ತಾನಾಗಿ
ಸಕಲದಲಿ ಲಿಂಗಬಲ ಅರಿಯುವುದೆ ಶಿವಯೋಗ ಶರಣಾ ॥೯೪॥

ಪೂರ್ಣನಾಗಲು ಜೀವ ತಾನೆಂದು ಜನ್ಮಿಸದು
ಜನನ ಮರಣವು ತಪ್ಪಿ ನಿಜಾನಂದ ಪಡೆಯುವುದು
ಯುಗಯುಗದಿ ಸ್ಥಿರವಾಗಿ ಬೆಳಗುವುದು ಶರಣಾ ! ||೯೫||

ಅಮರತ್ವ ಪದವಿಯನು ದೊರಕಿಸುವುದೇ ಲಿಂಗ
ಶಾಶ್ವತದ ಬಲ ಶಾಂತಿ ಬೆಳಗಬಲ್ಲುದೇ ಲಿಂಗ
ಅಂತಿರ್ಪ ಲಿಂಗದಲಿ ಸ್ಥಿರವಾಗು ಶರಣಾ ! ||೯೬||

ಲಿಂಗದಾಸೆಯು ಹೊರತು ಮಿಕ್ಕೆಲ್ಲ ಆಸೆಗಳು
ಕಾಮವೆಂಬುವ ರೂಪ ತಾಳುವುದು ನಿಜದಲ್ಲಿ
ಲಿಂಗದೊಳಿರುವಾಸೆ ಆಸೆಯಲ್ಲವು ಶರಣಾ ! ||೯೭||

ಲಿಂಗದಲಿ ಭ್ರಮೆಗಳು ಲಿಂಗದಲಿ ಛಲಗಳು
ಲಿಂಗದಲಿ ನಿಯಮಗಳು ಲಿಂಗದಾಚಾರಗಳು
ಲಿಂಗಾರ್ಥವರಿಯದೇ ಮಾಯೆಗಳು ಶರಣಾ ! ||೯೮||

ಭ್ರಮೆಯು ತಾ ಭ್ರಮೆಯಲ್ಲ ಆಸೆ ಆಸೆಯು ಅಲ್ಲ
ಹರಣ ಹರಣವು ಅಲ್ಲ ವ್ಯಯವು ತಾ ವ್ಯಯವಲ್ಲ
ಲಿಂಗಾರ್ಥವರಿತವಗೆ ಸಾರ್ಥಕವೆಲ್ಲ ಶರಣಾ ! ||೯೯||

ಲಿಂಗವಲ್ಲದ ವಸ್ತು ಲಿಂಗವಾಗದ ವಸ್ತು
ಎನಿತು ಶ್ರಮದಿಂ ಗಳಿಸಿ ಕೂಡಿಟ್ಟರೇನು ಫಲ ?
ಲಿಂಗವಾಗುವ ವಸ್ತು ಲಿಂಗವಹುದು ಶರಣಾ ! ||೧೦೦||

ಲಿಂಗ ಬಲದಿಂದಲೇ ಜನಿಸಿರುವ ಮಾನವನು
ಲಿಂಗದಲಿ ಲಯಿಸಲೆಂದೇ ಲಿಂಗ ಸಾಧನೆಯು
ಪೂಜೆಯಲಿ ಸಕಲವೂ ಶಿವಲಿಂಗ ಶರಣಾ ! ||೧೦೧||



೧೭

ದೈವಲೀಲೆ

ಲಿಂಗ ಬಲದಿಂದಲೇ ಜನಿಸಿದೀ ಜಗವೆಲ್ಲ
ಲಿಂಗಾಂಶವಾಗಿಹುದು ಲಿಂಗ ಬೇರಾಗಿಹುದು
ಸಕಲ ಕಾರಣವಾಗಿರುವ ಶಕ್ತಿಯೇ ಶಿವಲಿಂಗ ಶರಣಾ ! ॥೧॥

ಬಲವಾದ ಹಿರಿಶಕ್ತಿ ಬೇರಾಗಿ ತಾನಿರಲು
ಆ ಶಕ್ತಿ ತನ ಬಲದಿ ಜಗತುಂಬಿ ವ್ಯಾಪಿಸುತ
ತಾ ಬೇರೆ ಜಗ ಬೇರೆಯುಂತಿಹುದು ಶರಣಾ ! ॥೨॥

ಲಿಂಗ ತಾ ಬೇರಿಹುದು ಜಗವೆಲ್ಲ ಬೇರಿಹುದು
ಜಗ ಬೇರೆ ತಾನಿರಲು ಜಗ ತುಂಬಿ ನೆಲೆಸಿಹುದು
ಬಲ ತುಂಬಿದಾ ಮನಕೆ ಗೋಚರವೆಲ್ಲೆಡೆ ಶರಣಾ ! ॥೩॥

ವಾಯುವಿನ ತೆರ ತುಂಬಿರುವ ಲಿಂಗ ಬಲ ಶಕ್ತಿಯನು
ಜ್ಞಾನ ದೃಷ್ಟಿಯೊಳರಿತು ಯೋಗ ದೃಷ್ಟಿಗೆ ನಿಲಿಸಿ
ಲಿಂಗ ಬಲ ಕರುಣೆಯನು ಪಡೆಯಲರಿ ಶರಣಾ ! ॥೪॥

ಕಲ್ಲು ಕಟ್ಟಿಗೆ ಲೋಹ ಪಂಚ ಮಹಾ ಭೂತಗಳು
ಆವ ಗುಣರೂಪದಲಿರಲಿ ದೈವ ಲಿಂಗವದು
ದೈವ ಲಿಂಗವ ನೆನೆಯಲಾ ರೂಪ ಶರಣಾ ! ||೫||

ಸಕಲ ಗೋಚರ ವಸ್ತು ಶಿವನೆಂದು ಭಾವಿಸುತ
ನೋಡಿ ಮಾಡುವುದೆಲ್ಲ ಲಿಂಗ ಪೂಜೆಗೆ ಸಮವು
ಮನದಲ್ಲೆ ಲಿಂಗ ಬಲ ಭಾವಿಸುತಿರು ಶರಣಾ ! ||೬||

ಭಾವನೆಯು ಸ್ಥಿರತೆಗೆ ದೃಷ್ಟಿಗೆಟುಕುವ ತೆರ
ವಿಧ ವಿಧದ ನಾಮರೂಪಗಳಿತ್ತಿರೆ ಶರಣರು
ರೂಪದಲಿ ಮನ ನಿಲಿಸಿ ಶಿವನನರಿ ಶರಣಾ ! ||೭||

ನಾಮವೆ ದೇವರಲ್ಲ ರೂಪವೆ ದೇವರಲ್ಲ
ನಾಮ ರೂಪದ ನಡುವೆ ಹುದುಗಿಹುದು ಮಹಶಕ್ತಿ
ಆ ಶಕ್ತಿ ದೈವವೇ ಲಿಂಗವಿಹುದು ಶರಣಾ ! ||೮||

ಸಕಲ ಶಕ್ತಿಯು ತುಂಬಿ ಸಕಲವಾಳಲು ಬಲ್ಲ
ಸಕಲವನು ರೂಪಿಸುತ ಸರ್ವತ್ರ ಮಾಯೆಯದು
ಸಕಲದಲಿ ತಾ ನೆಲೆಸಿ ಬೆಳಗುತಿದೆ ಶರಣಾ ! ||೯||

ಸಕಲದಲಿ ನೆಲೆಸಿದರು ಸಕಲವೂ ತಾನಲ್ಲ
ತನ್ನ ಹಿರಿ ಬಲದಲ್ಲಿ ಸಲಹುತಿದೆ ಎಂದೆಂದು
ಸಕಲದೊಳು ವಾಸಿಸುತ ತಾ ಬೇರೆ ಶರಣಾ ! ||೧೦||

ಸಕಲ ಕಾರ್ಯ ಕಾರಣಕೆ ಮೂಲ ತೇಜವದಿಹುದು
ಆ ತೇಜ ಕಿರಣವೇ ಸಕಲ ಜಗವಾಗಿಹುದು
ಆ ಮೂಲ ತೇಜ ಶಿವಲಿಂಗವ ನೆನೆ ಶರಣಾ ! ||೧೧||

ಬುದ್ಧಿ ಬೆಳಗಲು ಮೂಲ ಜ್ಞಾನ ಬೆಳಸಲು ಮೂಲ
ಜೀವ ಬೆಳಗದು ಮೂಲ ಜಗದ ಬೆಳಗದು ಮೂಲ
ಮೂಲವಿರದಿಲ್ಲ ಜಗವೆಂದು ತಿಳಿ ಶರಣಾ ! ||೧೨||

ತಾಯಿಯಾ ಗರ್ಭದಲಿ ಶಿಶುವೊಂದು ಬೆಳೆಯುತಿರೆ
ಶಿಶುವಿನಿರವೂ ಸತ್ಯ ತಾಯಿಯಿರವೂ ಸತ್ಯ
ಶಿಶುವು ತಾ ಬೆಳೆಯುತಿರುವುದು ಸತ್ಯ ಶರಣಾ ! ||೧೩||

ಶಿಶು ತಾಯಿ ಈರ್ವರನು ಅರಿಯದೊಲು ಬೆಳೆಸುತಲಿ
ಬೇಕಿರುವೆಲ್ಲ ಬಲಗಳ ತೋರದಲಿ ಸಲಿಸುವುದು
ಆ ಲೀಲೆ ಬಲವೆಲ್ಲ ಲಿಂಗ ಶಿವ ಶರಣಾ ! ||೧೪||

ಗೋಚರವಿರದಾ ಬಲವು ಗೋಚರಿಸದೆಯೆ ಸಲುಹಿ
ಗೋಚರಿಸದಾ ಬಲದಿ ಜಗವೆಲ್ಲ ಸಲಹುತಿದೆ
ಅಂತು ಕಾಣದ ಶಿವನ ನಮಿಸಯ್ಯ ಶರಣಾ ! ||೧೫||

ಸಕಲ ವಿಧ ಬಾಳಿನಲಿ ಸಕಲಕ್ಕು ಬಲವಿಡುವ
ಮಹಿಮೆಯಿಹ ಲಿಂಗವನು ಮನಸಾರೆ ಪೂಜಿಸುತ
ಶಿವಲಿಂಗದನುಗ್ರಹ ಪಡೆಯುತಿರು ಶರಣಾ ! ||೧೬||

ಬಾಳಿನಲಿ ಬಲವಿರದೆ ದುಃಖ ಸಹಿಸದೊಲಿರಲು
ದೈವಲಿಂಗವ ಬಿಟ್ಟು ಬೇರೆ ಆಶ್ರಯವಿಲ್ಲ
ಲಿಂಗದಾ ದಯವಿರದೆ ಬಾಳದಿರು ಶರಣಾ ! ॥೧೭॥

ಲಿಂಗಬಲ ದಯೆಗಾಗಿ ದೃಢದಿ ಸಂಕಲ್ಪಿಸಲು
ಸಕಲದರ ಉಗಮ ಸ್ಥಿತಿ ಲಯ ನಡೆಸಬಲ್ಲದು
ಆ ಬಲದಿ ಬೇಕಿಹುದ ಸೃಜಿಸಿ ಸುಖಿಸಯ್ಯ ಶರಣಾ ! ॥೧೮॥

ಮಾನವನ ಜೀವಬಲ ಯತ್ನಗೈವುದೆ ಹೊರತು
ಫಲವೀವ ಬಲವೆಲ್ಲ ದೈವಬಲ ಮಾತ್ರಕಿರೆ
ಆ ದೈವಬಲದಲ್ಲೆ ನಿರ್ಮಿಸು ಶರಣಾ ! ॥೧೯॥

ದೈವ ಮಾಯಾ ಬಲಕ್ಕೆ ಹಿರಿಯೆಂಬುದೊಂದಿಲ್ಲ
ಕಾರಣವದಾಗಿದ್ದು ಸಕಲವೂ ನಶಿಸುತಿದೆ
ದೈವಬಲವನು ಬಿಟ್ಟು ಆವ ದೈವ ನಿಜ ಶರಣಾ ? ! ॥೨೦॥

ಹುಚ್ಚರನು ಕಾಯುತಿದೆ ತುಚ್ಛರನು ಕಾಯುತಿದೆ
ಪಶುಪಕ್ಷಿ ಕ್ರಿಮಿಕೀಟ ಪ್ರಾಣಿಗಳ ಕಾಯುತಿದೆ
ಸಲಹುತೆಲ್ಲವ ನಿತ್ಯ ಬೆಳಗುತಿದೆ ಶರಣಾ ! ॥೨೧॥

ಜಗ ತುಂಬಿ ಮೆರೆಯುತಿಹ ಜ್ಞಾನ ವಿಜ್ಞಾನಗಳ
ಮಹ ಶಕ್ತಿ ಜಗದಲ್ಲಿ ಮೂಲ ದೈವದ ಬಲವೆ
ಅರಿಯದೊಲು ಅಡಗಿಹುದು ಅರಿಯಯ್ಯ ಶರಣಾ ! ॥೨೨॥

ಜ್ಞಾನವಿಲ್ಲದುದಕ್ಕೆ ಜ್ಞಾನವಿಡಲಾಗದು
ಸೃಷ್ಟಿ ನೇಮದ ಗುಣವ ಬದಲಿಸಲಶಕ್ಯವಿರೆ
ಸರಿಬಲದ ಜ್ಞಾನದಲಿ ದೈವ ನೆನೆ ಶರಣಾ ! ||೨೩||

ದುರ್ವಿಧಿ ದುರ್ಮರಣ ದುಃಖ ಯಾತನೆ ಕಾಲ
ಅಲಿಯುದಲಿ ಸಕಲರಾ ಬೆನ್ನ ಹಿಂದಾಡುತಿದೆ
ಅರಿಯದಂಧಕಾರದಿ ಬಾಳದಿರು ಶರಣಾ ! ||೨೪||

ಮುಂಬರುವ ಗಳಿಗೆಯಲಿ ಏನಿಹುದೊ ನೀನರಿಯೆ
ಸುಖವುಂಟೊ ? ದುಃಖವೋ ? ಮೃತ್ಯುವೇ ಮರುಕ್ಷಣವೊ ?
ಎಂಬುದರಿಯದ ನೀನು ಎಂಥ ಶಕ್ತನು ಶರಣಾ ?! ||೨೫||

ಹಿಂದು ಮುಂದಿನದೆಲ್ಲ ಸರಿಯರಿತು ಕಾಯುವಾ
ದೈವಬಲ ಮಾಯೆಯನು ಆಶ್ರಯಿಸಿ ಪೂಜಿಸಿರೆ
ಆ ಶಕ್ತಿ ನಿನ್ನ ಸಲಹುವುದು ನಿಜ ಶರಣಾ ! ||೨೬||

ಈ ಮನುಜ ಕಾಯದಲಿ ತುಂಬಿರುವ ಶಕ್ತಿಗಳು
ಬೆಳೆದು ತಾ ಬೆಳಗಲು ದೈವದಾಶ್ರಯ ಬೇಕು
ದೈವದಾಶ್ರಯವಿರದೆ ಬಾಳದಿರು ಶರಣಾ ! ||೨೭||

ದೈವದಾಶ್ರಯದಲ್ಲಿ ಹಿರಿಜ್ಞಾನಿ ಗುರುವಾಗು
ಹಿರಿಶಕ್ತಿ ನಿಧಿಯಾಗಿ ಹಿರಿಬಲದ ಗುಣವಾಗಿ
ಹಿರಿಯಾಗಿ ಬೆಳಕಾಗಿ ಬಾಳುತಿರು ಶರಣಾ ! ||೨೮||

ದೈವದ ಹರಕೆಯಿರದೆ ಬಲವಲ್ಪವಲ್ಲಿರದು
ದೈವ ಸಂಕಲ್ಪವೇ ದೈವ ಹರಕೆಯು ಬಲವು
ಹರಕೆಯುಲಿ ಬಲಗಳಿಸಿ ಬೆಳಗಯ್ಯ ಶರಣಾ ! ॥೨೯॥

ಇಹಪರಗಳೆರಡರಲಿ ಹಿರಿಯಾಗಿ ಬೆಳೆದವರು
ಆ ದೈವಬಲದಲ್ಲೆ ಬೆಳಗಿಹರು ಅರಿಯುವಲೆ
ಆ ದೈವ ಬೆಳಕನ್ನು ಪಡೆಯುಯ್ಯ ಶರಣಾ ! ॥೩೦॥

ಹಿರಿಜ್ಞಾನ ಹಿರಿ ಬುದ್ಧಿ ಹಿರಿ ಗುಣದ ಹಿರಿತನವು
ಶಕ್ತಿಯಾಗರಲಿ ಮಾನವನಲಿ ಬೆಳಗಲು
ಹಿರಿ ದೈವ ಕರುಣೆಯೋ ಪ್ರಸಾದವು ಶರಣಾ ! ॥೩೧॥

ಮಾನವನ ವಿಜ್ಞಾನ ಧೈರ್ಯಬಲ ಸಾಹಸವ
ಮಾನವ ಬಲದಿಂದ ಮಾನವಗೆ ಕೊಡಲಹುದೆ ?
ಆ ಲೀಲೆಯು ಮೂಲವೇ ದೈವ ಶರಣಾ ! ॥೩೨॥

ಹುಟ್ಟು ಸಾವಿಗೆ ಮೂಲ ದುರ್ದೈವ ವಿಧಿ ಮೂಲ
ಇಂದ್ರಿಯುಗಳ ಶಕ್ತಿ ವೃದ್ಧಿ ಬಲಕದೆ ಮೂಲ
ಅಂತಿರುವ ಶಕ್ತಿಯುನು ಮರೆಯುವರೆ ಶರಣಾ ! ॥೩೩॥

ಮಳೆಯು ಬರಲದೆ ಮೂಲ ಇಳೆಯು ಬೆಳಗದೆ ಮೂಲ
ವಾಯು ಚಲನೆಗು ಮೂಲ ಫಲದ ಶಕ್ತಿಗು ಮೂಲ
ಚೈತನ್ಯ ಶಕ್ತಿಯುದು ಮರೆಯದಿರು ಶರಣಾ ! ॥೩೪॥

ಪರಿಶುದ್ಧ ಹೃದಯಗಳ ಕಾಯುವುದೆಲ್ಲಾ ವಿಧದಿ
ಜಾಗ್ರತದಿ ಮನದಲ್ಲಿ ನಿದ್ರೆಯಲಿ ಸ್ವಪ್ನದಲಿ
ಭಕ್ತಿರೂಪದಿ ಬಂದು ಸಲಹುವುದು ಶರಣಾ ! ||೩೫||

ವಿಜ್ಞಾನದಂತಲ್ಲ ದೈವಬಲ ವಿಜ್ಞಾನ
ಅದನರಿಯ ಸಾಧ್ಯವೇ ? ತೋರಿಸಲು ಸಾಧ್ಯವೇ ?
ದೈವ ಜ್ಞಾನದರಿವುಂಟು ಭಕ್ತನಿಗೆ ಶರಣಾ ! ||೩೬||

ಬಿರುಗಾಳಿ ಭಾರಿಮಳೆ ಮಳೆಯಿರದ ಬರಿ ಬಿಸಿಲು
ವಾಯುಗಳ ಮಾಲಿನ್ಯ ಪರಿಸರದ ದುರ್ಗಂಧ
ಸರಿಯಾಗಬಲ್ಲವೇ ವಿಜ್ಞಾನದಿಂದ ? ಶರಣಾ ! ||೩೭||

ತೇಜ ಸೂರ್ಯನ ಶಾಖ ಚಂದ್ರಬಿಂಬದ ಕಾಂತಿ
ಏರಿಳಿವ ತೆರ ಮಾಡೆ ಮಾನವಗೆ ಸಾಧ್ಯವೇ ?
ಆ ಎಲ್ಲ ವಿಜ್ಞಾನ ದೈವವೊಂದಕೆ ಶರಣಾ ! ||೩೮||

ದೈವ ತನ ವಿಜ್ಞಾನ ಶರಣರಿಗೆ ತೋರುತಿರೆ
ದೈವ ಬಲದೀ ಜ್ಞಾನ ನೀ ತಿಳಿಯಬಲ್ಲೆಯಾ ?
ದೈವ ಲೀಲಾಜಾಲ ಬಲವರಿಯೊ ಶರಣಾ ! ||೩೯||

ದೈವ ವಿಜ್ಞಾನಕಿಂತಲು ಮನುಜ ವಿಜ್ಞಾನ
ಅತ್ಯಲ್ಪ ಕಿರಿಯಿಹುದು ಹಮ್ಮಿನಲಿ ಮೆರೆಯದಿರು
ಅರಿಯದಲಿ ದೈವವನು ಮರೆಯದಿರು ಶರಣಾ ! ||೪೦||

ವಿಧವಿಧದ ಫಲ ವೃಕ್ಷ ಗಂಧ ಪುಷ್ಪಾದಿಗಳು
ಪಶು ಪ್ರಾಣಿ ಪಕ್ಷಿಗಳ ಸೃಷ್ಟಿಯೊಳದ್ಭುತವರಿ
ನರ ಜನ್ಮ ಗುಣಬುದ್ಧಿ ವೈಚಿತ್ರ್ಯವರಿ ಶರಣಾ ! ||೧||

ರೂಪವು ನಿರ್ಮಿಸಲಹುದೆ ? ರಕ್ತ ನಿರ್ಮಿಸಲಹುದೆ ?
ಪಂಚ ಜ್ಞಾನೇಂದ್ರಿಯದ ಬಲ ರೂಪ ನಿರ್ಮಿಸಲು
ಮಾನವಗೆ ಸಾಧ್ಯವೇ ? ಯೋಚಿಸು ಶರಣಾ ! ||೪೨||

ಸ್ತ್ರೀ ಪುರುಷ ವೈಚಿತ್ರ್ಯ ಗರ್ಭ ಶಿಶು ವೈಚಿತ್ರ್ಯ
ಪಂಚಭೂತ ರವಿ ಶಶಿ ತಾರೆಗಳ ವೈಚಿತ್ರ್ಯ
ಆರು ನಿರ್ಮಿಸಿ ಜಗದಿ ನಿಲಿಸಿಹರು ? ಶರಣಾ ! ||೪೩||

ಅಂಡ ಪಿಂಡದಿ ಬೆಳೆವ ಜೀವರಾಶಿಗಳೆನಿತೊ
ಅವುಗಳನು ಯಾರೆಲ್ಲಿ ಎಂತು ಕಾಯುತಲಿಹರೊ ?
ಇದು ದೈವಲೀಲೆಯಲ್ಲದೆ ಮತ್ತೇನು ಶರಣಾ ? ||೪೪||

ಅಲ್ಪ ಜ್ಞಾನದ ಮನುಜ ಅಲ್ಪ ಬುದ್ಧಿಯ ಬಲದಿ
ತನ್ನ ಬಲ ಹಿರಿದೆಂದು ವಿಜ್ಞಾನಿ ಎನಿಸಿದರು
ಹಿರಿ ದೈವಲೀಲೆಯೇ ವಿಜ್ಞಾನವರಿ ಶರಣಾ ! ||೪೫||

ಮನುಜ ಬುದ್ಧಿಯು ಕಿರಿದು ಜ್ಞಾನ ಶಕ್ತಿಯು ಕಿರಿದು
ಅಲ್ಪ ಆಯುಷ್ಯದಲಿ ಹಿರಿದು ಸಾಧಿಸಲಹುದೆ ?
ದೈವಬಲ ಗಳಿಸಿನಿತು ಹಿರಿಯನಾಗು ಶರಣಾ ! ||೪೬||

ದೈವವೆಂದರೇನೆಂದರಿಯದಿಹ ಜೀವಿಗಳು
ದೈವವೆಂಬುದೇ ಕೆಂದರಿಯದಿಹ ಜೀವಿಗಳು
ಅದು ದೈವ ಇದು ದೈವವೆಂದಂಥರಾಗಿಹರು ಶರಣಾ ! ||೪೭||

ನಾಮ ದೈವವೆನುವರು ರೂಪ ದೈವವೆನುವರು
ಜಾತಿ ಮತ ಪಂಥಗಳ ಗುರುಹಿರಿಯರನು ನಂಬಿ
ದೈವವೆಂದೆನ್ನುವರು ದೈವ ಬೇರೆ ಶರಣಾ ! ||೪೮||

ದೈವಬಲವಲ್ಲದನು ದೈವವೆನ್ನುತ ತಿಳಿದು
ದೈವವೆನ್ನುತ ನಂಬಿ ಅಜ್ಞಾನ ಹುಚ್ಚಿನಲಿ
ತಮ್ಮ ಕಣ್ಣಿಗೆ ಮಣ್ಣು ತಾವೆರಚಿಕೊಳ್ಳುವರು ಶರಣಾ ! ||೪೯||

ತನು ಮನ ಧನ ಬಲಗಳ ಕಳೆದುಕೊಂಡವರಾಗಿ
ಹಿರಿಯಾಗಿ ಬೈರಾಗಿಯೆಂಬಂತೆ ತ್ಯಜಿಸುವರು
ನಿಶಿಕಂಡ ಬಾವಿಯಲ್ಲಿ ಹಗಲು ನೀ ಹಾರದಿರು ಶರಣಾ ! ||೫೦||

ದೈವವಿಹುದೆಂಬ ನಿಜ ಮಾನವನಿಗರುಹಲು
ಗುಡಿ ಗೋಪುರವ ಕಟ್ಟಿ ಗ್ರಂಥಗಳ ರಚಿಸಿಹರು
ಗ್ರಂಥ ಗುಡಿ ಗೋಪುರದಿ ದೈವವರಿ ಶರಣಾ ! ||೫೧||

ದೈವವನರಿಯುವುದಕೆ ನಿರ್ಮಿಸಿದ ಸಕಲವೂ
ದೈವದಲಿ ಭಕ್ತಿಯನು ಶ್ರದ್ಧೆಯನು ತರಲಾಗಿ
ನಂಬಿಕೆ ತರುವುದೆಲ್ಲ ದೈವವಲ್ಲ ಶರಣಾ ! ||೫೨||

ಮುಂದಿರುವ ಹಿರಿ ಶಕ್ತಿ ದೈವಬಲದೂರಿಗೆ
ಮಾರ್ಗದರ್ಶನಕಾಗಿ ನೆಟ್ಟಿರುವ ನೆಡುಗಲ್ಲ
ದೈವವೆನ್ನುತ ನಂಬಿ ನಿಲ್ಲದಿರು ಶರಣಾ ! ॥೫೩॥

ದೈವವನ್ನರಿಯಲು ಸಕಲವೂ ಗುರುವಿಹುದು
ಮಗುವಾಗಿ ಸಕಲಕೂ ಶಿಷ್ಯವೃತ್ತಿಯ ಪಡೆದು
ಕೊನೆಗೊಂದು ದಿನದಲ್ಲಿ ದೈವವರಿ ಶರಣಾ ! ॥೫೪॥



೧೮

ನಿಜಜ್ಞಾನ ಕುರುಹು

ನಿಜ ದೈವವರಿತವರು ದ್ವೇಷವನು ಸಾಧಿಪರು
ಕೋಪ ತಾಪಾದಿಗಳ ದುಃಖಗಳ ತಾಳುವರು
ಅವಿಚಾರದಿಂದೆಂದು ಮತ್ಸರ ಪಡರು ಶರಣಾ ! ॥೧॥

ಹಿರಿಬಲದ ದೈವದಲಿ ನೆಲೆಸಿರುವ ಜೀವಿಗಳು
ಕಿರಿದಾದ ಮನದಿಂದ ಬಾಳಿಗೆ ಚಿಂತಿಪರೆ ?
ಸಕಲವನು ಕರುಣದಿಂ ಕಾಣುವರು ಶರಣಾ ! ॥೨॥

ಹೃದಯ ಕಲ್ಮಶವಿರದೆ ಮನದಿ ಕಿರಿತನವಿರದೆ
ಜ್ಞಾನಾಜ್ಞಾನದಲಿ ಶಾಂತ ಮಾನಸರಾಗಿ
ದೈವವನು ಪೂಜಿಸುತ ಬಾಳುವರು ಶರಣಾ ! ॥೩॥

ದೈವವರಿತಿಹ ಜನಕೆ ಹಿರಿಕಿರಿ ಭೇದವಿಲ್ಲ
ರಾಗದ್ವೇಷಗಳಿಲ್ಲ ಅಜ್ಞಾನ ನಡೆಯಿಲ್ಲ
ಅನವರತ ಸುಖದಲ್ಲಿ ಬೆಳಗುವರು ಶರಣಾ ! ॥೪॥

ಹಿರಿಕಿರಿಯೆಣಿಸುವವರು ಜಾತಿಮತ ಗಣಿಸುವರು
ಜ್ಞಾನಾಜ್ಞಾನದಲು ಹಿರಿ ವ್ಯಾಜ್ಯ ತಾಳುವರು
ಅವರೆಂತು ದೈವವನು ಅರಿಯುವರು ? ಶರಣಾ ! ॥೫॥

ಸಕಲರಿಗು ಸಕಲಕೂ ತಾಯಾದ ದೈವವನು
ಅರಿತಾದರಿಸಬಲ್ಲವರೆ ದೈವ ಜ್ಞಾನಿಗಳು
ಜಗವೆಲ್ಲ ಒಂದೆಂದು ಬಾಳುವರು ಶರಣಾ ! ॥೬॥

ತಾಯಿಯು ಸಕಲ ಶಕ್ತಿ ರೂಪ ಮಗುವಾದಂತೆ
ತಾಯಿ ದೈವದ ಬಲದಿ ಜನಿಸಿ ಬಂದಿಹರೆಲ್ಲ
ತಾಯಿ ಕುಲದವರೆಂದು ಬಾಳುವರು ಶರಣಾ ! ॥೭॥

ದೈವಕಿಹುದೊಂದೆ ಕುಲ ಭಕ್ತರಿಗೆ ಎರಡು ಕುಲ
ಪಾಪಿ ಪಾಮರರಾದ ಅಜ್ಞಾನಿ ಕುರುಡರಿಗೆ
ನೂರಾರು ಪಂಥಗಳು ತಿಳಿ ನೀನು ಶರಣಾ ! ॥೮॥

ಮಾನವರ ಕುಲವೆಲ್ಲ ಒಂದೆ ಕುಲವೆಂದರಿತು
ದೈವಬಲ ಸಾಧನೆಗೆ ನೇರದಲಿ ಪೂಜಿಸುತ
ಲೋಕದಲಿ ದೈವಕ್ಕೆ ಶರಣಾಗು ಶರಣಾ ! ॥೯॥

ಸತ್ಯದನುಭವದರಿವು ದೈವಬಲ ತರುವುದು
ಅನುಭವವಿಲ್ಲದರಿವು ಮೋಸದಲಿ ತಳ್ಳುವುದು
ಮೋಸವಿಲ್ಲದ ದೈವವನು ಸೇರಲರಿ ಶರಣಾ ! ॥೧೦॥

ಕಿರುಮನ ಮತಿಗಳಿಂದ ಎಂತೆಂತೊ ಬಾಳದಿರು
ಕಿರುತನದ ನಡೆನುಡಿ ವ್ಯಾಜ್ಯಗಳ ಪಿಡಿಯದಿರು
ಹಿರಿಯಾದ ಬಲವರಿತು ಶಾಂತಿಸಿರು ಶರಣಾ ॥೧೧॥

ಆವ ನಾಮದೆ ಕರೆಯೆ ಆವ ರೂಪದೆ ಭಜಿಸೆ
ಆವ ತೆರ ಮನದಿಂದ ಭಕ್ತಿಯ ಸಮರ್ಪಿಸಿರೆ
ಸಕಲವೂ ಸಲ್ಲುವುದು ಒಂದೇ ಲಿಂಗಕೆ ಶರಣಾ ! ॥೧೨॥

ಶಿವ ದೈವ ಬಲವು ತಾ ಹೃದಯ ಮನ ನೋಡುವುದು
ಸರಿಯಾದ ಜ್ಞಾನದಾ ಸಾಧನವ ನೋಡುವುದು
ಹಿರಿ ಬಲದ ನಂಬಿಕೆಗೆ ಒಲಿಯುವುದು ಶರಣಾ ! ॥೧೩॥

ಹೃದಯ ಮನ ಸಾಧನದಿ ನಂಬಿಕೆಯಿರದವರಿಗೆ
ಶುದ್ಧ ಜ್ಞಾನವಿಲ್ಲದ ಅಧಮ ಭಕುತರಿಗೆಲ್ಲ
ಲಿಂಗಬಲವಿದ್ದರೂ ವ್ಯರ್ಥವದು ಶರಣಾ ! ॥೧೪॥

ಪಾಂಡಿತ್ಯವನು ಪಡೆದು ಡಂಭದಲಿ ನುಡಿದಾಡಿ
ಹಿರಿಯ ಪಂಡಿತನೆಂದು ಲೋಕದಲಿ ಮೆರೆಯಾವಗೆ
ಶಿವನೊಲಿಯನೆಂದಿಗೂ ನಿಜ ಭಕ್ತನಾಗು ಶರಣಾ ! ॥೧೫॥

ಬೈರಾಗಿಯುಡುಪುಟ್ಟು ಹಿರಿತ್ಯಾಗಿಯಂತಾಗಿ
ಸರ್ವರಿಗು ಗುರುವೆಂದು ಮದ ತುಂಬಿ ಬಾಳದಿರು
ದೈವವೊಲಿಯದ ಸಾಧನೆಯು ಬೇಡ ಶರಣಾ ! ॥೧೬॥

ಹಠಯೋಗ ಸಾಧಿಸುತ ವಾಯುಬಲಗಳ ತೋರಿ
ಮಾನವಗೆ ಪ್ರಾಣಬಲದಾಟವನು ತೋರಿಸುತ
ನೀನೆ ಗುರುವೆನ್ನುತಲಿ ಬಾಳದಿರು ಶರಣಾ ! ||೧೭||

ಅಲ್ಪ ಸಾಧನೆಯಿಂದ ಮಾಯೆ ಶಕ್ತಿಯನೊಲಿಸಿ
ಮಾಯೆ ಜಾಲದ ಲೀಲೆ ಜನಕೆಲ್ಲ ತೋರುತಲಿ
ಶಿವನನೊಲಿಸಲು ಬಲ್ಲ ಶಕ್ತರಾರು ಶರಣಾ ! ||೧೮||

ಭೂತ ಶಕ್ತಿಯ ಬಯಸಿ ಭೂತ ಶಕ್ತಿಯನೊಲಿಸಿ
ಭೂತ ಲೀಲೆಯ ಮಾಡಿ ಜನರ ಮರುಳಾಗಿಸೆ
ಭೂತ ಮಂತ್ರಾದಿಗಳಿಗೊಲಿಯುವನೆ ಶಿವ ? ಶರಣಾ ! ||೧೯||

ಜನರ ನೊಲಿಸುವ ವಿದ್ಯೆ ಜನರೊಲುಮೆಗಲ್ಲದೇ
ಹಿರಿ ಶಕ್ತಿ ಶಿವನೊಲುಮೆ ಪಡೆಯುವುದಕಲ್ಲ ತಿಳಿ
ಶಿವಲೀಲೆ ಮರೆಯಿಸುವ ಆಟಗಳಿವು ಶರಣಾ ! ||೨೦||

ಸತ್ಯ ಶಿವನನು ತಿಳಿದು ಲಿಂಗದಾನಂದಸಿರೆ
ಮಿಕ್ಕ ಲಿಂಗಾಂಶಗಳ ಕಾರ್ಯವದು ರುಚಿಸದು
ಲಿಂಗವನು ಭಜಿಸದೇ ಬಾಳದಿರು ಶರಣಾ ! ||೨೧||

ಶಿವನ ಲೀಲೆಗಳಲ್ಲಿ ತಾ ನಲಿಯಬಲ್ಲವಗೆ
ಲೋಕದಾಟದಿ ನೂರು ದೋಷಗಳು ಕಾಣುವುವು
ದೋಷಮಯ ಬಾಳಿನಲಿ ದೈವವಿರದು ಶರಣಾ ! ||೨೨||

ಬಾಳ ನಡೆ ನುಡಿಯೆಲ್ಲ ಲಿಂಗಮಯ ಗೊಳಿಸಯ್ಯ
ಶಿವಲಿಂಗ ಬಲ ಪಡೆದು ಲಿಂಗ ನೀನಾಗುವೆ
ನೀನಂದು ದೈವಬಲ ತಾಳುವಿಯೊ ಶರಣಾ ! ||೨೩||

ಮನುಜ ಬಲ ಮೀರಿದಾ ಲಿಂಗ ಬಲ ಸಾಧಿಸಿರೆ
ಮೇಲೆ ಹಾರಿದ ಹಕ್ಕಿ ಕೆಳಗೆಂತು ಇಳಿಯುವುದು ?
ಕೆಳಗಿರುತ ಮೇಲೆಂದು ಬಾಳದಿರು ಶರಣಾ ! ||೨೪||

ಸೂರ್ಯ ಬಲ ತಾನಾಗಿ ಕಿರುಜ್ಯೋತಿಗಾಶಿಪರೆ ?
ಗಂಗೆ ಬಲ ತಾನಾಗಿ ನೀರಿಗಾಗಲೆಯುವರೆ ?
ಶಿವಜ್ಞಾನ ಪಡೆದಂದೆ ದಿವ್ಯ ಜೀವನವು ಶರಣಾ ! ||೨೫||

ಶಿವನ ನರಿತಿಹ ಬಾಳು ಶುದ್ಧ ಶಾಂತಿಯ ಬಾಳು
ಬುದ್ಧಿ ವಿದ್ಯಾ ಬಲದ ವ್ಯವಹಾರವಲ್ಲಿಲ್ಲ
ಲಿಂಗ ಬಲದಾನಂದ ಅಮರತ್ವ ಶರಣಾ ! ||೨೬||



೧೯

ಸೊತ್ತಾರಿಗೆ?

ಧರ್ಮ ಸಾಧನವೆಲ್ಲ ಲಿಂಗೈಕ್ಯ ಸುಖಕಾಗಿ
ಮನುಜ ಜನ್ಮವ ತಾಳಿ ಲಿಂಗ ಲಿಂಗಾಂಶಗಳ
ಗುಣ ತತ್ವವರಿಯದಿರೆ ಲಿಂಗಧಾರಣೆ ವ್ಯರ್ಥ ಶರಣಾ ! ॥೧॥

ಹೃದಯ ನಿರ್ಮಲವಿರದ ಕಲ್ಮಶದ ಜೀವಿಗಳು
ಬಾಹ್ಯಾಂತರದಲಿ ನಡೆನುಡಿಗಳೊಂದಿರದವರು
ಲಿಂಗ ಬಲ ಹಂಬಲಿಸೆ ದೊರೆಯದೆಂದಿಗು ಶರಣಾ ! ॥೨॥

ಮನವೆಂಬ ಕರಣವನು ಆಸೆಗಂಟಿಸದಂತೆ
ನಿರಾಸೆ ಭಾವದಿಂ ನಿಷ್ಕಾಮದಿಂದಿರಲು
ಅಲೆ ಇಲ್ಲದಾ ಮನದಿ ಬಲವುಂಟು ಶರಣಾ ! ॥೩॥

ಮನದಂತಃ ಶಕ್ತಿಯನು ಮೋಹಮದಕಂಟಿಸದೆ
ರಾಗ ದ್ವೇಷಾದಿಗಳು ಮನದಲ್ಲವಿರದಂತೆ
ಶುದ್ಧಿಗೊಳಿಸಿರೆ ಮಾತ್ರ ಬಲವುಂಟು ಶರಣಾ ! ॥೪॥

ಇಂದಿನದು ಇಂದಿಗೇ ನಾಳಿನದು ದೈವಕ್ಕೆ
ಎಂದು ನಂಬುತ ಬಾಳೆ ಮುಂದೆ ಮಹ ಫಲವಿಹುದು
ಲಿಂಗ ನಂಬದ ಜೀವಿಗಳಿಗಿಲ್ಲ ಬಲ ಶರಣಾ ! ||೫||

ಅಲ್ಪಾವಧಿ ಬಾಳಿನಲಿ ಗೈವ ಕರ್ಮದಲಿ
ತಾನು ತನ್ನದು ತನಗೆ ಎಂಬ ಸ್ವಾರ್ಥವ ಬಿಡದೆ
ಲಿಂಗ ಪೂಜಿಸಲೇಕೆ? ಬಲವಿಲ್ಲ ಶರಣಾ ! ||೬||

ಗಿಳಿಪಾಠ ಕಲಿತಂತೆ ಲಿಂಗ ತತ್ವವ ಪಠಿಸಿ
ಎಲ್ಲ ಶಿವಮಯವೆನುತ ವೇಷವನು ಬದಲಿಸಿದ
ನಾಟಕದ ಭಕ್ತರಿಗೆ ಬಲವಿಲ್ಲ ಶರಣಾ ! ||೭||

ಕಾಮಿನಿ ಭೂಮಿ ಕಾಂಚನಗಳನು ಬಯಸಿ
ಅಜ್ಞಾನ ತುಂಬಿರುವ ಲಿಂಗ ಸಾಧಕ ಜನರು
ಲಿಂಗ ಬಲ ದೊರೆಯದಿರೆ ಲಿಂಗ ಮರೆವರು ಶರಣಾ ! ||೮||

ದೇಹಬಲವಿಲ್ಲದಲಿ ದೇಹ ಸುಖಕಾಳಾಗಿ
ದುಃಖ ಸಾಗರದಿದ್ದು ಸುಖ ಪಡೆವೆನೆನ್ನುತಿರೆ
ಲಿಂಗ ಸಾಧಕನಾಗಿ ಬಾಳಲಹುದೇ? ಶರಣಾ ! ||೯||

ಅನುಭವಕೆ ಕಾಯುವಗೆ ಅನುಭಾವ ದೊರೆಯುವುದು
ಅನುಭವವಿರದ ಜನಕೆ ಬರಿ ತಾಪವೊಂದೆ ಫಲ
ಅನುಭವವಿರದೆ ತಾಪಗೊಳ್ಳದಿರು ಶರಣಾ ! ||೧೦||

ಕಾಲತ್ರಯಂಗಳಲಿ ಕಪಟ ಭಾವಗಳಿರದೆ
ದೇಹತ್ರಯಂಗಳಲಿ ಕಾಮವನು ಜಯಿಸುತಲಿ
ಶುದ್ಧ ಜೀವನ ನಡೆಸಿ ಪೂರ್ಣನಾಗು ಶರಣಾ ! ॥೧೧॥

ತನ್ನದೇ ಸುಖವೆಂದು ಕಹಿಯುಂಡು ಸಿಹಿಯೆನುತ
ತನಗೆಂದು ಮಾಡುತಲಿ ತನದೆಂದು ದುಡಿವವಗೆ
ತನ್ನಲ್ಪ ಬಲದ ಹೊರತಿಲ್ಲ ಲಿಂಗಬಲ ಶರಣಾ ! ॥೧೨॥

ಲಿಂಗಬಲವರಿತವರ ಸತ್ವ ಮಾರ್ಗವೆ ಬೇರೆ
ಲೋಕಬಲ ಪಡೆದವರ ನಿತ್ಯ ಮಾರ್ಗವೆ ಬೇರೆ
ಸತ್ವಸಾಧನವಿರದೆ ಬಲವಿರದು ಶರಣಾ ! ॥೧೩॥

ಸತ್ವಸಾಧನೆಯಲ್ಲಿ ಪರಿಶುದ್ಧ ಚಿತ್ತರಿಗೆ
ಅನುಭಾವದಾನಂದ ರಸಪಾನವಲ್ಲಿಹುದು
ಸಚ್ಚಿದಾನಂದ ಬಲ ಪಡೆಯಲರಿ ಶರಣಾ ! ॥೧೪॥

ಅತ್ಯಲ್ಪ ಸುಖಕೊಡುವ ಲೋಕದೀ ವಸ್ತುಗಳ
ಸಂಪದಿಸಿ ಸುಖಿಸಲು ಹಗಲಿರುಳು ದುಡಿಯದಿರು
ಹಿರಿ ಸುಖದ ಲಿಂಗಬಲ ಪಡೆಯಯ್ಯ ಶರಣಾ ! ॥೧೫॥

ಜ್ಞಾನ ಪ್ರಾಪ್ತಿಗೆ ಜೀವ ಮನಕಟ್ಟಿ ದುಡಿವಲ್ಲಿ
ವಾಸನಾ ಬೀಜಗಳೆನಿತು ಜನ್ಮಗಳ ತರಲು
ಸುಖವೊಂದನೆ ಪಡೆವುದು ದುಃಖವಿಲ್ಲವು ಶರಣಾ ! ॥೧೬॥

ಮನುಜ ದೇಹವ ಧರಿಸಿ ಜನಿಜನಿಸಿ ಬಂದರೂ
ಸುಖ ದುಃಖವೆಲ್ಲವನು ಪಡೆದನುಭವಿಸುತಿದ್ದು
ಸುಖ ದುಃಖ ಕಾರಣವನರಿಯರು ಶರಣಾ ! ||೧೭||

ಕೋಟ್ಯಾನುಕೋಟಿ ಜನ ಅನುದಿನದ ಬದುಕಿನಲಿ
ವಿಧ ವಿಧದ ಯಾತನೆ ತಾಪಗಳ ಸಹಿಸುವರು
ಲಿಂಗ ಜ್ಞಾನವಿಲ್ಲದೆ ತೊಳಲುವರು ಶರಣಾ ! ||೧೮||

ಪೂರ್ವಜನ್ಮದ ಕರ್ಮ ಈ ಜನ್ಮದಲ್ಲಿಹುದು
ಈ ಜನ್ಮದಾ ಕರ್ಮ ಬರುವ ಜನ್ಮದಲುಂಟು
ಈ ಜನ್ಮದೆಚ್ಚೆತ್ತು ಲಿಂಗೈಕ್ಯ ಸಾಧಿಸು ಶರಣಾ ! ||೧೯||

ಅಜ್ಞಾನದರಿಯದಿರೆ ಜ್ಞಾನವಿದು ಪುಸಿಯಲ್ಲ
ಜನುಮ ಜನುಮಗಳಲ್ಲಿ ಸುತ್ತುತಿಹ ಜೀವಕ್ಕೆ
ಸತ್ಯ ಜ್ಞಾನದ ತತ್ವವರಿತಂದೆ ಮುಕ್ತಿ ಶರಣಾ ! ||೨೦||

ಸುಖವೆಂಬ ಫಲವೀವ ಆನಂದರಸವುಣಿಪ
ಅನುಭಾವ ಶಾಶ್ವತವು ಜನ್ಮಕಿದೆ ಹಿರಿ ಸೊತ್ತು
ಸರಿ ತತ್ವ ಮಾರ್ಗದಲಿ ಸಾಧಿಸಿ ಸುಖಿಸು ಶರಣಾ ! ||೨೧||

ಮನವ ಕದಲಿಸಬೇಡ ದೇಹ ದಂಡಿಸಬೇಡ
ಉನ್ನತಾತ್ಮರ ನುಡಿಯ ನಂಬು ಸಂಶಯ ಬೇಡ
ಲಿಂಗ ಸಾಧನೆಗೈದು ಶರಣಾಗು ಶರಣಾ ! ||೨೨||

ಕದಲದೇ ನಿಂತ ಮನ ಗುರಿ ಸೇರುವುದು ನಿಜವು
ಲಿಂಗ ಶಕ್ತಿಯು ಜ್ಞಾನವಿತ್ತು ಒಂದಾಗಿಪುದು
ಲಿಂಗೈಕ್ಯನಾಗುವೇ ಶ್ರದ್ಧೆಯಿಡು ಶರಣಾ ! ॥೨೩॥

ಅಮರತ್ವ ಸಾಧಿಸಿದ ಹಿರಿಬಲದ ಸುಜ್ಞಾನಿ
ಅಧಮನಾಗುವನೇನು ? ಅಧಮರ ಜರೆವನೇನು ?
ಅವಿಚಾರ ತಾಳದೇ ಸಂಬಿನಡೆ ಶರಣಾ ! ॥೨೪॥

ಎಲ್ಲವೂ ತಾನಾಗಿ ಎಲ್ಲವೂ ತಾವೆಂದು
ಲಿಂಗಶಕ್ತಿಯು ಅನುಭವದಿ ತನ್ನನು ಮರೆಯೆ
ಅದಕಿಂತ ಮೋಕ್ಷ ಬೇರಿಲ್ಲ ತಿಳಿ ಶರಣಾ ! ॥೨೫॥

ತನುವು ಕಾರಣ ಮಾತ್ರ ಮನದಿ ಅನುಭವ ಮಾತ್ರ
ಜೀವವೇ ಮನದಲ್ಲಿ ತನುವಿರದೆ ಸುಖಿಸುವುದು
ಜನನ ಮರಣಗಳಿರದ ಮೋಕ್ಷವರಿ ಶರಣಾ ! ॥೨೬॥

ಲಿಂಗೈಕ್ಯರಾದವರು ಸ್ಥೂಲ ತನು ಧರಿಸದಲಿ
ಶೋಕ ಮೋಹಗಳಿರದ ನಿತ್ಯಸುಖಿಗಳಮರರು
ಲಿಂಗೈಕ್ಯದಿಂದಲೇ ಆತ್ಮಸುಖ ಶರಣಾ ! ॥೨೭॥



೨೦

ಜಪಮಾಲೆ

ನೀನೊಂದು ಸೂತ್ರವಾಗುತ ನಿನ್ನ ಬಾಳಿನಲಿ
ಹದಿನೈದು ಜಪಮಣಿಗಳನಾರಿಸಿ ಪೋಣಿಸು
ಅಂಥ ಜಪಮಾಲೆಯಿಂ ಲಿಂಗೈಕ್ಯ ಶರಣಾ ! ॥೧॥

ಬಾಳಿಂತೆ ಕಳೆದಿರಲಿ ದಿನಯಾತ್ರೆ ಮಾಡುತಲಿ
ಮನಕಾಸೆ ಅಂಟಿಸದ ಆಸೆಯಿಂದಲಿ ಬಾಳು
ನಿರಾಸೆ ಮಣಿಯೊಂದು ಪೋಣಿಸು ಶರಣಾ ! ॥೨॥

ಜೀವನದಿ ತಾಪದಲಿ ಕ್ರೋಧಗೊಳ್ಳದಲಿನಿತು
ಪಾಪಗಳ ಪ್ರೇಮದಿಂ ಕಾಣುವುದ ನೀ ಕಲಿತು
ಅಕ್ರೋಧ ಮಣಿಯೊಂದು ಪೋಣಿಸು ಶರಣಾ ! ॥೩॥

ಬಾಳಿನಲಿ ನಾನೆಂಬ ಹಮ್ಮು ಬಿಮ್ಮುಗಳಿಂದ
ಅಧಿಕಾರ ಹಿರಿತನದ ಮನದಿದ್ದ ಮದ ಮುರಿದು
ವಿನಯದ ಮಣಿಯೊಂದು ಪೋಣಿಸು ಶರಣಾ ! ॥೪॥

ಬಾಳಿನಲಿ ನನಗೆಂದು ನನ್ನದಾಸೊತ್ತೆಂದು
ಲೋಭದಲಿ ಚಿಂತಿಸುವ ಸರ್ಪಕಾವಲು ಬಾಳು
ನಡೆಸದಾ ಶುದ್ಧತೆಯು ಮಣಿಯು ಪೋಣಿಸು ಶರಣಾ ! ॥೫॥

ಸಂಶಯುದಿ ಚಿಂತಿಸುವ ಗೊಂದಲದ ಮನಕೆಲ್ಲ
ಸಂಶಯುದ ಭೂತವನು ಪೂರ್ಣ ಕಿತ್ತೊಗೆದಿಟ್ಟು
ಸಂಶಯುವಿಲ್ಲದ ಮಣಿಯು ಪೋಣಿಸು ಶರಣಾ ! ॥೬॥

ಬದುಕಿನಲಿ ಕಾಣುವೀ ಜಗದ ವೈಚಿತ್ರ್ಯಕ್ಕೆ
ದೈವ ಕಾರಣವೆಂಬ ಸತ್ಯವನು ಮನಗಂಡು
ನಂಬಿಕೆಯು ಮಣಿಯೊಂದು ಪೋಣಿಸು ಶರಣಾ ! ॥೭॥

ಬಾಳಿನಲಿ ಅನ್ಯರನು ಅನ್ಯರ ವಸ್ತುಗಳನ್ನು
ಗಮನಿಸುತ ಚಿಂತಿಸುತ ಪರಚಿಂತೆ ಮಾಡದಲಿ
ನಿಶ್ಚಿಂತೆ ಮಣಿಯೊಂದು ಪೋಣಿಸು ಶರಣಾ ! ॥೮॥

ಮನದಲ್ಲಿ ಯೋಚನಾ ಲಹರಿಗಳು ಕಾಡುತಿರೆ
ಶಾಂತಿ ನೀಡಲು ಬಲ್ಲ ದೈವವೊಂದಕೊಪ್ಪಿಸಿ
ದೈವ ಚಿಂತನೆಯು ಮಣಿಯು ಪೋಣಿಸು ಶರಣಾ ! ॥೯॥

ಬಾಳಿನಲಿ ಕರ್ತವ್ಯಕಾಗ್ರಿತನು ದಂಡಿಸುತ
ಪ್ರತಿ ಫಲಾಪೇಕ್ಷೆಯನ್ನು ಬಯಸದೇ ದುಡಿಯುತಲಿ
ನಿಷ್ಕಾಮ ಕರ್ಮ ಮಣಿಯೊಂದು ಪೋಣಿಸು ಶರಣಾ ! ॥೧೦॥

ವಿಶ್ವದಲಿ ಸರ್ವಕೂ ಮೂಲ ಶಿವ ಬಲವೆಂದು
ಲಿಂಗಬಲ ರೂಪವನು ಮನದಿ ಧಾರಣೆಗೈವ
ಧ್ಯಾನ ಸಾಧನೆ ಮಣಿಯ ಪೋಣಿಸು ಶರಣಾ ! ||೧೧||

ಅಧ್ಯಾತ್ಮ ಸಾಧನೆಯ ಹಿರಿ ಜಪದ ಶಕ್ತಿಯಲಿ
ಸತ್ಯ ಕಾಣುವೆನೆಂದು ನೇಮಗಳ ಪಾಲಿಸುವ
ನಿತ್ಯ ನಿಷ್ಠೆಯ ಮಣಿಯ ಪೋಣಿಸು ಶರಣಾ ! ||೧೨||

ಸಾಧನೆಯ ಶಕ್ತಿಯನು ದೇಹ ಸುಖಕಾಗೆನದೆ
ಸಿದ್ಧಿಸಿದ ಶಕ್ತಿಗಳು ಜಗದೊಳಿತಿಗಾಗೆಂಬ
ಪ್ರಮಾಣದ ಮಣಿಯೊಂದು ಪೋಣಿಸು ಶರಣಾ ! ||೧೩||

ಅರೆ ನಿಮಿಷ ವ್ಯರ್ಥದಲಿ ಕಳೆಯದೇ ಹಗಲಿರುಳು
ನಿತ್ಯ ಸಾಧನೆಗಾಗಿ ದೃಢ ನಿಶ್ಚಯವಗೈದು
ಹಟವೆಂಬ ಮಣಿಯ ಪೋಣಿಸು ಶರಣಾ ! ||೧೪||

ನಿಂದೆ ನೊಂದಾದಿಗಳ ಹಂಗು ಪರಿತಾಪಗಳ
ಗಮನಿಸದೆ ಕೊರಗದೇ ಬಂದುದನೆ ಸ್ವೀಕರಿಪ
ತಪಸಿನಾ ಮಣಿಯೊಂದು ಪೋಣಿಸು ಶರಣಾ ! ||೧೫||

ನಿತ್ಯ ಜಪಗೈಯುತಲಿ ಮಾಲೆ ಮುರಿಯದ ತೆರದಿ
ಅಂಥ ಜಪಮಾಲೆಯನು ಕಾಯ್ದುಕೊಳ್ಳುವೆನೆಂಬ
ದೃಢ ನಿಶ್ಚಯದ ಮಣಿಯ ಪೋಣಿಸು ಶರಣಾ ! ||೧೬||

ಈ ಬಗೆಯು ಹದಿನೈದು ಜಪಮಣಿಗಳ ಪೋಣಿಸಿ
ನೀ ಸೂತ್ರವಾಗಿರುತ ನಿತ್ಯದಲಿ ಜಪಿಸುತಲಿ
ನಿತ್ಯ ಬಾಳಲಿ ಶಾಂತಿ ಸುಖವ ಪಡೆ ಶರಣಾ ! ॥೧೭॥

ಶಿವಲಿಂಗ ದರ್ಶನದ ಪರಿಶುದ್ಧ ಜಪಮಣಿಯು
ಎಣಿಸುತಲಿ ನಿತ್ಯಧ್ಯಾನದಿ ನಿನ್ನ ನೀನರಿಯೆ
ಜಪಮಾಲೆಯಿದು ನಿನಗೆ ಜಯಮಾಲೆ ಶರಣಾ ! ॥೧೮॥

ಜಯದ ಈ ಜಪಮಾಲೆ ಸತ್ಯ ಮೋಕ್ಷದ ಮಾಲೆ
ಮಣಿಗಳಲಿ ಕೊರತವಾಗೆ ಜಪವಿಲ್ಲ ಜಯವಿಲ್ಲ
ಮಣಿಯೊಂದ ಮರೆಯದಲಿ ಜಪಿಸಯ್ಯ ಶರಣಾ ! ॥೧೯॥

ಶುದ್ಧ ಜಪಮಣಿಯಿಂದ ಜಪಿಸುತಿಹ ಸಾಧಕರು
ಅಪರೂಪ ಬಲಗಳಿಸಿ ಬೆಳಕಾಗಿ ನಿಲ್ಲುವರು
ಅಂಥ ಮಹ ಜ್ಞಾನದಾ ಜ್ಯೋತಿಯಾಗು ಶರಣಾ ! ॥೨೦॥

ಬಾಹ್ಯಾಂತರವನೆಲ್ಲ ಶುದ್ಧಿಸುವ ಜಪಮಾಲೆ
ಮೂಲ ಕಾರಣ ಲಿಂಗ ದರ್ಶನಕೆ ಜಯಮಾಲೆ
ಸಾಧಿಸಲು ಪಣ ತೊಡಲು ಹೂ ಮಾಲೆ ಶರಣಾ ! ॥೨೧॥

ನೂರಾರು ಓದಿದರು ನೂರಾರು ಕೇಳಿದರು
ಜಪಮಾಲೆಯಿಂದ ತೊರೆದ ಸಾಧನಾ ಜೀವಿಗಳ
ಜೀವನವೆ ಬಲು ವ್ಯರ್ಥ ಮರೆಯದಿರು ಶರಣಾ ! ॥೨೨॥

ಕೊರವಿರದೆ ಮಣಿಗಳನು ಜಪಿಸುವಾ ಸಾಧಕರ
ಜೀವನದ ಬೆಲೆಯನ್ನು ಕಟ್ಟಲಾಗುವುದೇನು ?
ಮೋಕ್ಷ ಪದವಿಯ ಪಡೆಯೆ ಅರಿಯಯ್ಯ ಶರಣಾ ? ||೨೩||

ಮಣಿಯೊಂದು ಕೊರವಾಗೆ ಕಣ್ಣಿರದ ಮುಖದಂತೆ
ಮಣಿಯಾರು ಕೊರವಾಗೆ ಅರಿವಿರದ ಹುಚ್ಚಂತೆ
ಮಣಿಯಿರದೆ ದಾರವಿರೆ ನಿರ್ಜೀವ ತನುವಂತೆ ಶರಣಾ ! ||೨೪||

ಜಗದ ಸಂಪದವೆಲ್ಲ ಒಂದು ಪಕ್ಕದೊಳಿಟ್ಟು
ಜಪಮಾಲೆ ಮಣಿಯೊಂದನೊಂದು ಪಕ್ಕದೊಳಿಡಲು
ಒಂದು ಮಣಿ ಬೆಲೆಗೆ ಸಮ ಸಿರಿಯಿಲ್ಲ ಶರಣಾ ! ||೨೫||

ನಿತ್ಯದಲಿ ಜಪಮಣಿಯ ಮಾಲೆಯನು ಧರಿಸಿರಲು
ಅದೆ ಶಾಂತಿ ಸಾಗರವು ಆನಂದ ಪರ್ವತವು
ಶಾಶ್ವತದ ಜೀವನದ ಅಮರ ಕುರುಹಯ್ಯ ಶರಣಾ ! ||೨೬||

ಜಪಮಾಲೆ ಧರಿಸುತಲಿ ಜೀವಿಸಿದ ಹಿರಿಯಾತ್ಮ
ವೇದ ಆಗಮ ಶಾಸ್ತ್ರ ಸಾರವನ್ನರಿತವನು
ಜೀವನದ ರಾಜ್ಯಕ್ಕವನೆ ರಾಜ ಶರಣಾ ! ||೨೭||

ಧರ್ಮ ಬದುಕು ನಡೆಸುವ ಶಿವಲಿಂಗ ಶರಣನೇ !
ಸತ್ಯ ಶೈವಾಚಾರದೀ ಬಲವನರಿಯದಲಿ
ಕುರುಡಾಗಿ ಬಾಳದೇ ಬೆಳಕಾಗು ಶರಣಾ ! ||೨೮||

ಲಿಂಗೈಕ್ಯ ಮಹಾತ್ಮರು ಸಾಧನೆಯ ಶಕ್ತಿಯಿಂ
ಲೋಕ ಜನಕಾಗಿತ್ತ ಭಾಗ್ಯ ಫಲಗಳೇನು ?
ವಿಶ್ವಕಾಗಿತ್ತ ದಾನವೇನರಿ ಶರಣಾ ! ||೨೯||

ಕೋಟ್ಯಾನು ಕೋಟಿ ಜನಕಿತ್ತಿಹರು ಮನದ ಸುಖ
ಕೋಟಿ ಜನರಿಗೆ ನಿರುತ ಅನ್ನ ನೀಡುತಲಿಹರು
ಸತ್ಯ ಜೀವನ ಮರ್ಮ ತಿಳಿಸಿಹರು ಶರಣಾ ! ||೩೦||

ಲಿಂಗೈಕ್ಯ ಜೀವಿಗಳ ವಚನವೆ ವೇದವಾಗಿ
ಕ್ಲೇಶದಲಿ ಶಾಂತಿಯನು ನೀಡುವ ಮೃತವಾಗಿ
ರಾಗ ತಾಳದಿ ಭಜಿಸಿ ಪಾಡುತಿಹರು ಶರಣಾ ! ||೩೧||

ಲಿಂಗೈಕ್ಯ ಜೀವಿಗಳು ಅವರವರ ಬಲದಂತೆ
ಮಹಾತ್ಮರ ನಾಮ ನುಡಿ ಭಜಿಸುತಾನಂದಿಸುತ
ಹಿರಿ ಲೋಕ ತಾಪಗಳ ಕಳೆಯುತಿಹರು ಶರಣಾ ! ||೩೨||

ನೂರಾರು ಜೀವಿಗಳ ಸಂಘಟನೆ ಮಾಡುತಲಿ
ತನದು ತನಗೆನ್ನುವ ಭೂತವನ್ನೋಡಿಸುತ
ಶಾಂತಿ ಸುಖ ನೆಮ್ಮದಿಯ ತಂದಿಹರು ಶರಣಾ ! ||೩೩||

ಲಿಂಗೈಕ್ಯ ಜೀವಿಗಳು ಸಾಧಕರ ತಪಕೆಲ್ಲ
ಸ್ವಪ್ನ ಜಾಗ್ರತದಲ್ಲಿ ಮಾರ್ಗದರ್ಶನವಿತ್ತು
ಕೈ ಹಿಡಿದು ಮುನ್ನಡೆಸುತಿರುವರರಿ ಶರಣಾ ! ||೩೪||

ಲಿಂಗೈಕ್ಯ ಜೀವಿಗಳ ನುಡಿ ನಾವು ಪೇಳುತಲಿ
ಬಾಳುತಿಹ ಜೀವರಿಗೆ ಹಸಿವಿರದೆ ನಿದ್ರಿಸುವ
ಆಶ್ರಯುವ ತೋರಿಹರು ಅರಿತುಕೋ ಶರಣಾ ! ॥೩೫॥

ಲಿಂಗೈಕ್ಯ ಜೀವಿಗಳ ಭಾವದಲಿ ನೆನೆವವರ
ಭೂತ ಗ್ರಹ ತಾಪಗಳ ಅರಿಯುದಲಿ ಬಿಡಿಸಿಹರು
ಅಮರರಾಗಿಹರಿದಕೆ ಸಾಕ್ಷಿಯಿದೆ ಶರಣಾ ! ॥೩೬॥

ರಾಜಾಧಿರಾಜರೇ ನೀಡಲಾಗದ ದಾನ
ಕಿರಿಯರಾಗಿ ಬೈರಾಗಿ ಯೋಗಿಗಳು ನೀಡಿಹರು
ಹಿರಿದಾನವಿತ್ತಿಹರು ಅರಿಯುದಲಿ ಶರಣಾ ! ॥೩೭॥

ಲಿಂಗೈಕ್ಯವಾದೊಂದು ಜೀವ ಕಿರಿದಾದರೂ
ಅಮರ ತಾನಲ್ಲದಿರೆ ಎಂತಾರ ಕಾಯುವುದು ?
ತನ್ನ ಅಮರ ಬಲದಿಂ ಸಲಹುತಿದೆ ಶರಣಾ ! ॥೩೮॥

ಸಾಮಾನ್ಯ ಜೀವನದಿ ಲೋಕಬಲ ತುಂಬಿದ್ದು
ಅವರಾವ ದಾನವನು ಎಷ್ಟೇನು ಸಲಿಸಿದರು
ಲಿಂಗೈಕ್ಯರಿತ್ತೊಂದು ದಾನಕ್ಕೆ ಸಮನಿಲ್ಲ ಶರಣಾ ! ॥೩೯॥

ಲಿಂಗವನೆ ಧ್ಯಾನಿಸುತ ಲಿಂಗದಲಿ ತಾ ನೆಲೆಸಿ
ಅಂತಶ್ಶಕ್ತಿಯ ಧರಿಸಿ ಲಿಂಗ ತಾನಾಗುತಲಿ
ಲಿಂಗೈಕ್ಯರೀ ಜಗಕೆ ಬಂದಿಹರು ಶರಣಾ ॥೪೦॥

ಲಿಂಗೈಕ್ಯ ಸಾಧಿಸಿದ ಹಿರಿದೈವ ಜೀವಿಗಳು
ತಮ್ಮ ತನುವಿರದೆಯೂ ಸೂಕ್ಷ್ಮದಲಿ ಬಾಳಿಹರು
ಸೂಕ್ಷ್ಮದಲಿ ಗುರಿಯಲ್ಲಿ ಸಲಹುತಿಹರು ಶರಣಾ ! ॥೪೧॥

ಅವರೆಂದು ಅಮರರೇ ಇದಕಿಹುದು ಸಾಕ್ಷಿ ತಿಳಿ
ನೂರಾರು ತರದಿಂದ ಸತ್ಯವನು ತೋರುತಲಿ
ಅರಿಯದೊಲು ಅವರಿಹರು ಅರಿಯಯ್ಯ ಶರಣಾ ! ॥೪೨॥

ಕಣ್ಣು ಕಾಣುವುದನ್ನೆ ನಂಬಲಾರದ ಜನರು
ಕಣ್ಣು ಕಾಣದ ಮಹಾ ಸೂಕ್ಷ್ಮ ಬಲವರಿಯುವರೆ ?
ಜ್ಞಾನಶಕ್ತಿಯು ಬಲವೆ ಅವರ ಬಲ ಶರಣಾ ! ॥೪೩॥

ವಿಧವಿಧದ ಗುಣದಿಂದ ತುಂಬಿ ಹುಟ್ಟಿಹ ಜನರು
ಹಿರಿ ಬಲದ ಮಹನೀಯರನ್ನರಿಯೆ ಸಾಧ್ಯವೇ ?
ಧರ್ಮ ಮಾರ್ಗಿಗಳನ್ನು ಅರಿಯಲಹುದೇ ? ಶರಣಾ ! ॥೪೪॥

ಚಿನ್ನವನ್ನರಿವ ಬಲ ಒರೆಗಲ್ಲೊಂದಕೇ
ಕಾಡುಕಲ್ಲುಗಳೆಲ್ಲ ಹೊನ್ನರಿಯಲಾರವು
ದೈವಿಗರು ಮಹಬಲವನರಿಯುವರು ಶರಣಾ ! ॥೪೫॥

೨೧

ಸಾಧನೆಯ ಮೆಟ್ಟಿಲು

ಕಾಯದಲಿ ನೆಲೆಸಿರುವ ಮೂಲ ಚೇತನ ಶಕ್ತಿ
ವಾಯು ರೂಪದಿ ಚಲಿಸಿ ಚೇತನ ನೀಡುತಿದೆ
ಅಂಥ ವಾಯುವನರಿತು ಕೈಪಿಡಿ ಶರಣಾ ! ॥೧॥

ಸಕಲ ಬಲ ಮೂಲವದು ಸರ್ವ ಚೇತನ ಮೂಲ
ಸಾಧನದಿ ವಶಪಡಿಸಿಕೊಂಡ ಹಿರಿಯೋಗಿಗೆ
ಇಚ್ಛಾಮರಣ ಬಲವುಂಟು ಶರಣಾ ! ॥೨॥

ಸಾಧನದ ಮಾರ್ಗವನು ಗುರುಮುಖದಿ ತಾನರಿತು
ವಿಥದ ವಾಯುಗತಿ ಹಲಮಾಸ ಸಾಧಿಸಲು
ತನುವನೆಲ್ಲ ಶುದ್ಧಿಸಿ ಬಲವೀವುದು ಶರಣಾ ! ॥೩॥

ಕಾಯದಲಿ ಎಲ್ಲೆಡೆಯು ವಾಯು ತಾ ಸಂಚರಿಸೆ
ತನುರೋಗ ನಿರ್ಮೂಲ ಮನರೋಗ ನಿರ್ಮೂಲ
ಅಂತರದ ಚೇತನದ ಬಲದರಿವು ಶರಣಾ ! ॥೪॥

ಕಾಯ ತಾ ಬಲವಾಗಿ ಮನವೆಲ್ಲ ತಿಳಿಯಾಗಿ
ಮಂಗಳದ ಚೇತನದಜ್ಞಾನ ದೃಷ್ಟಿಯು ತೆರೆದು
ತನ್ನ ತಾನರಿಯಲು ಬಲ ಪಡೆವೆ ಶರಣಾ ! ||೫||

ಜ್ಞಾನದೃಷ್ಟಿಯು ತೆರೆದು ಜ್ಯೋತಿಯನ್ನರಿಯಲು
ಆ ಜ್ಯೋತಿ ಬಲವನ್ನು ದೇಹದಿ ಚಲಿಸಲರಿಯೆ
ದೇಹದೊಳಗಿನ ರಚನೆ ಕಾಣುವುದು ಶರಣಾ ! ||೬||

ಜ್ಞಾನದೃಷ್ಟಿಯ ಜ್ಯೋತಿ ಸೂಕ್ಷ್ಮಜಗವರುಹುವುದು
ಸೂಕ್ಷ್ಮಜಗ ಬಲ ಕಂಡು ನಿನ್ನತನ ಮರೆಯುತಲಿ
ಶೂನ್ಯದಲಿ ನೀನಿಲ್ಲ ಶಕ್ತನಾಗುವೆ ಶರಣಾ ! ||೭||

ಶೂನ್ಯದಲಿ ನಿಂತು ನೀ ಮಗ್ನನಾಗಲು ಪೂರ್ಣ
ಸಕಲ ಅಂತರ ಬಾಹ್ಯ ಜಗಸ್ಥಿತಿಯನರಿಯುತಲಿ
ತ್ರಿಕಾಲ ಜ್ಞಾನವು ಪ್ರಾಪ್ತಿಯಾಗುವುದು ಶರಣಾ ! ||೮||

ಜಗಲೀಲೆ ತಿಳಿಯುತಲಿ ಜಗವರಿತು ಜಗವಾಳಿ
ಜೀವನದಿ ಸತ್ಯದ ಆನಂದವನುಭವಿಸಿ
ನಿಜವರಿವ ಯೋಗವು ಪ್ರಾಣಲಿಂಗವು ಶರಣಾ ! ||೯||

ಈ ಬಲವ ಸಾಧಿಸಲು ಕಾಯ ಶುದ್ಧವಗೊಳಿಸು
ಕ್ರಿಯಾಯೋಗವಗೈದು ನವದ್ವಾರ ಶುದ್ಧಿಸು
ಪ್ರಾಣವಾಯುವ ಹಿಡಿದು ಬಲವಾಗು ಶರಣಾ ! ||೧೦||

ಅಷ್ಟವಿಧ ಕ್ರಿಯೆಗಳು ಪಂಚ ವಿಧ ಮುದ್ರೆಗಳು
ಶತವಿಧ ಪ್ರಾಣಾಯಾಮಗಳು ತನುವ ಶುದ್ಧಿಸಲು
ಜ್ಞಾನದೃಷ್ಟಿಯು ಪಡೆದು ಜ್ಯೋತಿ ಪೂಜಿಸು ಶರಣಾ ! ॥೧೧॥

ಸದ್ಗುರುವಿನಾಶ್ರಯದಿ ಸಾಧನಾ ಕ್ರಮವರಿತು
ಶ್ರದ್ಧೆಯಿಂದನುಗಾಲ ಶ್ರದ್ಧೆಯಿಂದಭ್ಯಸಿಸಿ
ಪರಶಕ್ತಿ ಲಿಂಗೈಕ್ಯವಾಗಲರಿ ಶರಣಾ ! ॥೧೨॥

ಯೋಗ ಸಾಧಕನೆ ! ರವಿ ಉದಯ ಪೂರ್ವದಲೇಳು
ಪ್ರಾತರ್ವಿಧಿ ಪೂರೈಸಿ ಆಸನವನಭ್ಯಸಿಸು
ಪ್ರಾಣಾಯಾಮವ ನಿತ್ಯ ಸಾಧಿಸು ಶರಣಾ ! ॥೧೩॥

ಸಾತ್ವಿಕಾಹಾರದಿಂ ಮನವು ನಿರ್ಮಲವಹುದು
ಶಾಂತವಾತಾವರಣ ಬಲು ಮುಖ್ಯ ತಿಳಿದಿರು
ಈ ಯೋಗ ಸಾಧಿಸಲು ಧ್ಯಾನ ಸಾಧಿಸು ಶರಣಾ ! ॥೧೪॥

ರಾಜಯೋಗ ಧ್ಯಾನದಿ ಜ್ಯೋತಿ ದರ್ಶನ ಮುಖ್ಯ
ಪ್ರಾಣಾಯಾಮದ ಬಲದಿ ಜ್ಯೋತಿಯನು ದರ್ಶಿಸುತ
ಭ್ರೂಮಧ್ಯದಾ ಜ್ಯೋತಿಯದು ನಿಲಿಸು ಶರಣಾ ! ॥೧೫॥

ಗುರುವಿನಿಂ ಪಥವರಿತು ಅನುದಿನವು ಧ್ಯಾನಿಸುತ
ಯೋಗ ಮಾರ್ಗದ ಸಪ್ತ ಕೇಂದ್ರದಲಿ ಚಲಿಸುತಲಿ
ದೇಹದಂತರ್ಬಲವ ವೀಕ್ಷಿಸು ಶರಣಾ ! ॥೧೬॥

ನೇತ್ರಮಧ್ಯದ ಜ್ಯೋತಿ ಮೂಲಾಧಾರದಿ ನಿಲಿಸೆ
ಕುಂಡಲಿನಿ ಜಾಗೃತದಿ ಮಹಧೃತಿ ಬಲ ಪಡೆವೆ
ಅಂಥ ಶಕ್ತಿಯು ಬಲದಿ ಸಫಲನಾಗು ಶರಣಾ ! ॥೧೭॥

ಪ್ರಾಣಾಯಾಮವದೊಂದು ಹಿರಿಯೋಗ ಸಾಧನವು
ಆಯುಷ್ಯ ಆರೋಗ್ಯ ಪ್ರಾಣ ಬಲ ಕಾಯುವುದು
ಅಂಥ ಯೋಗದಿ ಫಲಿಸಿ ಜಯಿಸಯ್ಯ ಶರಣಾ ! ॥೧೮॥

ಸದ್ಗುರು ಮುಖದಿಂದ ವಾಯುಗತಿ ತಿಳಿಯುತಲಿ
ವಾಯುವಿನ ಸರಿ ಕ್ರಮದ ಚಲನೆಗಳನಭ್ಯಸಿಸಿ
ಷಟ್ಚಕ್ರ ದರ್ಶನವ ನೀ ಪಡೆ ಶರಣಾ ! ॥೧೯॥

ಉಷ್ಣ ಹೆಚ್ಚಿಸಬಹುದು ಉಷ್ಣ ತಗ್ಗಿಸಬಹುದು
ನಿದ್ರಾ ಸಮಾಧಿಗೂ ಅನುವಾಗುವ ಕ್ರಮದ
ಸೂಕ್ಷ್ಮ ಸಾಧನೆಯರಿತು ಗುರುತಿಸು ಶರಣಾ ! ॥೨೦॥

ಇಂತು ಸಾಧನ ಬಲದಿ ಪ್ರಾಣಸಿದ್ಧಿಯ ಪಡೆದು
ಪ್ರಾಣದಾ ಅಧಿಪತ್ಯ ಸ್ಥಾಪಿಸುತ ವಿವೇಕದಿಂ
ಜನನ ಮರಣಗಳಿರದ ಪದವಿ ಪಡೆ ಶರಣಾ ! ॥೨೧॥

ಕ್ರಮಬದ್ಧ ಯೋಗವನು ಗುರುವಿನಿಂದಲೇ ತಿಳಿ
ಗುರುವಿರದ ಸಾಧನೆಯು ಹಾನಿಕಾರಕವಹುದು
ಸಾಧನೆಯ ದೋಷಗಳು ಇರದಲ್ಲಿ ಶರಣಾ ! ॥೨೨॥

ಅಷ್ಟಾಂಗ ಯೋಗದಾ ಸಿದ್ಧಿಗಳು ಅಲ್ಲುಂಟು
ಪ್ರಾಣದಾ ಅಧಿಪತ್ಯ ನಿಜದುಂಟು ಸಾಧಿಸಲು
ಇಚ್ಛಾಮರಣ ಶಕ್ತಿ ಸಾಧಿಸು ಶರಣಾ ! ॥೨೩॥

ಸರಿಯೋಗ ಸಾಧನದಿ ಪ್ರಾಣವಾಯುವ ಹಿಡಿದು
ಪಂಚ ಮಹಾ-ಭೂತಗಳ ಸೂಕ್ಷ್ಮಗುಣವರಿಯುತಲಿ
ಸೂಕ್ಷ್ಮಬಲಗಳನೆಲ್ಲ ಜಯಿಸು ನೀ ಶರಣಾ ! ॥೨೪॥

ಜಗವನರಿಯಲು ಬಲ್ಲೆ ಜನ್ಮವರಿಯಲು ಬಲ್ಲೆ
ಜಗಕೆ ನೀ ಹಿರಿಶಕ್ತಿ ಚೇತನವ ಕೊಡಬಲ್ಲೆ
ದೈವಿಕತೆಯಾ ಬದುಕ ನಡೆಸಬಲ್ಲೆ ಶರಣಾ ! ॥೨೫॥

ದೈವದಲಿ ತನ್ಮಯತೆ ದೈವಬಲ ತೋರಿಪುದು
ದೈವದಲಿ ಒಂದಾಗಿ ನೀ ಮುಕ್ತನಾಗುವೆ
ಹಿರಿಯೋಗವನು ನಂಬಿ ಸಾಧಿಸು ಶರಣಾ ! ॥೨೬॥

ದಿವ್ಯ ನೇತ್ರದ ಬಲದಿ ದೇಹರಚನೆಯರಿತು
ಮನ ಬುದ್ಧಿ ಚಿತ್ತಾದಿಗಳ ಮರ್ಮವನು ತಿಳಿದು
ದೇಹ ಬುದ್ಧಿಯ ದೋಷ ಕಳೆದುಕೋ ಶರಣಾ ! ॥೨೭॥

ಸೂಕ್ಷ್ಮಬಲಗಳ ತಿಳಿದು ಸೂಕ್ಷ್ಮದೇಹವ ಕಂಡು
ಸೂಕ್ಷ್ಮಕಾರ್ಯಗಳೆಲ್ಲ ಪ್ರತ್ಯಕ್ಷ ವೀಕ್ಷಿಸುವೆ
ಸೂಕ್ಷ್ಮಬಲದಣುಗಳನು ವಶದಿ ಪಡೆ ಶರಣಾ ! ॥೨೮॥

ದೈವಸೃಷ್ಟಿಯಲೆಲ್ಲ ಚಿತ್ತಬುದ್ಧಿಯ ಹರಿಸಿ
ಗುಪ್ತ ಸತ್ಯವನೆಲ್ಲ ನೀ ದರ್ಶಿಸಲು ಬಲ್ಲೆ
ಸಮಾಧಿ ಸ್ಥಿತಿಯಲ್ಲಿ ಕಂಡರಿ ಶರಣಾ ! ॥ ೨೯ ॥

ಏಕಾಗ್ರಗೊಳಿಸಿ ಮನದಲೆಗಳನು ನಿಲಿಸುತಿರೆ
ಮನ ನಿಂತು ತೈಲಧಾರೆಯ ಹಾಗೆ ಧ್ಯೇಯದಲಿ
ತನ್ಮಯತೆ ಬರಲದೇ ಧ್ಯಾನ ಶರಣಾ ! ॥ ೩೦ ॥

ಧ್ಯಾನಿಸುವ ವೇಳೆಯಲಿ ದೇಶಕಾಲವರಿಯದೆ
ಗಂಟೆಗಳುರುಳಿದರು ದಿನಗಳೇ ಕಳೆದರೂ
ಧೃತಿಗೆಡದೆ ಧ್ಯಾನಿಪುದೆ 'ಸಮಾಧಿ'ಯು ಶರಣಾ ! ॥ ೩೧ ॥

ನಿದ್ರಿಸೆದ್ದವನಂತೆ ಅವ ಜ್ಞಾನಪಡೆಯದೆ
ಎಚ್ಚರಕೆ ಬರಲೆಂದು ಅದು ಶೂನ್ಯ ಸಮಾಧಿಯು
ಇಂಥ ಸಮಾಧಿಯಿಂ ಫಲವಿಲ್ಲ ಶರಣಾ ! ॥ ೩೨ ॥

ದೇಹೇಂದ್ರಿಯ ಪ್ರಾಣಗಳನೆಲ್ಲ ವಶಪಡಿಸಿ
ಧ್ಯಾನಿಸುತ ಸಮಾಧಿಯ ಸಾಧಿಪುದು ಬಹು ಕಷ್ಟ
ಆವ ಬಗೆ ಸಮಾಧಿಯೆ ಇರಲಿ ಅವಯೋಗಿ ಶರಣಾ ॥ ೩೩ ॥

ಜಗವುರುಳು ಮಾಡುವುದಕಾಗಲ್ಲ ಸಿದ್ಧಿಗಳು
ಸೃಷ್ಟಿಯ ರಹಸ್ಯಗಳ ಭೇದಿಸುವ ಈ ಯೋಗ
ದಿವ್ಯ ವಿಜ್ಞಾನ ತಿಳಿ ಮಹಾಜ್ಞಾನ ತಿಳಿ ಶರಣಾ ! ॥ ೩೪ ॥

ಸತ್ಯ ಸಾಕ್ಷಾತ್ಕಾರ ಪರಶಿವ ಗೊತ್ತಿಲ್ಲ
ಓದಿ ತಿಳಿಯಲಶಕ್ಯ ಕೇಳಿ ಪಡೆವುದಸಾಧ್ಯ
ಸಾಧನೆಯ ಪ್ರತ್ಯಕ್ಷದನುಭವವೆ ಯೋಗ ಫಲ ಶರಣಾ ! ||೩೫||

ನಾಲ್ಕುವಿಧ ಸಮಾಧಿಯ ಸ್ಥಿತಿಗಳಲಿ ಫಲಿಸುತಲಿ
ಬ್ರಹ್ಮವಿಜ್ಞಾನವನು ಜಗಕೆ ವರವಾಗಿ ಕೊಡು
ಬಲವಿತ್ತ ದೈವಕ್ಕೆ ಋಣಿಯಾಗು ಶರಣಾ ! ||೩೬||

ಮನುಜ ಜೀವನಕ್ಕೆಲ್ಲ ಸುಖ ಶಾಂತಿ ಬೆಳಕಿತ್ತು
ತಮ್ಮ ಜನುಮದ ಬಲವ ನಿಜ ಸಾಧಕರಿಗಿತ್ತು
ಜಗದಲಿ ಪೂಜ್ಯರು ಯೋಗಿಗಳು ಶರಣಾ ! ||೩೭||



೨೨

ಮನದ ಶಕ್ತಿ

ಮನವೆನ್ನುವಾ ಶಕ್ತಿ ಸಕಲ ಜೀವಕ್ಕುಂಟು
ಜೀವವೆನ್ನುವ ಬಲಕೆ ಮನವು ಜೊತೆಯಿಹ ಮಿತ್ರ
ಜೀವಮನ ಬಲವನರಿ ಶಿವಭಕ್ತ ಶರಣಾ ! ॥೧॥

ಮನವೆನ್ನುವಾ ಶಕ್ತಿ ದೇಹದ ಗುಪ್ತ ಶಕ್ತಿ
ಜೀವ ಕಾಣದೊಲಿರುತ ಮನವದರ ಜೊತೆಗಿರುತ
ಈ ಮನುಜ ಕಾಯುವನು ತೇಜಿಪುದು ಶರಣಾ ! ।೨॥

ಗುಪ್ತ ದೇಹವ ಧರಿಸಿ ಜೀವನವ ನಡೆಸುತಲಿ
ಸ್ಥೂಲದೇಹದಿ ನೆಲೆಸಿ ಮನ ಸುಖಿಸುವುದು ಕೇಳು
ಸ್ಥೂಲತನು-ಶಕ್ತಿ ಜೀವಕೆ ಕಿರಿದು ಶರಣಾ ! ॥೩॥

ಬೇರೆ ತನುಗಳ ಧರಿಸಿ ಮನದಿಚ್ಛೆಯೊಲು ಜೀವ
ತನುವನ್ನು ದುಡಿಸುತಿರೆ ಆನಂದಿಸುತ ಮನವು
ಬೇರೆ ದೇಹಗಳಲ್ಲಿ ಸುತ್ತುವುದು ಶರಣಾ ! ॥೪॥

ಮನಸು ಜೀವಗಳೆರಡು ದೇಹದಲಿ ಸೇರಿರಲು
ಜೀವದೊಳಗುಣದಂತೆ ಮನಸವೆಲ್ಲ ಅರಳುತಲಿ
ವಾಸನೆಯ ರೂಪದಲಿ ಸುಖಿಸುವುದು ಶರಣಾ ! ||೫||

ಪೂರ್ವ ತನುವಿನ ಗುಣವೆ ವಾಸನೆಯ ರೂಪವಿರೆ
ಪೂರ್ವ ತನು ಸಾಲವೇ ವಾಸನೆಯು ತಾನಾಗಿ
ತನ್ನ ಸುಖ ಸಾಧನೆಗೆ ವ್ಯಕ್ತಗೊಳುವುದು ಶರಣಾ ! ||೬||

ಜೀವ ತಾ ದೇಹಕ್ಕೆ ಬಂದು ಸೇರುವ ಮುನ್ನ
ಚಿತ್ತದಲಿ ವಾಸನೆಯ ಕೂಡಿ ತಾ ಸೇರುವುದು
ನಿಮಿತ್ತ ಕಾರಣದಿ ತನುವಿನಲಿ ಸುಖಿಸುವುದು ಶರಣಾ ! ||೭||

ಜೀವವುವೆನ್ನುವಾ ವಾಯುತೆರ ಸೂಕ್ಷ್ಮತನು
ಜಡ ತನುವ ತಾ ಸೇರಿ ವಾಸನೆಯ ಇಂಗಿಸುತ
ಬಾಡಿಗೆಯ ತನು ಬಿಟ್ಟು ನಡೆಯುವುದು ಶರಣಾ ! ||೮||

ಬಾಡಿಗೆಯ ಮನೆಯಂಥ ದೇಹದಲಿ ವಾಸಿಸಿ
ಜೀವನದ ಹಿರಿ ಕಿರಿಯ ಕಾಮನೆಗಳಲಿ ಮಿಂದು
ಅರಿಯದಲಿ ತಾ ಬಂದು ಹೇಳದೇ ಹೋಗುವುದು ಶರಣಾ ! ||೯||

ಮಡಿಯುವವರೇ ಎಲ್ಲರೊಂದಲ್ಲ ಒಂದು ದಿನ
ಸೂಕ್ಷ್ಮದೇಹವ ಹೊತ್ತು ಜೀವದೂರಾಗುತಿರೆ
ಸ್ಥೂಲದೇಹಕ್ಕೆ ಗತಿ ಏನಯ್ಯ ? ಶರಣಾ ! ||೧೦||

ಬರುವುದಕು ತೊರೆವುದಕು ಜೀವಮನ ಅಧಿಕಾರಿ
ಜೀವಮನದಧಿಕಾರ ದೈವಬಲಕಿರುತಿರಲು
ಸ್ವತಂತ್ರರಾಗಿಹರು ಎಂಬುದರಿ ಶರಣಾ ! ॥೧೧॥

ವೈಚಿತ್ರ್ಯದೀ ಬಲವ ಮಹಾಪುರುಷರು ಕಂಡು
ತನು ಜ್ಞಾನ ಮನ ಜ್ಞಾನ ಜೀವಜ್ಞಾನವೆನ್ನುವ
ದೈವಶಕ್ತಿಯ ಶಾಸ್ತ್ರ ರಚಿಸಿಹರು ಶರಣಾ ! ॥೧೨॥

ದೈವಶಾಸ್ತ್ರದ ನುಡಿಯು ಸತ್ಯಕೂ ಸತ್ಯವಿದೆ
ಸತ್ಯವರಿತಿಹ ಜನರು ಸತ್ಯ ಬಾಳರಿಯುವರು
ದೇಹಬುದ್ಧಿಯ ಜನರು ತಿಳಿಯುವರೆ ? ಶರಣಾ ! ॥೧೩॥

ಜೀವವೆನ್ನುವ ಶಕ್ತಿಯರಿತ ಹಿರಿ ಮಾನವರು
ಮನದ ವಾಸನೆಯರಿತು ಸುಕೃತವ ಗಳಿಸುವರು
ಸುಬಲದಿಂ ಹಿರಿ ಜನ್ಮ ಧರಿಸುವರು ಶರಣಾ ! ॥೧೪॥

ದೇಹ ಬಿಟ್ಟರು ಸರಿಯೆ ದೇಹವಿದ್ದರು ಸರಿಯೆ
ಜೀವಶಕ್ತಿಯು ಮನವು ಅಮರವು ಸ್ವತಂತ್ರವು
ತನುವಿರುವ ಕಾಲದಲೆ ಅರಿತುಕೋ ಶರಣಾ ! ॥೧೫॥

ಸ್ಥೂಲತನು ಬಿಟ್ಟಗಲಿ ಜೀವಮನ ಬೇರಾಗೆ
ಸಕಲ ಶಕ್ತಿಯು ಜ್ಞಾನ ಸೂಕ್ಷ್ಮ ಜೀವಕ್ಕುಂಟು
ವ್ಯತ್ಯಯವಿಲ್ಲದೆ ಅಮರವಾಗಿಹುದು ಶರಣಾ ! ॥೧೬॥

ಜೀವ ಸೂಕ್ಷ್ಮದಲಿರುತ ವಾಯುವಲಿ ಚಲಿಸುತ್ತ
ತನ್ನತನದರಿವನ್ನು ಹೊಂದಿರುತ ಬಾಳುವುದು
ಇದುವೆ ಅಂತಶ್ಶಕ್ತಿ ಜೀವನಿಗೆ ಶರಣಾ ! ||೧೭||

ತನುವೆರಡು ಜೀವನಿಗೆ ಸ್ಥೂಲ ಸೂಕ್ಷ್ಮಗಳೆಂದು
ಸೂಕ್ಷ್ಮದಲಿರುವ ಮನಕೆ ಅವಸ್ಥೆಗಳು ನಾಲ್ಕು
ನಿದ್ರೆ ಜಾಗ್ರತೆ ಸ್ವಪ್ನ ತೂರ್ಯಗಳೆಂದು ಶರಣಾ ! ||೧೮||

ಜಾಗ್ರತದಿ ಸ್ಥೂಲಗುಣ ಸ್ವಪ್ನದಲಿ ಮನದ ಗುಣ
ನಿದ್ರೆಯಲಿ ಜೀವಗುಣ ತೂರ್ಯದಲಿ ದೈವಗುಣ
ಈ ನಾಲ್ಕು ಗುಣದಿಂದ ಚಲಿಸುವುದು ಶರಣಾ ! ||೧೯||

ಮನವು ಜೀವದಲಿದ್ದು ಸ್ಥೂಲ ದೇಹದಿ ನೆಲೆಸಿ
ಬಾಹ್ಯಾಂತರದ ಜಗದ ಅನುಭವಗಳನು ಪಡೆದು
ಜೀವನನು ಸರಿಪಥದಲೊಯ್ಯುವುದು ಶರಣಾ ! ||೨೦||

ಮನವೆ ಹಿರಿ ಕಾರಣವು ಜೀವನಿಗೆ ಬಲವಿಡಲು
ಬದುಕಲಿ ಮನದ ಪಾತ್ರ ಜೀವನಿಗೆ ಹಿರಿದುಂಟು
ಸುಖ ದುಃಖ ಶಾಂತಿಗಳ ಮನೆ ಮುಚ್ಚಲು ಶರಣಾ ! ||೨೦||

ಸುಖ ದುಃಖದನುಭವಕ್ಕೆ ಮನವೆ ತಾ ಕಾರಣವು
ಅಂಥ ಹಿರಿ ತನದ ಬಲವಿಹುದು ಮನಕೆಂದಿಗೂ
ಮನಪಿಡಿದು ಜೀವಬಲ ಪಡೆಯುಯ್ಯ ಶರಣಾ ! ||೨೨||

ಹಿಡಿದ ಮನದಿಂದಲೇ ಎಲ್ಲ ತಿಳಿಯಲು ಶಕ್ಯ
ಮನೋನಿಗ್ರಹಯುಕ್ತಿಯೊಂದನರಿ ಬದುಕಲ್ಲಿ
ಸತ್ಯದರ್ಶನದಿಂದ ಬಾಳು ಸಾರ್ಥಕ ಶರಣಾ ! ||೨೩||

ಮನವನ್ನು ಹಿಡಿವುದಕೆ ಶಾಂತಿಯಿಂದಲೆ ಸಾಧ್ಯ
ಶಾಂತ ಸ್ಥಿತಿಯನು ಪಡೆಯೆ ನಿಗ್ರಹವೆ ಮೂಲವು
ನಿಗ್ರಹದಿ ಸರ್ವರಿಗೂ ಒಳಿತಹುದು ಶರಣಾ ! ||೨೪||

ನಿಗ್ರಹಕೆ ಸಾಧನಗಳಾಕಾರ ರೂಪಗಳು
ಭಕ್ತಿ ಜ್ಞಾನ ಪಥಗಳು ವಾಯು ಬಂಧನಗಳು
ಈ ನಾಲ್ಕು ವಿಧದಿಂದ ಮನ ಹಿಡಿಯಲಹುದು ಶರಣಾ ! ||೨೫||

ಮನ ಹಿಡಿದ ಜೀವಿಗಳು ಸರ್ವಜ್ಞ ಬಲ ಪಡೆದು
ಅರಿಯಬಲ್ಲರು ಎಲ್ಲ ಆರುಹಬಲ್ಲರು ಎಲ್ಲ
ಪರ ಸುಖದ ಹಿರಿತನದಿ ಬಾಳಲರಿ ಶರಣಾ ! ||೨೬||

ಸಕಲ ಒದಗಿಸಬಲ್ಲ ದೈವಮನ ಶಕ್ತಿಯನು
ಬಿಡದಂತೆ ಮರೆಯದಲಿ ಸಾಧಿಪರು ಭಕ್ತರು
ಮನದೈವ ಹಿಡಿದೊಂದು ವರವ ಪಡೆ ಶರಣಾ ! ||೨೭||

ದೈವಮನ ಸಾಧಿಸಲು ಚಿಂತೆಗಳ ಕೊರವಿರಲಿ
ಶಾಂತಮಯ ಬಾಳಿರಲಿ ಆಸೆಗಳ ಕೊರವಿರಲಿ
ಅಂತರಲು ಮನದೈವ ಬಲಪಡೆವೆ ಶರಣಾ ! ||೨೮||

ಮನಸದ್ದೈವವೊಲಿದವರು ಮನುಜಕುಲ ಶ್ರೇಷ್ಠರು
ಅಗ್ರಗಣ್ಯನೆನಿಸುವ ವರವೊಂದ ಪಡೆಯುತಲಿ
ಮನುಜಕುಲವೆಲ್ಲ ನೀ ಬೆಳಗಲರಿ ಶರಣಾ ! ॥೨೯॥

ಮನದ ಬಲವರಿಯುದಲಿ ಕುರುಡಾಗಿ ಬಾಳಿದರೆ
ಮನದ ಹಿರಿ ಮಾಯೆಗೇ ಸಿಲುಕಿದಾಳಾಗಿರುತ
ಬಾಳಿನಲಿ ಭಾಗ್ಯಸುಖ ಕಾಣದಾಗುವರು ಶರಣಾ ! ॥೩೦॥

ಮನವು ಏನೆಂಬುದರಿ ಮನದ ಹಿರಿ ಗುಣವನರಿ
ಮನದ ವರಬಲವನರಿ ಮನದ ಲೀಲೆಗಳನರಿ
ಮನ ಹಿಡಿದು ಮಹಬಲದಿ ಸುಖಿಸಯ್ಯ ಶರಣಾ ! ॥೩೧॥

ವರವೀವ ಮನಕೆಂದು ದೊರೆಯುದೊಂದಿನಿತಿಲ್ಲ
ಸಕಲ ಜ್ಞಾನವನರಿತು ಸಕಲ ನೀಡುವ ದೈವ
ಮನವೊಂದೆ ಅಂಥ ಮನ ನಿನ್ನೊಳಿದೆ ಶರಣಾ ! ॥೩೨॥

ಸೂಕ್ಷ್ಮತನುವಾಗಿರಲು ಹಿರಿಬಲವು ನಿನ್ನೊಳಿದೆ
ಸ್ಥೂಲದಲಿರುವ ಸೂಕ್ಷ್ಮಬಲವ ಧರಿಸೊಂದುದಿನ
ಅದುವೆ ಶಾಶ್ವತ ಬಾಳು ತಿಳಿಯಯ್ಯ ಶರಣಾ ! ॥೩೩॥

ಸೂಕ್ಷ್ಮತನುವರಿತವರು ಸ್ಥೂಲತನು ಮೋಹಿಸರು
ಸೂಕ್ಷ್ಮತನುಬಲ ಬೆಳೆಸಿ ಸ್ಥೂಲವನು ಪೂಜಿಪರು
ಹಿರಿಬಲದ ಸೂಕ್ಷ್ಮತನು ಮರ್ಮವರಿ ಶರಣಾ ! ॥೩೪॥

ಸೂಕ್ಷ್ಮದೇಹವನರಿಯೇ ಮನವೆ ಹಿರಿ ಸಾಧನವು
ನಿಗ್ರಹಿಸುತ ನಿರ್ಮಲ ಮನವ ಸಾಧಿಸಿದವರು
ಅದನರಿತು ಸೂಕ್ಷ್ಮಬಲ ಪಡೆಯುವವರು ಶರಣಾ ! ||೩೫||

ಸ್ಥೂಲದೇಹದ ಕರ್ಮಶೇಷಗಳಿರದ ಜೀವ
ಸ್ಥೂಲದೇಹಕೆ ಬರದೆ ಸೂಕ್ಷ್ಮದೇಹದಿ ಬದುಕಿ
ಅಮರ ಜೀವನ ಶಕ್ತಿ ಪಡೆಯುವುದು ಶರಣಾ ! ||೩೬||

ಸ್ಥೂಲತನು ಕರ್ಮಕ್ಕಲಿಪ್ತರಿಹ ಯೋಗಿಗಳು
ಪೂರ್ವ ಸ್ಥೂಲದ ಕರ್ಮ ಸವೆಸಿದಾ ಜ್ಞಾನಿಗಳು
ಸೂಕ್ಷ್ಮದಲಿ ನೆಲೆಸುತಲಿ ಅಮರರು ಶರಣಾ ! ||೩೭||

ತನುವೆಂಬ ವಾಹನವ ಎಳೆಯುವುದೆ ಸೂಕ್ಷ್ಮತನು
ಸಕಲ ಕಾರ್ಯಗಳಿಗದು ಮೂಲಬಲವದು ಸತ್ಯ
ಅಂತಿರ್ಪ ಸೂಕ್ಷ್ಮದಾ ಬಲ ಧರಿಸು ಶರಣಾ ! ||೩೮||

ಸೂಕ್ಷ್ಮದೇಹದ ಶಕ್ತಿ ಸಾಧಿಸುತ ಅರಿತವರು
ತಮ್ಮಿಚ್ಛೆಯಂತೆಲ್ಲ ಹುಟ್ಟುಸಾವರಿಯುವರು
ತಾವೆ ಇಚ್ಛಿಸಿದಂದು ಜನಿಸುವರು ಶರಣಾ ! ||೩೯||

ಸ್ಥೂಲ ಸೂಕ್ಷ್ಮಗಳನ್ನು ಮನವು ನಿಜದರಿಯುವುದು
ಅಂಥ ಮನ ಹಿರಿಸ್ನೇಹ ದೊರಕಿಸಿಕೊ ಬಾಳಿನಲ್ಲಿ
ಅದುವೆ ಸಕಲವನೀವ ಜ್ಞಾನಗುರು ಶರಣಾ ! ||೪೦||

ಹಿರಿ ಸೂಕ್ಷ್ಮ ಶಕ್ತಿಯು ಹಿರಿ ಮನದ ಮಹಾತ್ಮರು
ಸರಿಯಾದ ದೇಶದಲಿ ಸರಿ ಸಮಯದಲಿ ಜನಿಸಿ
ತಮ್ಮ ಹಿರಿ ಸಾಧನದ ಫಲವೀವರು ಶರಣಾ ! ||೪೧||

ಕಿರುಬಲದ ಸೂಕ್ಷ್ಮತನು ದೇಹವಿಲ್ಲದೆ ಬಾಳಿ
ದುಷ್ಟತನ ಗುಣದಿಂದ ವಾಯುವಲಿ ಚಲಿಸುತಲಿ
ಅನ್ಯಸ್ಥೂಲದಿ ಸೇರಿ ನೋವೀಯುವುದು ಶರಣಾ ! ||೪೨||

ಜಗದೆಲ್ಲ ರೂಪಗಳ ನಿರ್ಮಿಸಿಹುದೇ ಮನವು
ಸಕಲ ಜ್ಞಾನದ ಶಾಸ್ತ್ರ ರಚಿಸೆ ಕಾರಣ ಮನವು
ಸಕಲವೂ ಮನದಿಂದ ಮನವೆ ಸರ್ವಜ್ಞ ಬಲ ಶರಣಾ ! ||೪೩||

ಮನ ನಿಗ್ರಹಕೆ ಬೇಕು ಸುಗುಣ ಸದ್ಬುದ್ಧಿಗಳು
ಸಾತ್ವಿಕದ ಭಾವಗಳು ಭಕ್ತಿ ಅಭ್ಯಾಸಗಳು
ಜ್ಞಾನವನು ಗಳಿಸೆಂತೊ ಮನವ ಹಿಡಿ ಶರಣಾ ! ||೪೪||

ಮನವಾಯು ನಿಲಿಸಿರಲು ಪ್ರಾಣವಾಯು ನಿಲುವುದು
ಪ್ರಾಣವಾಯು ನಿಲಿಸಲು ಮನವಾಯು ನಿಲ್ಲುವುದು
ಎರಡಕ್ಕು ಸರಿಬಲವ ತುಂಬಲರಿ ಶರಣಾ ! ||೪೫||

ಪ್ರಾಣಾಯಾಮದಿಂದ ವಾಯುವನು ಶುದ್ಧಿಸುತ
ಮನವನ್ನು ಕದಲಿಸುತ ಸೆಳೆದೆಳೆವ ವಸ್ತುಗಳ
ಆಸೆಗಳ ಮಾಯೆಯಿಂ ದೂರವಿರು ಶರಣಾ ! ||೪೬||

ರೂಪವೆಂಬುದ ತೊರೆದು ಆಸೆಯೆಂಬುದನಳಿಸಿ
ರಂಗು ರಂಗಿನ ಮೋಹ ಮನದಿ ಮನೆ ಮಾಡದೊಲು
ಸತ್ಯ ನಿಶ್ಚಲ ಮನವ ನೀ ತಾಳು ಶರಣಾ ! ॥೪೭॥

ಆವ ದಿಶೆಯಲಿ ಮನವು ಉರುಳುತಿದೆಯೆಂದರಿತು
ಹರಿಯುದಂತಲಿ ಹಿಡಿದು ಬೇಡವೆನ್ನುತ ನಿಲಿಸು
ಓಡುವಾ ಮನವನ್ನು ಶಿವನಿಗಾಗಿರಿಸು ಶರಣಾ ! ॥೪೮॥

ಹರಿದೋಡುವಾ ಮನವ ಬುದ್ಧಿಯಿಂದಲಿ ಕಟ್ಟು
ಸರಿತತ್ವಮಾರ್ಗದಲಿ ನಡೆಯಿಸುತ ನಿಗ್ರಹಿಸು
ಎಂತು ಉರುಳಿದರೇನು ? ಸರಿಪಡಿಸು ಶರಣಾ ! ॥೪೯॥

ವಯೋಧರ್ಮಕೆ ಮಣಿದು ತನುಧರ್ಮಕನುಗುಣದಿ
ದೇಹದೆಡೆ ಮನವೆಲ್ಲ ಉರುಳುವುದು ಸಹಜದಲಿ
ಅಂಥ ಸಹಜತೆಯರಿತು ಎಚ್ಚರಿರು ಶರಣಾ ! ॥೫೦॥

ಶಿವಲಿಂಗ ರೂಪದಲಿ ವಿಶ್ವವನು ಕಾಣುತಲಿ
ವಿಶ್ವ ಪ್ರಾಣದ ಶಕ್ತಿ ಕಾಣುತಿರು ಲಿಂಗದಲಿ
ನೀನೊಂದು ಸುದಿನದಲಿ ಲಿಂಗಬಲವನ್ನರಿವೆ ಶರಣಾ ! ॥೫೧॥

ಸತ್ಯಧ್ಯಾನದ ಮನವ ಲಿಂಗದಲಿ ನಿಲಿಸಿರಲು
ಧ್ಯಾನಲಿಂಗದ ರೂಪ ಮಾರ್ಗವನು ತೋರುವುದು
ನಿದ್ರೆ ಜಾಗ್ರತೆ ಸ್ವಪ್ನಾವಸ್ಥೆಗಳಲಿ ಶರಣಾ ! ॥೫೨॥

ಈ ಪರಿಯ ಮನವಾಗಿ ಮಾರ್ಗವನು ದರ್ಶಿಸಲು
ಗುರುವಿಗೂ ಗುರುವಾಗಿ ಸುಜ್ಞಾನ ನೀಡುವುದು
ಆ ಬಲವೆ ಮಹಾಗುರು ಸತ್ಯಪರಿ ಶರಣಾ ! ||೫೩||

ಸ್ಥೂಲ ತನುವಿನ ಗುರುವು ತೋರುತಿಹ ಪಥಕಿಂತ
ಹಿರಿಯಾದ ಸರಿಮಾರ್ಗ ತೋರುವುದು ಒಂದುದಿನ
ಜೀವಬಲ ಗುಣದಂತೆ ಮಾರ್ಗದರ್ಶನ ಶರಣಾ ! ||೫೪||

ಬೇಕಿರುವುದೆಲ್ಲವನು ಅರಿದಂತೆ ಮಾಡುವುದು
ಸೇರಬೇಕಾದೆಡೆಗೆ ಕರೆದೊಯ್ಯುವದರಿಯದಲೆ
ಅಲ್ಲಿ ನೀಡುವುದೆಲ್ಲ ವರಗಳನು ಶರಣಾ ! ||೫೫||

ದೈವದಾ ಕೀಲಿಯನು ದೈವವೇ ಬಲ್ಲುದು
ತನ್ನ ಹಿರಿ ಭಕ್ತರನು ತಾನೆಂದು ಸಲಹುತಲಿ
ತನ್ನಿಚ್ಛೆಯಧಿಕಾರ ನೀಡುವುದು ಶರಣಾ ! ||೫೬||

ದೈವದಲಿ ದಾಸ್ಯತ್ವ ಭಕ್ತಿಯಿಂದಾಶಿಸಿರೆ
ಶಕ್ತಿಗನುಗುಣವಾಗಿ ವಿದ್ಯೆಗಳ ಕಲಿಸುವುದು
ದೈವವೀಯುವ ವಿದ್ಯೆ ಮೋಕ್ಷಪ್ರದ ಶರಣಾ ! ||೫೭||

ಅಂತರಂಗದ ಗುರುವ ಪಡೆದು ಜೀವಿಸುತಿರಲು
ಅಂದು ಅವ ಸ್ವತಂತ್ರನು ಸರ್ವಬಲ ಸಿದ್ಧನು
ಅಂತರಂಗ ಗುರುವಿನ ಕರುಣೆ ಪಡೆ ಶರಣಾ ! ||೫೮||

ಅಂತರಂಗದ ಗುರುವೆ ಸಕಲ ತತ್ವಕೆ ಗುರುವು
ಸಕಲ ಜ್ಞಾನಕೆ ಗುರುವು ಸರ್ವಬಲಕೂ ಗುರುವು
ಆ ಸತ್ಯ ಗುರು ಕರುಣೆ ಪಡೆಯಯ್ಯ ಶರಣಾ ! ॥೫೯॥

ಸರಿಯಾದ ಮಾರ್ಗವನು ಅರಿವಂತರಂಗ ಬಲ
ಪಡೆದವರು ಮಹಾತ್ಮರು ಹಿರಿ ಭಾಗ್ಯವಂತರು
ಅವರೆಲ್ಲ ಜಗದಲ್ಲಿ ಜ್ಯೋತಿಗಳು ಶರಣಾ ! ॥೬೦॥

ಮನಶಕ್ತಿ ಸಿದ್ಧಿಸಲು ಗುರುಬಲದಿ ಗುರುವಾಗಿ
ಗುರುತ್ವದಿ ಲಿಂಗಕೆಲ್ಲ ಕರುಣೆಯನು ಬೀರುತಲಿ
ಇಹಪರದ ಆನಂದವನುಭವಿಸು ಶರಣಾ ! ॥೬೧॥

ಮನಬಲವು ಸಿದ್ಧಿಸಲು ಇಷ್ಟಾರ್ಥ ಫಲಿಸುವುದು
ರೋಗರುಜಿನಾದಿಗಳ ವಾಸಿಗೊಳಿಪುದು ಕ್ಷಣದಿ
ಆವ ತೆರ ದುಶ್ಯಕ್ತಿಯಾಟ ನಡೆಸದು ಶರಣಾ ! ॥೬೨॥

ಎದುರಾದ ದುಷ್ಟಪ್ರಾಣಿಯ ಕ್ರೌರ್ಯ ಕಳೆಯುವುದು
ದುರ್ಮಾಲಿಣ ದುರ್ವಿಧಿಯ ಮೊದಲಲ್ಲೆ ಸೂಚಿಸುತ
ತಾಪಕೀಡಾಗದೊಲು ಕಾಯುವುದು ಶರಣಾ ! ॥೬೩॥

ಸತ್ಯವನೆ ನುಡಿಸುತಲಿ ಮಿಥ್ಯಗಳನರುವುದು
ಸತ್ಯ ಸುಗುಣಿಗಳಿರುವ ಎಡೆಗೊಯ್ದು ನಿಲಿಸುವುದು
ಇಹಪರದ ಶಾಂತಿಯನು ನೀಡುವುದು ಶರಣಾ ! ॥೬೪॥

ಉತ್ತಮೋತ್ತಮವೆನಿಪ ನಡೆನುಡಿಯು ಹೊಂದಿರಲು
ಸಜ್ಜನರ ಸಂಗವನು ನೀಡುತಲಿ ಸುಖವಿತ್ತು
ಅಡಿಗಡಿಗು ದೈವಬಲವಾಗುವುದು ಶರಣಾ ! ॥೬೫॥

ಲಿಂಗಸಾಧನಬಲದಿ ದೈವದೀ ವೈಚಿತ್ರ್ಯ
ಬಾಳಿನಲಿ ಕಂಡರಿತು ಸುಖಮುರ್ಪವರಿತವರು
ಲೋಕ ತಾಪಗಳಿರದ ಸಬಲರು ಶರಣಾ ! ॥೬೬॥





ಶರಣ ಗೀತೆ

ಭಾಗ—೨

ವಿಷಯ ಸೂಚಿ :—

(1) ಧ್ಯಾನಸಾಧನೆ 1–10

(2) ಧ್ಯಾನಸ್ಥಿರತೆ 11–81

(3) ಲಿಂಗೈಕ್ಯಜೀವಿ 19–23

(4) ಅನುಭವಮಂತ್ರ 24–29





೧

ಧ್ಯಾನ ಸಾಧನೆ

ಮನದ ಸ್ಥಿರನಿಗ್ರಹಕೆ ಪ್ರಾರಂಭ ಸಾಧಿಸು
ಧ್ಯಾನ ಸಾಧನವೆಂಬ ಮನೋನಿಗ್ರಹವನರಿ
ಮನಕಟ್ಟಿ ಶುದ್ಧಿಸು ಶಿವಲಿಂಗ ಶರಣಾ ! ॥೧॥

ನಾಲ್ಕು ವಿಧ ಗುಣವಿಹುದು ಸರ್ವಮನುಜರ ಮನಕೆ
ಚಂಚಲತೆ, ಚಪಲತೆ, ಆತುರತೆ, ಮುಂದರಿವು
ಈ ನಾಲ್ಕು ಗುಣದಿಂದ ಸ್ಥಿರವಿರದು ಮನ ಶರಣಾ ! ॥೨॥

ನಾಲ್ಕುಗುಣಗಳಿರದಿರೆ ಮನವೆಲ್ಲ ಸ್ಥಿರವಹುದು
ಸ್ಥಿರಮನವೆ ಸಕಲಬಲ ಸತ್ಯದರ್ಶನಕೆ ಬಲ
ಅಂಥ ಸ್ಥಿರಮನಕಾಗಿ ಅಭ್ಯಸಿಸು ಶರಣಾ ! ॥೩॥

ಸಾಧನೆಯ ಬಲದಂತೆ ಮನಸ್ಥಿರತೆ ಸಿದ್ಧಿಸಲು
ಸಕಲ ಜ್ಞಾನದ ಶಕ್ತಿ ಧರಿಸುವುದು ತಾನಾಗಿ
ಅಂತಿರ್ಪ ಮನಬಲವ ಸಾಧಿಸಿಕೊ ಶರಣಾ ! ॥೪॥

ಮನವು ನಿನ್ನ ಕೈಯೊಳಿರೆ ಹಿರಿಜ್ಞಾನಿ ನೀನಯ್ಯ
ನೀ ಮನಕಧೀನನಿರೆ ಅಜ್ಞಾನಿ ನೀನಯ್ಯ
ಮನಕೆ ಅಡಿಯಾಳಾಗಿ ಬಾಳದಿರು ಶರಣಾ ! ||೫||

ಮನದ ಕೈಯೊಳಗಿರದೆ ಮನವನಾಳಾಗಿಸುತ
ಚಂಚಲತೆ, ಚಪಲತೆ, ಆತುರತೆ, ಮುಂದರಿವು
ಎಂಬಲೆಗಳಿರದಂತೆ ಸಾಧಿಸು ಶರಣಾ ! ||೬||

ಮನ ಶುದ್ಧವಾಗಲು ಸತ್ಯಸಾಧನೆ ಮಾಡು
ದಿನ ದಿನವು ಮನಕಟ್ಟಿ ವಶಗೊಳಿಸುತಲಿ ಸಾಗು
ಆ ಬಲವೆ ಶಿವಲೀಲೆ ದರ್ಶನಕೆ ಶರಣಾ ! ||೭||

ಕ್ರಮ ಬಿಡದೆ ಪ್ರತಿನಿತ್ಯ ಸಾಧನದಿ ನೇಮದಿಂ
ತನುವಿಗಾಹಾರದೊಲು ಮನಕೆ ಧ್ಯಾನವನಿತ್ತು
ತನುಮನಗಳೆರಡನ್ನು ಬಲಗೊಳಿಸು ಶರಣಾ ! ||೮||

ಹಿರಿ ಬಲದ ತನುವಾಗಿ ಮನದ ಬಲ ಕೊರವಾಗೆ
ಶಕ್ತಿಯೆನಿತಿದ್ದರೂ ಸುಖಶಾಂತಿಯಿರದಲ್ಲ
ತನುಶಾಂತಿ ಕೀಲಿಕೈ ಮನವಿಹುದು ಶರಣಾ ! ||೯||

ಮನವು ಶಾಂತಿಯ ಧರಿಸಿ ತನು ಶ್ರಮದಿ ದುಡಿಯುತಿರೆ
ಸುಖದುಃಖ ಗಮನಿಸದ ಶಾಂತಿಯನುಭವವುಂಟು
ಬಲವಿರುವ ಕಾಲದಲೆ ಮನಬಲವ ಗಳಿಸಿಕೋ ಶರಣಾ ! ||೧೦||

ಸುಖ ಶಾಂತಿಯೆಂಬುವುದು ಕಾಯದಿಂ ಹೊರಗಿಲ್ಲ
ತನುತ್ರಯಗಳ ಮಧ್ಯೆ ಮನದಲ್ಲಿ ನೆಲೆಸಿಹುದು
ಬಾಹ್ಯದಲಿ ಹುಡುಕಿದರೆ ದೊರೆಯದರಿ ಶರಣಾ ! ||೧೧||

ಮನವೆ ಕೈಯಾಳಾಗಿ ನಿನ್ನಯಾಧೀನವಿರೆ
ಒಳ ಮನದ ಸೋಜಿಗದ ಲೀಲೆಗಳ ಕಾಣುವೆ
ಮನವೊಂದು ಅದ್ಭುತವು ಸೃಷ್ಟಿಯಲೆ ಶರಣಾ ! ||೧೨||

ಸ್ಥಿರವಿರದ ಮನದವರು ಆವ ಸುಖವನು ಪಡರು
ಸುಖವಿರಲು ಸ್ಥಿರವಿರದೆ ದುಃಖವನು ಕರೆಯುವರು
ಅಂತು ಮನ ನಿಲದವರು ಪಾಮರರು ಶರಣಾ ! ||೧೩||

ಸ್ಥಿರವಿರುವ ಮನದವರು ದುಃಖದಲು ಸುಖಿಸುವರು
ಸುಖದಲ್ಲು ಸುಖಿಸುವರು ಮರಣದಲು ಸುಖಿಸುವರು
ಸ್ಥಿರಮನದ ಜೀವರಿಗೆ ಪರ ಸುಖವು ಶರಣಾ ! ||೧೪||

ಶಾಂತಿಯಿರೆ ಸುಖವುಂಟು ಸುಖವಿರಲು ಬಲವುಂಟು
ಶಾಂತಿ ಸುಖವೆಂಬೆರಡು ಸಿರಿ ನಿನ್ನೊಳಿಹುದು ತಿಳಿ
ಹಿರಿ ಧೈರ್ಯ ಸಾಹಸದಿ ಹೋರಾಡು ಶರಣಾ ! ||೧೫||

ಮನದ ಬಲದಿಂದಲೇ ಸುಖಿಸಬಲ್ಲುದು ಜೀವ
ಮಿಕ್ಕಾವ ಬಲವಿದ್ದು ಸುಖವೆಂಬುದದಕಿಲ್ಲ
ನಿತ್ಯ ಹಿರಿ ಸಂಪದವು ಮನಸ್ಥಿರತೆ ಶರಣಾ ! ||೧೬||

ಮನದ ಸ್ಥಿತತೆಗಾಗಿ ಧ್ಯಾನವನು ಸಾಧಿಸು
ಧ್ಯಾನ ಸಾಧನೆಯಲ್ಲಿ ಶಾಂತಿಯನು ಸಾಧಿಸು
ಶಾಂತಿಯಿಂ ಸುಖಿಸುತ್ತ ಲಯವಾಗು ಶರಣಾ ! ||೧೭||

ಮಾನವನ ಜೀವನದ ಗುರಿಯೊಂದೆ ಸತ್ಯವಿರೆ
ಆ ಧ್ಯೇಯ ಸಾಧನೆಯೆ ಧರ್ಮ ಮೂಲಾರ್ಥವು
ಧರ್ಮಜೀವನ ತಾಳಿ ಧನ್ಯನಾಗು ಶರಣಾ ! ||೧೮||

ಮನವನ್ನು ನಿಗ್ರಹಿಪ ಧ್ಯಾನಸಾಧನ ಪಥದಿ
ನೀ ಬಿಡದೆ ನಡೆಯುತಲಿ ವಿವಿಧಾನುಭವಗಳಲಿ
ಅಂತರ್ ಸೌಂದರ್ಯದಲಿ ಸುಖಿಸಲರಿ ಶರಣಾ ! ||೧೯||

ಪ್ರತಿದಿನವು ಎರಡು ಸಲ ಧ್ಯಾನಸಾಧನೆ ಮಾಡು
ಮೀಸಲಿಹ ಸಮಯದಲಿ ಅನ್ಯಕಾರ್ಯವ ನಿಲಿಸು
ಧ್ಯಾನ ಮೀಸಲು ಕಾಲ ಸತ್ಯನೇಮಗಳಿಲಿ ಶರಣಾ ! ||೨೦||

ಸೂರ್ಯೋದಯಕೆ ಮುನ್ನ ಶಾಂತ ಸಮಯದಲೆದ್ದು
ತನುಕರ್ಮ ತೀರಿಸಿ ಸ್ನಾನದಿಂ ಶುಚಿಯಾಗಿ
ಸ್ಥಿರ ಸುಖದ ಆಸನದಿ ಧ್ಯಾನಿಸು ಶರಣಾ ! ||೨೧||

ಮನವ ಕಟ್ಟುವುದೆಲ್ಲ ಧ್ಯಾನವೇ ಅಗಿಹುದು
ಮನವ ನಿಲಿಸುವುದೆಲ್ಲ ಧ್ಯಾನವೇ ಆಗಿಹುದು
ಮನ ಕಟ್ಟ ನಿಲ್ಲಿಸುವ ಛಲದಲಿರು ಶರಣಾ ! ||೨೨||

ರೂಪವೊಂದಿಲ್ಲದಿರೆ ನೀ ಹಿಡಿಯಲಾರೆ ಮನ
ಈ ಧ್ಯಾನ ಸಾಧನದಿ ರೂಪ ಭೇದಗಳಿಲ್ಲ
ಆವ ರೂಪವೆ ಇರಲಿ ಪಿಡಿದು ಧ್ಯಾನಿಸು ಶರಣಾ ! ॥೨೩॥

ಧ್ಯಾನಿಸುವ ರೂಪವೇ ಸರ್ವಶಕ್ತಿಯ ದೈವ
ಧ್ಯಾನಿಸುವ ರೂಪದಲೆ ಅಚಲ ಭಕ್ತಿಯನಿರಿಸು
ನೀ ಭಕ್ತಿಯಿರಿಸಿರುವ ದೈವವನೆ ಧ್ಯಾನಿಸು ಶರಣಾ ! ॥೨೪॥

ಪ್ರೀತಿಸುವ ವಸ್ತುಗಳ ಸತತ ನೆನೆವುದು ಮನವು
ನೆನೆದಾಗ ಭಾವನದಿ ಮರಳಿ ರೂಪಿಸಿಕೊಂಡು
ಕಣ್ಣೆದುರಲಿಲ್ಲದೆಯು ನೋಡುವುದು ಶರಣಾ ! ॥೨೫॥

ಶಿವಲಿಂಗ ರೂಪವನು ಭಕ್ತಿಯಿಂ ಧ್ಯಾನಿಸುತ
ಭಾವನೆಯ ಬಲದಲ್ಲಿ ಮನದಲ್ಲಿ ರೂಪಿಸುತ
ಚೆಲುವ ಶಿವರೂಪವನು ಧ್ಯಾನಿಸು ಶರಣಾ ! ॥೨೬॥

ದಿನದಲ್ಲೆರಡು ಸಮಯ ಪದ್ಮಾಸನದಿ ಕುಳಿತು
ಕಣ್ಮುಚ್ಚಿ ಕೈಕಟ್ಟಿ ತುಟಿಗಳನು ಕದಲಿಸದೆ
ಶಬ್ದವಿಲ್ಲದೆ ಕುಳಿತು ಲಿಂಗ ಭಾವಿಸು ಶರಣಾ ! ॥೨೭॥

ಧ್ಯಾನಿಸುವ ಕಾಲದಲಿ ನೂರಾರು ಅಲೆ ಬಂದು
ನಿಲ್ಲಿಸಿದ ಮನವನ್ನು ಚದುರಿಸುವುದತಿಸಹಜ
ಚದುರದೊಲು ಜಾಗ್ರತದಿ ನಿಲಿಸಯ್ಯ ಶರಣಾ ! ॥೨೮॥

ಮನದಲ್ಲಿ ಶಿವಲಿಂಗ ನಿಲ್ಲುವೊಲು ಸಾಧಿಸಲು
ಶಿವಲಿಂಗ ಭಾವವನು ನೆನೆಯುತಿರು ನೀ ನಿತ್ಯ
ಧ್ಯಾನಕಾಲವ ಹೆಚ್ಚು ಬಲ ಪಡಿಸು ಶರಣಾ ! ||೨೯||

ಹೃದಯದಲಿ ಧ್ಯಾನಿಸು ಹಣೆಯಲ್ಲಿ ಧ್ಯಾನಿಸು
ಎದುರಲ್ಲಿ ದರ್ಶಿಸು ಅಕ್ಕಪಕ್ಕದಿ ಕಾಣು
ಸಕಲೆಡೆಗು ಭಾವಿಸೈ ಶಿವರೂಪ ಶರಣಾ ! ||೩೦||

ಕಣ್ಮುಚ್ಚಿ ಶಿವರೂಪ ಭಾವದಲಿ ಧ್ಯಾನಿಸುತ
ವಿಧ ವಿಧದ ಹಿರಿ ಕಿರಿಯ ಆಕಾರ ರೂಪಿಸುತ
ಧ್ಯಾನ ಸಮಯವ ನಿತ್ಯ ಹೆಚ್ಚಿಸು ಶರಣಾ ! ||೩೧||

ಸಾಸಿವೆಯ ಗಾತ್ರದಲಿ ನಿಸ್ನ ತನು ಗಾತ್ರದಲಿ
ಆನೆಯಾ ಗಾತ್ರದಲಿ ಮಹಗಿರಿಯ ಗಾತ್ರದಲಿ
ಹಿರಿ ಕಿರಿಯಾಕಾರದಿ ರೂಪಿಸು ಶರಣಾ ! ||೩೨||

ಸ್ವಾರ್ಥಾಭಿಮಾನ ಸಂಶಯ ಸಂಗ್ರಹಗಳಿರದೆ
ಶಕ್ತಿ ಸಂಪದ ಸಿದ್ಧಿ ಪಡೆಯುವಾಸೆಯ ತೊರೆದು
ಧ್ಯಾನಿಸಲು ಅದೆ ಶುದ್ಧ ಧ್ಯಾನವು ಶರಣಾ ! ||೩೩||

ತನಗಾವ ನೋವು ಸಂಕಟ ದುಃಖ ಬರದಂತೆ
ಎಲ್ಲ ಫಲ ತನಗೆಂದು ಜಗದ ಹಿತ ಚಿಂತಿಸದೆ
ಭಾವಿಸುವುದೇ 'ಸ್ವಾರ್ಥ' ನೀ ಬಿಡು ಶರಣಾ ! ||೩೪||

ಧ್ಯಾನದಾ ಶಿವರೂಪ ಸತ್ಯವೊ ? ಮಿಥ್ಯವೊ ?
ಬಲವಿಹುದೊ ? ಇಲ್ಲವೋ ? ಧ್ಯಾನವೇ ಬರಿ ಭ್ರಮೆಯೊ ?
ಎಂಬುದೇ 'ಸಂಶಯ'ವು ನೀ ತ್ಯಜಿಸು ಶರಣಾ ! ॥೧೫॥

ಧ್ಯಾನಿಸಿದ ಬಲದಲ್ಲಿ ಸಿದ್ಧ ಬಲವಿದೆಯೆಂದು
ಆಸೆ ಭಾವವ ತಳೆದು ಧ್ಯಾನದಲಿ ಪ್ರತಿಫಲವ
ಬಯಸುವುದೆ 'ಸಂಗ್ರಹ'ವು ನೀ ತಾಳದಿರು ಶರಣಾ ! ॥೧೬॥

ಹಿರಿಯೋಗಿ ನಾನೆಂದು ನಾನು ಧ್ಯಾನಿಪೆನೆಂದು
ನನ್ನ ಬಲ ಹಿರಿದೆಂದು ನಾನು ನಾನೆನ್ನುವುದೆ
'ಅಭಿಮಾನ'ದೋಷವು ತೊರೆದು ಧ್ಯಾನಿಸು ಶರಣಾ ! ॥೧೭॥

ಈ ನಾಲ್ಕು ದೋಷಗಳ ಹೊಡೆದಟ್ಟಿ ಮನದಿಂದ
ಧ್ಯಾನಿಸುವ ಮನವೊಂದೆ ನಿಜ ಕಾಣಬಲ್ಲುದು
ಭಯ ಭಕ್ತಿ ದೈನ್ಯದಿಂ ಧ್ಯಾನಿಸು ಶರಣಾ ! ॥೧೮॥

ಶುದ್ಧ ಮನದಿಂ ಗೈದ ಅನುದಿನದ ಧ್ಯಾನ ಬಲ
ಮನ ಬೆಳೆಸಿ ಅರಿವಿತ್ತು ಧರ್ಮಬಲ ಬೆಳೆಸುವುದು
ಸತ್ಯ ಶಿವಲಿಂಗವನು ಧ್ಯಾನಿಸಲರಿ ಶರಣಾ ! ॥೧೯॥

ಚಂಚಲದ ಮನವನ್ನು ಬಹುಕಾಲ ನಿಲ್ಲಿಸುಲು
ಅಂತರಂಗದ ಭಾವಪೂಜೆ ಸುಲಭ ಕ್ರಮವು
ಭಾವಲಿಂಗದ ಮನದಿ ಪೂಜಿಸು ಶರಣಾ ! ॥೨೦॥

ಕ್ರಿಯಾಲಿಂಗದ ಪೂಜೆ ಮಾಡುವ ವಿಧಾನದಲೆ
ಮನದಲ್ಲಿ ಮನದಿಂದ ಧ್ಯಾನದಲಿ ಪೂಜಿಸಲು
ಮನವೆಲ್ಲ ನಿಲ್ಲುವುದು ಶಿವನಲ್ಲಿ ಶರಣಾ ! ॥೪೧॥

ಪದ್ಮಾಸನದಿ ಕುಳಿತು ಮೌನದಲಿ ಭಾವಿಸುತ
ಮನದಲ್ಲೆ ಚೆಲುವಾದ ಶಿವಲಿಂಗ ನಿರ್ಮಿಸು
ಮನ ಜಲದಿ ಮೈ ತೊಳೆದು ಭಸ್ಮವನು ಲೇಪಿಸು ಶರಣಾ ॥೪೨॥

ಭಸ್ಮ ಚಂದನ ಪತ್ರೆ ಧೂಪಗಳನರ್ಪಿಸುತ
ನೈವೇದ್ಯ ನೀ ಮಾಡು ದೀಪಾರತಿಯ ಬೆಳಗು
ಭಕ್ತಿ ಪೂರ್ವಕ ಪೂಜೆ ಮಾಡಿ ನಮಿಸು ಶರಣಾ ! ॥೪೩॥

ಮನಲಿಂಗ ಭಾವದಲೆ ತೃಪ್ತಿಯಿಂ ಹರಸುವುದು
ಮನವು ಸ್ಥಿರಗೊಳ್ಳುವುದು ಶಾಂತಿಯಲಿ ನಿಲ್ಲುವುದು
ಇಂತು ಮನದಲೆ ಪೂಜೆ ಸಲಿಸುತಿರು ಶರಣಾ ! ॥೪೪॥

ಲಿಂಗದಲೆ ಚಲಿಸುತ್ತ ಮನದಲೆಯು ನಿಲ್ಲುವುದು
ಮನಸಿನೀ ಪೂಜೆಯಲಿ ಬಲುಶಕ್ತಿಯಡಗಿಹುದು
ಜ್ಞಾನ ಬಲ ಪಡೆಯೆ ನೀ ನಿತ್ಯ ಪಾಲಿಸು ಶರಣಾ ! ॥೪೫॥

ಭಾವನೆಯು ಬಲಗೊಂಡು ಶಕ್ತಿಯನು ಧರಿಸಿರಲು
ಭಾವಲಿಂಗದಿ ಮರಳಿ ಶಿವನನ್ನು ಭಾವಿಸುತ
ಲಿಂಗಕ್ಕೆ ಚೇತನದ ಭಾವವಿಡು ಶರಣಾ ! ॥೪೬॥

ಲಿಂಗದಲಿ ಶಿವಮೂರ್ತಿ ಪಾರ್ವತಿಯು ಭಾವಿಸುತ
ಶಿವಲಿಂಗ ಪೀಠದಲಿ ನಿಜದಿ ನಿಂತೊಲು ನಿಲಿಸು
ಧ್ಯಾನ ಪೂಜೆಯನೆಲ್ಲ ಶಿವನಿಗರ್ಪಿಸು ಶರಣಾ ! ||೪೭||

ಪ್ರತ್ಯಕ್ಷ ಶಿವರೂಪ ಭಾವದಲಿ ನೋಡುತ್ತ
ಪ್ರತ್ಯಕ್ಷ ಶಿವನಿಗೆ ಪೂಜೆಯೆಲ್ಲವ ಸಲಿಸಿ
ಶಿವಗೌರಿ ರೂಪದಾ ಹರಕೆ ಪಡೆ ಶರಣಾ ! ||೪೮||

ಶುದ್ಧ ಮನದಲಿ ನಿತ್ಯ ವಿಧವಿಧದಿ ಧ್ಯಾನಿಸಲು
ಸ್ವಪ್ನ ನಿದ್ರಾ ಕಾಲ ಭಾವದರ್ಶನ ಕೊಡುತ
ಮನಕೆ ವಿಕಾರಿದ ಶಕ್ತಿ ನೀಡುವುದು ಶರಣಾ ! ||೪೯||

ಸ್ಥಳ ಸಮಯ ಆಚಾರ ಕರ್ಮನೇಮಗಳಿರದೆ
ಇಚ್ಛಿಸಿದ ಕಾಲದಲಿ ಶಾಂತದಿಹ ಕಾಣದಲಿ
ಮನ ಧ್ಯಾನ ಪೂಜೆಯನು ಮಾಡೆ ಸುಲಭವು ಶರಣಾ ! ||೫೦||

ಜೀವನದ ಕರ್ಮಗಳನೆಂತೊ ಆಚರಿಸುತಿರೆ
ಮನವೆಲ್ಲ ಶಿವಲಿಂಗ ಧ್ಯಾನದಲಿ ಮುಳುಗಿರಲು
ಕರ್ಮದೋಷಗಳಿರದ ಹಿರಿಯೋಗ ಶರಣಾ ! ||೫೧||

ಭಾವ ಪೂಜೆಯು ಧ್ಯಾನ ಸಿದ್ಧಿಸಿದ ಧ್ಯಾನಿಗೆ
ಸಕಲವನರಿತರುಹುವ ಬಲ ಪ್ರಾಪ್ತಿಯಾಗುವುದು
ತಾಪ ದುಃಖಾದಿಗಳ ಹರಿಸುವುದು ಶರಣಾ ! ||೫೨||

ಸುಗಂಧ ದ್ರವ್ಯದಲಿ ಮೈ ತೊಳೆದ ದೇಹದಲಿ
ಹತ್ತಾರು ಗಂಟೆಗಳು ಸುವಾಸನೆಯಿರುವಂತೆ
ಸರಿಧ್ಯಾನ ಗೈದಿರಲು ಲಿಂಗ ಸ್ಮರಣೆಯು ಭಾವ ಶರಣಾ ! ||೫೩||

ಧ್ಯಾನಸಾಧಕಗಂದು ಸಂಕಲ್ಪ ಶಕ್ತಿಯಿಂ
ರೋಗಗಳು ನಶಿಸುವುವು ಭೂತಗ್ರಹ ತೊಲಗುವುವು
ಸಂಕಲ್ಪ ಮನದಲ್ಲಿ ಬಹುಲೀಲೆ ಶರಣಾ ! ||೫೪||

ಡಂಭದಾಚಾರದಲಿ ಶಿವಪೂಜೆ ಮಾಡದಿರು
ಶಿವಧ್ಯಾನ ಶಿವಗೀತ ಪಠಿಸಿದರು ಫಲವಿರದು
ಪವಿತ್ರವು ಶಿವಲಿಂಗ ದ್ರೋಹ ಬೇಡವು ಶರಣಾ ! ||೫೫||

ಮಾನವ ಜನ್ಮದ ಮಹಾ ಧ್ಯೇಯ ಸಾಧನೆಗಾಗಿ
ಶಿವ ಪೂಜೆ ಶಿವ ಧ್ಯಾನ ಶಿವಭಕ್ತಿ ನೇಮಗಳು
ಅಂಥ ನಿಜ ಶಿವಭಕ್ತನಾಗಯ್ಯ ಶರಣಾ ! ||೫೬||



೨

ಧ್ಯಾನ ಸ್ಥಿರತೆ

ಮನವೊಂದು ಸ್ಥಿರವಾಗಿ ನಿನ್ನ ವಶವಾದಂದು
ಇಬ್ಭಾಗ ಮಾಡುತಲಿ ಬಲವೆರಡು ಸಾಧಿಸು
ಶಿವಸ್ಮರಣೆಗೆರೆಭಾಗ ಲೋಕಕಾಗೆರೆ ಭಾಗ ಶರಣಾ ! ॥೧॥

ಒಂದು ಕರ್ಮದಲಿರುತ ಬೇರೆಡೆಗೆ ಹರಿಯುವುದು
ಸಹಜ ಗುಣ ಮನಕಿರಲು ಜಗದಿ ವ್ಯವಹರಿಸುತಿತೆ
ಅನುಗಾಲ ಶಿವಧ್ಯಾನ ನಡೆಯುವುದು ಶರಣಾ ! ॥೨॥

ಸತತ ಶಿವ ಧ್ಯಾನದೊಳು ಅರ್ಧಮನ ನಿಲ್ಲಿಸುತ
ಲೋಕದೊಳು ಕಾರ್ಯವನು ಮಾಡುತಿರಲರೆ ಮನವು
ಶಿವಧ್ಯಾನ ಬಿಡದಂಥ ಹಿರಿಯೋಗ ಶರಣಾ ! ॥೩॥

ಸತತವೂ ಶಿವಧ್ಯಾನ ಮನದಲ್ಲಿ ತುಂಬಿರುತ
ಶಿವನಲ್ಲೆ ಮನವೆಲ್ಲ ನೆಲೆಸಿ ಜೀವಿಸುವಂದೆ
ಹಿರಿ ಸಹಜ ಸಮಾಧಿಯು ಸಾಧಿಸು ಶರಣಾ ! ॥೪॥

ನಿರ್ದೋಷವಾಗಿರುವ ಕರ್ಮಯೋಗವಿದಾಗೆ
ಶಿವನಲ್ಲಿ ನೆಲೆಯಾಗಿ ಶಿವನ ಕಾಣುವನವನು
ಅವನೋರ್ವ ನಿಜಭಕ್ತ ನಿಜಜ್ಞಾನಿ ಶರಣಾ ! ॥೫॥

ನಡೆವಾಗ ಶಿವ ನಿನ್ನ ಹಿಂದೆ ಬರುತಿಹನೆಂದು
ಭೋಜನದ ವೇಳೆ ನಿನ ಪಕ್ಕ ಕುಳಿತಿಹನೆಂದು
ಭಾವದಲಿ ಕಾಣುತಿರು ಧ್ಯಾನ ಕ್ರಮವಿದು ಶರಣಾ ! ॥೬॥

ನಿದ್ರಾ ಸಮಯದಲಿ ಶಿವ ನಿನ್ನ ಜೊತೆಗಿಹನೆಂದು
ಸಕಲ ಕರ್ಮದಲಿಂತು ಶಿವನು ಜೊತೆಗಿಹನೆಂದು
ಭಾವಿಸುತ ಲಿಂಗವನು ಧ್ಯಾನಿಸು ಶರಣಾ ! ॥೭॥

ಹಗಲಿರುಳು ನೀನಿಂತು ಶಿವಭಾವದಲಿ ನಡೆಯೆ
ದೇಹ ಮನಗಳು ಶಿವನ ಭಾವದಿ ತನ್ಮಯವಾಗಿ
ದೇಹಮನ ದ್ವಿಬಲವ ಪಡೆಯುವುವು ಶರಣಾ ! ॥೮॥

ಸರಿಧ್ಯಾನ ಸಹಜದಲಿ ನಿರುತ ಮಾಡುತ ಸಾಗೆ
ಹಸ್ತಮನ ವಾಕ್ ಪಾದಗಳಿಗೆ ಸಿದ್ಧಿಯನಿತ್ತು
ಸಕಲ ತೆರ ಸಲಹುವುದು ಧ್ಯಾನ ಬಲ ಶರಣಾ ! ॥೯॥

ಬಾಹ್ಯತನು ಗುಪ್ತತನುವೆರಡನೂ ಶುದ್ಧಿಸುತ
ಬಾಹ್ಯಾಂತರದಿ ಶಕ್ತಿ ತುಂಬುತಲಿ ಶಿವಧ್ಯಾನ
ನುಡಿದಾಡಿದೆಲ್ಲವನು ದಿಟಗೊಳಿಸುವುದು ಶರಣಾ ! ॥೧೦॥

ನುಡಿದ ವಚನವು ದಿಟ ನಡೆದ ಹಾದಿಯು ದಿಟ
ಮಾಡಿದುದೆಲ್ಲವು ದಿಟ ಪುಸಿಯಿರದೆ ಫಲಿಸುವೀ
ಶಾಂತ ಬಲ ಮನದಲ್ಲಿ ಆನಂದ ತರುವುದು ಶರಣಾ ! ॥೧೧॥

ಈ ಬಲದ ಸಾಧನದಿ ಚಿಂತೆ ವ್ಯಾಮೋಹಗಳು
ಭಯ ಕಾಮ ಭೂತಗಳು ಸುಳಿವಿರದಲೋಡುವುವು
ಇಂಥ ನಿರ್ಭಯ ಸತ್ಯಶಕ್ತಿಯನು ಪಡೆ ಶರಣಾ ! ॥೧೨॥

ಹಿರಿಜ್ಞಾನ ಭಂಡಾರ ತುಂಬಿಹುದು ಈ ಬಲದಿ
ಜಯಶಕ್ತಿ ಹುದುಗಿಹುದು ಈ ಧ್ಯೇಯಮಾರ್ಗದಲಿ
ಹಿರಿ ಶರಣಗಿಹುದಿಂಥ ಸರಿ ಜ್ಞಾನ ಶರಣಾ ! ॥೧೩॥

ಆವ ತೆರದಲು ಕಾಣೆ ಪುಸಿಯೆಂಬುದಿಲ್ಲಿಲ್ಲ
ಆವ ತೆರದಲಿ ಬಾಳೆ ದೋಷವೊಂದಿಲ್ಲಿಲ್ಲ
ನಿರ್ದೋಷಮಯ ಬಾಳು ಬೆಳಗುವುದು ಶರಣಾ ! ॥೧೪॥

ಹಿರಿಯಿಂದ ಕಿರಿವರೆಗೆ ಸಕಲ ನೇಮಗಳಲ್ಲಿ
ದೋಷ ಕಾಣಲು ಬರದ ಸತ್ಯವಿಹುದನ್ನರಿತು
ನೇಮಗಳ ಪಾಲಿಸಲು ನಿರ್ದೋಷವಹುದು ಶರಣಾ ! ॥೧೫॥

ಕರುಣೆ ದಯೆ ಬಲ ತುಂಬಿ ಸುಗುಣ ಕಾರ್ಯವ ನಡೆಸಿ
ಜ್ಞಾನ ಭಂಡಾರದಿಂ ಹೃದಯ ನಿರ್ಮಲಗೊಳಿಸೆ
ಪೂರ್ಣಜ್ಯೋತಿಗೆಂದು ಕಾರ್ಗತ್ತಲಿರದು ಶರಣಾ ! ॥೧೬॥

ಕತ್ತಲಿರೆ ಬೆಳಕಿಲ್ಲ ಬೆಳಕಿರೆ ಕತ್ತಲಲ್ಲ
ಕತ್ತಲೆಯಿರದ ಬಾಳು ಸರಿಪೂರ್ಣ ಬೆಳಕಹುದು
ಸರಿಪೂರ್ಣ ಪರಿಪೂರ್ಣ ಜ್ಯೋತಿಯಾಗು, ಶರಣಾ ! ||೧೭||

ಎತ್ತ ನೋಡಿದರೇನು ? ಆರು ಹುಡುಕಿದರೇನು ?
ಸಕಲರೂ ಸರಿಯೆನುವ ಅಚ್ಚುಮೆಚ್ಚಿನ ಜೀವಿ
ತಾನಾಗಿ ಬೆಳಗುವನು ಅರಿಯಯ್ಯ ಶರಣಾ ! ||೧೮||

ಇಹಪರಗಳೆರಡರಲಿ ಸುಖಪಡುವುದೀ ಬಾಳು
ಶಿವದೈವ ಲೋಕದಲಿ ಮೆಚ್ಚುವಂಥಹ ಬಾಳು
ಎಲ್ಲ ಕಾಲಕು ಇವರು ಸಲ್ಲುವರು ಶರಣಾ ! ||೧೯||

ಮನವೆಲ್ಲ ಶಿವನಲ್ಲಿ ಲೀನ ತಾನಾಗಿರಲು
ರೋಮ ರಕ್ತಾಸ್ಥಿ ಮಾಂಸಗಳೆಲ್ಲ ಶಿವಮಯವು
ಮನಚಿತ್ತಪ್ರಾಣಗಳು ಶಿವಮಯವು ಶರಣಾ ! ||೨೦||

ತನುವಿನಲಿ ತುಂಬಿರುವ ಸಕಲ ತತ್ವಾಂಶದಲಿ
ಶಿವಮಯದ ಬಲವಿರದ ಅಣುವೊಂದು ಸಿಗದಂತೆ
ಬಾಹ್ಯಾಂತರವೆಲ್ಲ ಶಿವಮಯವು ಶರಣಾ ! ||೨೧||

ಇಂತಿರ್ಪ ಘನವಾದ ಹಿರಿಧ್ಯಾನ ಭಕ್ತರು
ಇದ್ದರೂ ಪೂಜ್ಯರವರೆಂದಿಗೂ ಪೂಜ್ಯರು
ಜೀವನದ ಮಹ ಶಕ್ತಿ ತಂದು ಬೆಳಗುವರು ಶರಣಾ ! ||೨೨||

ಈ ಬಗೆಯು ಮಹತ್ತವು ಶಾಶ್ವತ ಪದವಿಯೋ
ದ್ವೈತಾದ್ವೈತಗಳು ಸಾರುತಿಹ ಮೋಕ್ಷಪದ
ಇಂಥ ಮಾನವ ಜನ್ಮ ಸಾರ್ಥಕ್ಯ ಪಡೆ ಶರಣಾ ! ||೨೩||

ಸಕಲ ಸಾಧಕರಿಲ್ಲಿ ಬಂದು ಸೇರಲೆಬೇಕು
ಈ ಕೇಂದ್ರ ತಲುಪಿರಲು ಮುಂದೆ ಮಾರ್ಗವದಿಲ್ಲ
ಇಂತಿರ್ಪ ಕೇಂದ್ರಕ್ಕೆ ನೀ ಸೇರು ಶರಣಾ ! ||೨೪||

ಮಾನವನ ಜೀವನದ ಸುಖ ಶಾಂತಿ ನೆಮ್ಮದಿಗೆ
ಮೂಲ ಕಾರಣ ಮನವು ಮನಸಿನಾ ನಿಗ್ರಹವು
ಇಂಥ ಮನವನು ಹಿಡಿದು ನೀ ಸುಖಿಸು ಶರಣಾ ! ||೨೫||

ಮನವೆಂಬ ಶಕ್ತಿಯನು ಅಲ್ಲಗಳೆಯಲು ಬೇಡ
ಮನಬಲದ ಹಿರಿಮೆಯನು ಕಾಣದೋಡಲು ಬೇಡ
ಅನುಕ್ಷಣದಿ ಸ್ಥಿರಮನವ ಪಡೆಯಲರಿ ಶರಣಾ ! ||೨೬||

ಸ್ಥಿರಮನವ ಸಾಧಿಸದ ಬಾಳೆಂದು ಸುಖಿಸದು
ಭೀತಿ ಮೋಹಗಳಿರದ ಸುಖವೆ ನಿನ ವಶವಾಗೆ
ಮನ ನಿನ್ನ ವಶಗೊಳಿಸಲರಿಯಯ್ಯ ಶರಣಾ ! ||೨೭||

ಮನವನ್ನು ಸ್ಥಿರಗೊಳಿಸೆ ಹತ್ತಾರು ಪಥಗಳಿರೆ
ಸರ್ವಕೂ ಸುಲಭವಿಹ ಸಹಜಮನ ಸ್ಥಿರತೆಯನು
ಬಿಡದೆ ನೀ ಸಾಧಿಸುತ ಸುಖಿಸಯ್ಯ ಶರಣಾ ! ||೨೮||

ಸತ್ಯ ಮಿಥ್ಯಗಳನ್ನು ಸಹಜವರಿಯಲು ಮನವು
ತತ್ವಜ್ಞಾನಿಗಳೆಲ್ಲ ಸಾಧಿಪುದೆ ಸ್ಥಿರಮನವು
ಸ್ಥಿರಮನದಿ ಸರ್ವವಿಧ ಶಕ್ತಿಯಿದೆ ಶರಣಾ ! ॥೨೯॥

ಸ್ಥಿರವಾದ ಮನವೊಂದೆ ದೂರದರ್ಶಕ ಯಂತ್ರ
ಪಾರದರ್ಶಕಯಂತ್ರ ಸೂಕ್ಷ್ಮದರ್ಶಕಯಂತ್ರ
ಸೌಖ್ಯದ ಮಹಾಯಂತ್ರ ನೀ ದರ್ಶಿಸು ಶರಣಾ ! ॥೩೦॥

ಸ್ಥಿರಮನಸಿನಾಳದಿಹ ಸುಖ ಶಾಂತಿ ನೀ ಪಡೆಯೆ
ಸಕಲ ಇಹಪರತಾಪ ತಾನಾಗಿ ನಶಿಸುವುವು
ಸಚ್ಚಿದಾನಂದ ಶಿವ ನೀನಾಗುವೆ ಶರಣಾ ! ॥೩೧॥

ಜಗದಲ್ಲಿ ತುಂಬಿದೀ ಸಕಲ ಸಂಪದಕಧಿಕ
ಮನದ ಸ್ಥಿರ ಸಂಪದವು ಅಪರೂಪ ಸಂಪದವು
ಅಂಥ ಹಿರಿ ಸಂಪದವ ಪಡೆಯಯ್ಯ ಶರಣಾ ! ॥೩೨॥

ರತ್ನಮನ ಧರಿಸಿದವರೀ ಭವದಿ ಮಹಾತ್ಮರು
ಸಕಲ ರಾಜ್ಯಕ್ಕಧಿಕ ಮನರಾಜ್ಯ ನೀನಾಳು
ಸಕಲ ಸಂಪದಕಧಿಕ ಮನಬಲವು ಶರಣಾ ! ॥೩೩॥

ಮನದ ಹಿರಿ ಭಾವದಲಿ ಭಕ್ತಿ ಮಾಡಲು ಸುಲಭ
ಸ್ಥಿರಮನದ ಸಂಪದದಿ ದೈವದರ್ಶನ ಸುಲಭ
ಇಂಥ ಮನ ಬಲದ ಸಿರಿ ಗಳಿಸಯ್ಯ ಶರಣಾ ! ॥೩೪॥

ಶುದ್ಧಮನ ಶಕ್ತಿಮನ ಕಾವ್ಯಮನ ಕಲಾಮನ
ದಯಾಮನ ಧರ್ಮಮನ ಶಾಂತಿಮನ ಪ್ರೇಮಮನ
ಸ್ಥಿರಮನದ ಅಡಿಯಲ್ಲಿ ಅಡಗಿಹವು ಶರಣಾ ! ||೩೫||

ನಿನ್ನಮನ ನೀನರಿತು ನಿನ್ನಮನ ನೀ ಪಿಡಿದು
ಸರ್ವಶಕ್ತಿಯು ಸುಧೆಯು ನೀನಿಂತು ಸೇವಿಸುತ
ದೈವೀ ಭಾವ ರಸ ಪಾನದಿ ಸುಖಿಸು ಶರಣಾ ! ||೩೬||

ಮನೋಬಲವಿರದವರು ಹುಚ್ಚರಾದರು ಹಲರು
ಮನಶಕ್ತಿಯಿರದವರು ತುಚ್ಛರಾದರು ಹಲರು
ಮನವಿರದೆ ದುಃಖದಲಿ ಬಾಳದಿರು ಶರಣಾ ! ||೩೭||

ಮನವಿದ್ದು ಅರಿಯದಲಿ ಅಲ್ಪಸುಖ ಸ್ಥಿರವೆಂದು
ಅಲ್ಪಸುಖದೊಳು ನಿಂದು ದುಃಖವನೆ ಪಡೆಯುತಲಿ
ಬಾಳಿನಲಿ ಬಲವಿರದೆ ಅಳುತಿಹರು ಶರಣಾ ! ||೩೮||

ಕಾಣಲಾಗದ ಮನವು ಪಿಡಿಯಲಾಗದ ಮನವು
ಕಟ್ಟಲಾಗದ ಮನವು ಸಕಲಸುಖ ಮೂಲವಿರೆ
ಮನಶಕ್ತಿಗಳಿಸದಲೆ ಧನಗಳಿಸಲೇಕೆ ಶರಣಾ ! ||೩೯||

ಸುಖದುಃಖವನುಭವಿಪ ಶಕ್ತಿಯೇ ಮನಕರಣ
ಸಕಲಸುಖ ತಂದಿಡುವ ಯುಕ್ತಿಯೇ ಮನೋಬಲ
ಆನಂದದನುಭವದ ಕೀಲಿಕ್ಕೆ ಮನ ಶರಣಾ ! ||೪೦||

ಮನದ ಹಿರಿಕೀಲಿಯಿಂ ಬಾಳಿನಲಿ ನೀ ಜಯಿಸು
ಕ್ರಿಮಿಕೀಟ ಪಶುಪಕ್ಷಿಯಂತೆ ನೀ ಬಾಳಿದರೆ
ಅದುವೆಂಥ ಸಾಧನೆಯು ಇಂಥ ಹಿರಿಮಾನವಗೆ ? ಶರಣಾ ! ॥೪೧॥

ಈ ಮಾನವಶರೀರ ಹಿರಿಶಕ್ತಿಕೇಂದ್ರವು
ತಾನು ಗಳಿಸಿದ ಶಕ್ತಿ ಸಕಲರಿಗು ಸುಖದಾನ
ಅಂಥ ಗುರಿಯಿರದವರು ಪಶುಸಮರು ಶರಣಾ ! ॥೪೨॥

ನಿನ್ನ ಮನವೆಲ್ಲೆಂತು ಓಡುತಿದೆ ನೀ ಕಂಡು
ಮನದ ಚಪಲದ ಚಲನ ಗುರಿಯೆಲ್ಲ ಶೋಧಿಸುತ
ಮನವೆಂತು ಕಾಡುತಿದೆ ಎಂಬುದರಿ ಶರಣಾ ! ॥೪೩॥

ಮನದ ಚಂಚಲ ನಿಲುವ ಸರಿಗುರಿಗೆ ನಿಲ್ಲಿಸುತ
ಮನದ ಸ್ಥಿರತೆಯು ಪಡೆದು ಸ್ಥಿತಪ್ರಜ್ಞ ನೀನಾಗು
ಮನದ ಹಿರಿದೈವಬಲವಾರ್ಜಿಸು ಶರಣಾ ! ॥೪೪॥



೩

ಲಿಂಗೈಕ್ಯ ಜೀವಿ

ಧರ್ಮಜೀವನವೆಂದು ಸಿದ್ಧಿ ಸಾಧನವೆಂದು
ಧರ್ಮಪಾಠಗಳರಿತು ಧರ್ಮಿಗಳೆನಿಸಿದವರು
ಧರ್ಮಬಲವಾಶಿಸಿ ಫಲವಿಲ್ಲದಾದರು ಶರಣಾ ! ॥೧॥

ಧರ್ಮಸಾಧನದರಿವು ನಾಮನೇಮಕ್ಕಲ್ಲ
ನಾಮನೇಮಕ್ಕಾಗಿ ಧರ್ಮದಲಿ ಹೋದವರು
ಫಲವಿರದೆ ಜ್ಞಾನವಿರದಳಿದರು ಶರಣಾ ! ॥೨॥

ತಾನು ತನ್ನದು ತನಗೆ ಎಂಬ ಭಾವನೆ ಬಿಡದೆ
ಧರ್ಮಶೀಲ ಲಿಂಗದ ಸಾಧನವ ಮಾಡುವರು
ಶಿವನಿರದೆ ನಿಜವಿರದೆ ಕೊರಗಿದರು ಶರಣಾ ! ॥೩॥

ತಾನಾರು ತಾನೇನು ತಾನೆಂತು ಎಂಬುದನು
ಅರಿತು ದಿನ ಸಾಧಿಸುತ ತನ್ನ ಬಲವನು ತಿಳಿಯೆ
ಲಿಂಗಾಂಗ ಸಾಮರಸ್ಯ ಧರ್ಮವದು ಶರಣಾ ! ॥೪॥

ಕಾಯಮನ ಪಂಚಜ್ಞಾನೇಂದ್ರಿಯಗಳೆಲ್ಲದರ
ಮೂಲಕೀಲವನರಿತು ಮೂಲ ಬಲ ದರ್ಶಿಸಲು
ಧರ್ಮಶಿವಲಿಂಗದ ಸಾಧನವು ಶರಣಾ ! ||೫||

ನಾಟಕದ ಪಾತ್ರದಲಿ ಶಿವಭಕ್ತ ತಾನಾಗಿ
ಭೋದ ಭೋಜನದಾಸ್ತಿ ಸಂಪದಕೆ ತುಡಿಯುತಿರೆ
ನರಕಯಾತನೆಗೆ ಶಿವ ತಳ್ಳುವನು ಶರಣಾ ! ||೬||

ಗುಪ್ತವಿರುವಾ ಬಲವ ಗುಪ್ತದಲಿ ಸಾಧಿಸುತ
ಗುಪ್ತಬಲವನು ಧರಿಸಿ ಸದ್ಗುರುವು ತಾನಾಗಿ
ಗುಪ್ತಶಕ್ತಿಯನೆಲ್ಲ ಜಗಕಿತ್ತು ಬಾಳುವನು ಶರಣಾ ! ||೭||

ಸಾಮಾನ್ಯ ಜೀವಿಗಳು ಜನಿಜನಿಸಿ ಮಡಿಯುವರು
ಹಿರಿ ಶಕ್ತಿ ಜೀವಿಗಳು ಜನಿಸದಲಿ ಅಮರರು
ಅವರ ಜೀವನ ಭವದಿ ತೇಜಮಯ ಶರಣಾ ! ||೮||

ತೇಜಕ್ಕೆ ತೇಜವದು ಬಲಕೆಲ್ಲ ಬಲವದು
ಸತ್ಯದ ಸತ್ಯವಾದ ಪರಸುಖದ ಬಾಳಿನಲಿ
ಆವಶಕ್ತಿಯು ಅವಗೆ ಹಿರಿದಲ್ಲ ಶರಣಾ ! ||೯||

ವಾಯು ತಾ ಚದುರಿಸದು ಅಗ್ನಿ ಸುಡಲಾರದು
ಜಲವದುವು ನೆನೆಯಿಸದು ಆಕಾಶ ಅಡಗಿಸದು
ಪೃಥ್ವಿಬಲವಲ್ಲಿರದು ಅಂಥ ಬಲ ಶರಣಾ ! ||೧೦||

ಹಿರಿಪುಣ್ಯಜೀವಿಗಳು ಲಿಂಗೈಕ್ಯರಾಗಿಹರು
ಸಚ್ಚಿದಾನಂದದಲಿ ಅಮರರಾಗುಳಿದಿಹರು
ಇಂದಿಗೂ ಅಳಿಯದಲಿ ಉಳಿದಿಹುದವರ ವಚನ ಶರಣಾ ! ॥೧೧॥

ಧರ್ಮದುಗಮಾಂತ್ಯಕ್ಕೆ ಮೂಲ ತಾವಾಗಿರಲು
ಸಕಲವನು ಆದರದಿ ಮಮತೆಯಿಂ ಕಾಯ್ದಿಹರು
ಅಂಥ ಮಾತೃತ್ವದೆಡೆ ಅವರದು ಶರಣಾ ! ॥೧೨॥

ಲಿಂಗೈಕ್ಯ ಭಾವದಲಿ ಲಿಂಗಮಯ ತನುವಾಗೆ
ತನುವಿದ್ದ ಶಿವನಂತೆ ಜಗತುಂಬಿ ಚಲಿಸುತಲಿ
ಬಾಳಮರ್ಮವರುಹುವ ಲೀಲೆ ಸತ್ಯ ಶರಣಾ ! ॥೧೩॥

ಲಿಂಗಬಲ ತೊರೆಯರು ಯಾರ ಹಂಗಿಗುಸಿಗರು
ಲಿಂಗಬಲವಿರದ ಕಡೆ ಮಹನೀಯರು ನೆಲೆಸರು
ಅವರಿಗೆಂದಾವ ಬಲ ಬೇಕಿಲ್ಲ ಶರಣಾ ! ॥೧೪॥

ಹಸಿವಿಗನ್ನವನಿಡುತ ಮನದ ಹಸಿವು ಹಿಂಗಿಸಿ
ಬಾಳ ಬೇರಾಗಿಹರು ಬಾಳುಗಳ ಚಿಗುರಿಪರು
ಕತ್ತಲೆಯನೋಡಿಸುತ ಹರಸುವರು ಶರಣಾ ! ॥೧೫॥

ಲೋಕ ವಿಷಯದ ಸುಖವು ಎಂದು ರುಚಿಸದವರಿಗೆ
ಸುಖಕಧಿಕವಿಹ ಸುಖದಿ ಮಿಂದ ಮುಕ್ತರು ಅವರು
ಲೋಕ ರುಚಿ ತೋರಿ ಮೆಚ್ಚಿಸಲಾರೆ ಶರಣಾ ! ॥೧೬॥

ಲಿಂಗತತ್ವಗಳಿಂದ ಲಿಂಗಾನುಭವ ಪಡೆದ
ಅವರಾವ ತತ್ವದಲು ಸೇರಲಿಚ್ಛಿಸರು
ವಿಶ್ವತತ್ವವಸರಿತ ವಿಶ್ವ ಪ್ರೇಮಿಗಳವರು ಶರಣಾ ! ||೧೭||

ಸಕಲದರ ಮೂಲವಿಹ ಸಕಲದರ ಶಕ್ತಿಯಿಹ
ಜ್ಞಾನಬಲ ಹೊಂದಿರುತ ಸಕಲಜಗ ಪಿತನಂತೆ
ಪಿತನಿಗೂ ಪಿತನಯ್ಯ ಲಿಂಗೈಕ್ಯಜೀವಿ ಶರಣಾ ! ||೧೮||

ಆರು ಕಟ್ಟಲು ಸಲ್ಲ ಆರು ಬಿಡಿಸಲು ಸಲ್ಲ
ಕಟ್ಟು ಬಿಡಿಸುವವರಿಗೆ ಅವರೆ ಕಟ್ಟಾಗಿಹರು
ಅಂತಿರ್ಪ ಬಲವುಂಟು ಲಿಂಗಲಯದಿ ಶರಣಾ ! ||೧೯||

ಸಕಲ ಭಾವದೊಳವರು ಸಕಲಗುಣದೊಳಗವರು
ಸಕಲ ರೂಪವೆ ಅವರು ಸಕಲಾಂಶದೊಳಗವರು
ಸಕಲವನ್ನೊಂದಾಗಿ ಕಾಣುವರು ಶರಣಾ ! ||೨೦||

ಶಕ್ತಿಮಯವವರ ತನು ಪ್ರೇಮಮಯವವರ ಗುಣ
ಅವರ ಜೀವನವೆಲ್ಲ ಅನುಭವದಿ ಸುಖಮಯವು
ಅವ ಬಲ ಕೊರವಿಹುದು ಪೇಳಯ್ಯ ಶರಣಾ ! ||೨೧||

ಬ್ರಹ್ಮಮಯ ದೇಹದಲಿ ಬಹ್ಮತೇಜದ ಮುಖವು
ಬಹ್ಮಾಂಡ ಶಕ್ತಿಯಲಿ ಬ್ರಹ್ಮವೇ ಅವರಾಗಿ
ಚರಲಿಂಗಯೋಗದಿಹ ಮನುಜರವರು ಶರಣಾ ! ||೨೨||

ಲಿಂಗೈಕ್ಯದಾನಂದ ಅನುಭವಿಸರವರೆಲ್ಲ
ಬೇರೆ ಸುಖ ಸೋಂಕಿರದೆ ಸಕಲವನು ಕರುಣಿಸರು
ಸರ್ವತ್ರ ನಿಜಸುಖವ ಸಾರುವರು ಶರಣಾ ! ||೧೩||

—೦—

೪

ಅನುಭವ ಮಂತ್ರ

ತಾನೆಂಬ ಅನುಭವವು ಬೇರೆ ತಾನಿರುತಿರಲು
ನವದ್ವಾರಪುರವೆಂದು ಈ ತನುವ ತಿಳಿದುಕೋ
ತಾನೆನಿಪ ಬಾಹ್ಯತನು ಶುದ್ಧಗೊಳಿಸು ಶರಣಾ ! ||೧||

ತನು ಸುಖಕಿಹ ದ್ವಾರದಿ ವೈರತ್ವವೇನಿಹುದು ?
ಬಾಹ್ಯ ತನು ಶುದ್ಧಿಸಲು ನವದ್ವಾರಗಳಿರುತಲಿ
ಮಲ ತೊಳೆದು ತನುಸ್ವಾಸ್ಥ್ಯ ಕಾಯುತಿರು ಶರಣಾ ! ||೨||

ತನುವಂತೆ ಮನವಿಹುದು ಮನಕೊಂದು ತನುವಿಹುದು
ಮನದ ನವ ದ್ವಾರಗಳ ಮಲವ ತೊಳೆಯಲು ಕಲಿತು
ಮನದಲ್ಲಿ ಶಾಂತಿಯನು ಹರಿಸುತಿರು ಶರಣಾ ! ||೩||

ಕಾಮ ಕ್ರೋಧ ಮತ್ಸರ ಲೋಭ ಮದ ಮೋಹಗಳು
ಚಿಂತೆ ಅಭಿಮಾನ ಸಂಶಯಗಳಿವು ಮನದಲ್ಲಿ
ಮಲದ್ವಾರ ವೈಚಿತ್ರ್ಯ ಗುರುತಿಸು ಶರಣಾ ! ||೪||

ಈ ಸಹಜ ಕಶ್ಮಲವ ಸರ್ವರರಿಯದಲಿಹರು
ಜ್ಞಾನದಲಿ ಮನವ ತೊಳೆ ಅನುಭವದಿ ಮಲವ ತೊಳೆ
ಶುದ್ಧ ಮನಸಿನ ಶಕ್ತಿ ಪಡೆಯಯ್ಯ ಶರಣಾ ! ||೫||

ಮನ ಕಲುಷ ದ್ವಾರಗಳು ಮನದಲ್ಲೆ ಕಾಣುತಿರೆ
ಒಗ್ಗದಲಿ ಹಠದಿಂದ ತೊಳೆಯೆ ಯೋಗ ಸಾಧಿಸು
ಜ್ಞಾನದಿಂದನುಭವದಿ ತೊಳೆಯಲರಿ ಶರಣಾ ! ||೬||

ಮನ ತೊಳೆವ ಸಾಧನದಿ ದ್ವಾರದಲೆ ನಿಲ್ಲದಿರು
ತೊಳೆವುದೊಂದೇ ಧ್ಯೇಯ ಬಳಿಕ ನೀನಂಟದಿರು
ಮನಶುದ್ಧಿ ಪಡೆಯುತಲಿ ಶಾಂತನಿರು ಶರಣಾ ! ||೭||

ಶುದ್ಧೀಕರಣಕಾವ ಮದ್ದು ವೈದ್ಯಗಳಿಲ್ಲ
ಶಕ್ತಿ ಹರಕೆಗಳಿಲ್ಲ ಕೇವಲೆರಡೇ ಮಾರ್ಗ
ಅನುಭವ ಜ್ಞಾನಗಳು ಸತ್ಯವರಿ ಶರಣಾ ! ||೮||

ಮನದ ಮಲ ತೊಳೆವಲ್ಲಿ ಮನದ ಶುದ್ಧತೆಯಿರಲಿ
ಮನದ ಮಲ ತೊಳೆದಲ್ಲಿ ಅಂಟಿಕೊಳ್ಳದಲಿರಲಿ
ಅಂತಿರ್ಪ ನಿರ್ಲಿಪ್ತ ಹಿರಿಜ್ಞಾನ ಪಡೆ ಶರಣಾ ! ||೯||

ಜಗದ ನೂರ್ ಸಾಧನವು ಮನದ ಮರೆಯಲ್ಲಿಹವು
ಶಾಂತಿ ಸಾಧನವೊಂದೆ ಉತ್ತಮ ವಿಧಾನವರಿ
ಅಲ್ಪ ಸಮಯಕೆ ಶಾಂತಿಕೊಡಬಲ್ಲುದೊಳಿತಲ್ಲ ಶರಣಾ ! ||೧೦||

ಕಾಲಿನಲಿ ಮುಳ್ಳೊಂದು ಅರಿಯದಲಿ ನಾಟಿದರೆ
ಮುಳ್ಳು ಕಿತ್ತೊಗೆಯದೇ ಕಾಲು ಕಿತ್ತೊಗೆದಂತೆ
ಅಜ್ಞಾನದಿಂ ಕಾಯ ತ್ಯಜಿಸದಿರು ಶರಣಾ ! ॥೧೧॥

ದೈವಲೀಲೆಯ ಜಗದಿ ತನುಮನವ ಶುದ್ಧಿಸುತ
ಶುದ್ಧಾತ್ಮ ನೀನಾಗಿ ಅನುಭಾವದಲಿ ನಿಲ್ಲು
ನಿನ ಜನ್ಮ ಕಾರಣವನರಿಯಯ್ಯ ಶರಣಾ ! ॥೧೨॥

ಮನವು ತಾ ಶಾಂತಿಸಲು ಸರಿಕಾರ್ಯವೆಸಗುವುದು
ಸರಿ ಕಾರ್ಯ ಗುರಿಗಾಗಿ ಮನವ ತೊಳೆಯುತಿರೆಂದು
ಜೀವನದ ಗುರಿ ಕಾರ್ಯ ಸಾಧಿಸು ಶರಣಾ ! ॥೧೩॥

ತನ್ನ ಶಕ್ತಿಗೆ ತಕ್ಕ ಹಿರಿಗುರಿಗೆ ಬದುಕುತಲಿ
ಗುರಿ ತಲುಪುವಾವರೆಗೆ ಬಿಡದೆ ದೋಷವ ತೊಳೆದು
ಸಾಧಿಸುವೆಲ್ಲಾ ಕಾರ್ಯ ಯೋಗವೆನಿಪುದು ಶರಣಾ ! ॥೧೪॥

ಜ್ಞಾನ ಶಕ್ತಿಯ ಜ್ವಾಲೆ ದೋಷಗಳ ದಹಿಸುವುದು
ಹಿರಿಜ್ಞಾನಿಯಾದವಗೆ ಅನುಭವವೆ ಬೇಕಿಲ್ಲ
ಜ್ಞಾನದಿಂದರಿಯುತಲಿ ಶುದ್ಧನಿರು ಶರಣಾ ! ॥ ೧೫॥

ಮನದ ಮೆಹಾ ಸಾಗರದಿ ಸಕಲ ಲೋಕಗಳೆಲ್ಲ
ಹಾಯಾಗಿ ನಿದ್ರಿಸುತ ತೇಲುತಿರೆ ನೀನೆದ್ದು
ಒಳಶಕ್ತಿ ಹಿಡಿಯುತಲಿ ಸುಖಿಸಯ್ಯ ಶರಣಾ ! ॥೧೬॥

ಮನದ ಸಾಗರದೊಳಗೆ ದೊರೆತಿರುವ ಶಕ್ತಿಗಳೆ
ಜಗತುಂಬಿ ಕಾಣುತಿಹ ಸೋಜಿಗದ ಕೊಡುಗೆಗಳು
ಹಲವರು ಹಲವುಶಕ್ತಿ ಪಡೆದು ಸುಖಿಸುತಲಿಹರು ಶರಣಾ! ||೧೭||

ಆಲಸ್ಯವಿನಿತಿರದೆ ಸಾಧನೆಯ ಬಲೆಬೀಸಿ
ಮನದ ಸಾಗರದೊಳಗೆ ಧೈರ್ಯದಿಂದೀಜುತಲಿ
ನಿಜಶಕ್ತಿ ಪಿಡಿಯಯ್ಯ ಬಲಶಾಲಿ ಶರಣಾ ! ||೧೮||

ಅಜ್ಞಾನ ಹರಿಪುದಕೆ ಅನುಭವವೆ ಮಂತ್ರವು
ಅನುಭವವ ತೂಗಲೂ ಜ್ಞಾನವೇ ತಕ್ಕಡಿಯು
ಜ್ಞಾನಬಲದಿಂದೆಲ್ಲ ಶುದ್ಧಿಸು ಶರಣಾ ! ||೧೯||

ಅಜ್ಞಾನಿಗಳಿಗೆಲ್ಲ ಅನುಭವದ ಜ್ಞಾನಬಲ
ನಿಜಜ್ಞಾನಿಗಳಿಗೆಲ್ಲ ಗುಣತತ್ವದರಿವೆ ಬಲ
ಗುಣತತ್ವಜ್ಞಾನವೇ ಮಹಶಕ್ತಿ ಶರಣಾ ! ||೨೦||

ಮನವ ತೊಳೆಯುವ ಯುಕ್ತಿಯರಿತ ಹಿರಿ ಜೀವಿಗಳು
ನಿತ್ಯವೂ ಮನದಲಿಹ ಕಶ್ಮಲವ ತೊಳೆಯುವರು
ಇಂತು ಮನ ಶುದ್ಧಿಸುತ ಜ್ಞಾನದಿರಿಸುವರು ಶರಣಾ ! ||೨೧||

ಕಾಲ ಗುಣಬಲದಂತೆ ಮನದ ವಾಸನೆಯಿರಲು
ಸಕಲ ವಾಸನೆ ತೊಳೆದ ಜ್ಞಾನಿಯಾಗುತ ನಿಲ್ಲು
ಉನ್ನತದ ಸೇವೆಗಿದು ಅತಿಬಲವು ಶರಣಾ ! ||೨೨||

ಮನವ ತೊಳೆದಂಥವಗೆ ಜಯವೆಂದು ನಿಶ್ಚಯವು
ನೂರಾರು ರಾಗಕಲೆ ಗುಣವರಿವ ಬಲವುಂಟು
ಅರಿಯದುದನರಿವಂಥ ಹಿರಿಶಕ್ತಿ ಕೃಪೆಯುಂಟು ಶರಣಾ ! ॥೨೩॥

ಜೀವನದ ಗುರಿಗಳನು ಸತ್ಯ ಬೆಳಗಿಸಬಲ್ಲ
ಈ ಜ್ಞಾನ ಬಲ ಪಡೆದ ಶ್ರೇಷ್ಠರಿಹುದತಿವಿರಳ
ಇಂಥ ಶ್ರೇಷ್ಠರು ಸಿಗಲು ಶರಣಾಗಿ ಸಾಧಿಸು ಶರಣಾ ! ॥೨೪॥

ಮನ ತೊಳೆದು ನೀನಿಂತು ಆತ್ಮಬಲಗಳನರಿತು
ಆತ್ಮ ಸಾಧಕನಾಗಿ ಲೋಕದಲಿ ಸುಖಿಯಾಗಿ
ಲೋಕಾತ್ಮ ಬೆಳಗಿಸುತ ಅಮರನಾಗು ಶರಣಾ ! ॥೨೫॥

ನೂರಾರು ತೆರನಾದ ವಿಧಿಕರ್ಮ ಮುತ್ತಿದರು
ಮನ ತೊಳೆವ ಜ್ಞಾನಿಗೆ ಕರ್ಮಬಂಧನವಲ್ಲ
ಕರ್ಮ ತೊಳೆಯಲು ಬಲ್ಲ ಲೀಲೆಯದು ಶರಣಾ ! ॥೨೬॥

ಸಕಲಗುಣವರಿತವರು ಎಲ್ಲೆಂತು ಲಿಪ್ತರು ?
ಗಂಟುನಂಟುಗಳಿರದ ಸತ್ಯಾಂಶವರಿಯುವರು
ಬಾಳಿನಲಿ ಹಿರಿ ಗುಣದಿ ಬೆಳಗುವರು ಶರಣಾ ! ॥೨೭॥

ಸತ್ಯವೇ ಅವರಾಗಿ ಎಂತು ಬಾಳಿದರೇನು ?
ಮಾಡುವವರಾಕಾರ್ಯ ಅನ್ಯ ಜೀವಕೆ ಬೆಳಕು
ಅವರೆಲ್ಲ ಕಾರ್ಯಗಳು ಮಹತ್ಸಾಧನೆ ಶರಣಾ ! ॥೨೮॥

ಹಿರಿಬಲದ ಜೀವಿಗಳು ಬಾಳೆರಡು ಪಡೆಯುವರು
ತಮಗಾಗಿ ಬದುಕೊಂದು ಅನ್ಯರಿಗೆ ಬಾಳೊಂದು
ತಮ್ಮಂತರದ ಬಾಳಲವರೆಚ್ಚರಿಹರು ಶರಣಾ ! ॥೨೯॥

ತಮ್ಮ ಜೀವನದೆಲ್ಲ ಕರ್ಮಗಳ ತೊಳೆದಿರಿಸಿ
ಮಿಕ್ಕ ಬಾಳಿನ ಸಮಯ ಅನ್ಯಬಾಳ್ ತೊಳೆವುದಕೆ
ಮೀಸಲಿಡುತಲಿ ಬದುಕಿ ಬೆಳಗುವರು ಶರಣಾ ! ॥೩೦॥

ಅಂಥ ಮಹನೀಯರು ಜ್ಯೋತಿಯೊಲು ಬೆಳಗುತ್ತ
ಜ್ಞಾನ ಜ್ಯೋತಿಯ ಹಿಡಿದು ನಂದಿರುವ ಜೀವಕ್ಕೆ
ಪ್ರೇಮದಿಂ ಬೆಳಕೀವರರಿಯಯ್ಯ ಶರಣಾ ! ॥೩೧॥

ಮನಸಿನಾ ಸ್ಥಿರಶಕ್ತಿ ಸಹಜವಲ್ಲವು ಜಗದಿ
ಸತ್ಯದೈವೀ ಬಲದ ಬೀಜವೇ ಸ್ಥಿರಮನವು
ಅಂಥ ಸ್ಥಿರಮನದ ಬಲ ಸಾಧಿಸು ಶರಣಾ ! ॥೩೨॥

ಜ್ಞಾನದಿಂ ಬೆಳಗುತಲಿ ದೈವ ಕೃಪೆ ಪಡೆಯುತಲಿ
ದೈವ ನಿರ್ಮಿತ ಜಗದ ಮನುಜ ಜೀವನವರಿತು
ಮನುಜ ಶಕ್ತಿಯ ಲೀಲೆ ದರ್ಶಿಸು ಶರಣಾ ! ॥೩೩॥

ಓಂ ಶಾಂತಿಃ ಶಾಂತಿಃ ಶಾಂತಿಃ



ಬೊಮ್ಮ ಶತಕ



ಬೊಮ್ಮ ಶತಕ

ಸಕಲದಲಿ ನಿನ್ನಂಶ ತುಂಬಿ ತಾ ಬೆಳೆಯುತಿಹೆ
ನೀನಿಲ್ಲದಾವುದಿದೆ ಪೇಳು ಬೊಮ್ಮಾ ||

ಏನಿಲ್ಲದಾ ನೀನು ಸಾಸಿರದವರೆಗಾದೆ
ಸಾಸಿರದಿ ನೀನೆಲೆಸಿ ಸರ್ವವ್ಯಾಪಕವಾದೆ
ನೀನಿಲ್ಲದೇನಿಹುದು ಪೇಳು ಬೊಮ್ಮಾ ! ||೧||

ಅಲ್ಲಿ ನೋಡಲು ನೀನು ಇಲ್ಲಿ ನೋಡಲು ನೀನು
ಎಲ್ಲೆಲ್ಲಿ ನೋಡಿದರು ನೀನೆನಿನದಾಗಿದೆ ||೨||
ನೀನಿಲ್ಲದೇನಿಹುದು ಪೇಳು ಬೊಮ್ಮಾ !

ಅಲ್ಲುಂಟು ಇಲ್ಲಿಲ್ಲ ಇಲ್ಲುಂಟು ಅಲ್ಲಿಲ್ಲ
ಎಲ್ಲಿಯೋ ನೀನಡಗಿ ಬೇರೆಯಿಹೆಯೆಂದರೆ ||೩||
ನೀನಿಲ್ಲದಾವುದಿದೆ ಪೇಳು ಬೊಮ್ಮಾ !

ಓಂಕಾರ ವರ್ಣನೀ ಸ್ವರವ್ಯಂಜನಗಳಾದೆ
ಹತ್ತಾರು ಕುಲಗಳ ವರ್ಣ ಭಾಷೆಗಳಾದೆ
ಓಂಕಾರ ಮೂಲವೇ ನೀನು ಬೊಮ್ಮಾ ! ||೪||

ಓಂಕಾರ ಭೇದಿಸುತ ವಿಧ ವಿಧದಿ ಜೋಡಿಸಲು
ಜಗದಿರುವ ಸಾವಿರಾರ್ ವಸ್ತು ಚಿತ್ರಗಳಾದೆ
ಆಕಾರ ರೂಪಗಳ ಮೂಲ ಓಂ ಬೊಮ್ಮಾ ! ||೫||

ಓಂಕಾರನಾದನೀ ಸಪ್ತಸ್ವರಗಳಾದೆ
ನೂರಾರು ವಿಧಗಳಲಿ ರಾಗಭಾವಗಳಾದೆ
ಸಕಲರಾಗಕೆ ಮೂಲ ಓಂಕಾರ ಬೊಮ್ಮಾ ! ||೬||

ಓಂಕಾರ ವಾಯುನೀ ಪ್ರಾಣವಾಯುವಾದೆ
ಪಂಚ ಪ್ರಾಣಗಳಾಗಿ ದಶ ಪ್ರಾಣಗಳಾದೆ
ಅದ್ಭುತದ ಪ್ರಾಣಗುಣ ನೀನಾದೆ ಬೊಮ್ಮಾ ! ||೭||

ಸಕಲ ಪ್ರಾಣಗಳಾಗಿ ಸಕಲನಾದಗಳಾಗಿ
ವಿಧವಿಧದ ಜಗಜನರ ವಿವಿಧ ಭಾಷೆಗಳಾಗಿ
ರಾಗ ಕಲೆ ರೂಪವೇ ನೀನಾದೆ ಬೊಮ್ಮಾ ! ||೮||

ಜನಿಸೊಂದು ರೂಪದಲಿ ಒಂದೊಂದು ಗುಣವಾದೆ
ಒಂದೊಂದು ಗುಣಸೇರಿ ನೂರಾರು ಗುಣವಾದೆ
ಎಲ್ಲವನು ಹೊಂದಿಸಿ ಜಗವಾದೆ ಬೊಮ್ಮಾ ! ||೯||

ಕಂಡದೆಲ್ಲದರಲ್ಲಿ ನೀನಿದ್ದು ಲಯವಾದೆ
ಶೂನ್ಯ ನಿನ್ನಯ ಬಲವ ಕಾಣ್ಬಂತೆ ರೂಪಿಸುತ
ನಿನ್ನಿರವ ಮರೆಯಿಸುತ ಅಳುತಿಹೆ ಬೊಮ್ಮಾ ! ॥೧೦॥

ಜಡದಲ್ಲಿ ನೀನಡಗಿ ಚೇತನದಿ ವ್ಯಾಪಿಸುತ
ಜಡ ಚೇತನವು ಸೇರಿ ಸ್ತ್ರೀ ಪುರುಷರಾಗುತಿರೆ
ಪರ ಜನ್ಮ ನಿರ್ವಾಣ ಬಲವಾದೆ ಬೊಮ್ಮಾ ! ॥೧೧॥

ಜಡದಿ ಚೇತನವಿಟ್ಟು ಚೇತನದಿ ಗುಣವಿಟ್ಟು
ಗುಣದಿ ಬುದ್ಧಿಯನಿಟ್ಟು ಮಾಯೆಯ ಮನವಾಗಿ
ಜಗತುಂಬಿ ಬೆಳಗಿಸಿದೆ ನಿರ್ಲಿಪ್ತ ಬೊಮ್ಮಾ ! ॥೧೨॥

ಸೊನ್ನೆ ನಿನ್ನೆಲೆ ಬೊಮ್ಮ ಒಂದರಿಂದನಂತ ನೀ
ಕೋಟಿ ಕೋಟ್ಯಾದರೂ ಸೊನ್ನೆ ಒಂದಿಹುದಲ್ಲಿ
ಸೊನ್ನೆ ಒಂದುಗಳೆಲ್ಲ ನೀನಿರುವೆ ಬೊಮ್ಮಾ ! ॥೧೩॥

ಎಷ್ಟು ವಿದ್ಯೆಯಗಳಿಸಿ ಪಾಂಡಿತ್ಯ ಪಡೆದರೂ
ವರ್ಣಮೂಲಾಕ್ಷರವ ಬಿಟ್ಟೆರೋದಲು ಬರದು
ಮೊದಲಿಂದ ಕಡೆವರೆಗೆ ನೀನೆಇಹೆ ಬೊಮ್ಮಾ ! ॥೧೪॥

ತಾಯೊಮ್ಮೆ ಮಗಳಾಗಿ ಮಗಳೊಮ್ಮೆ ತಾಯಾಗಿ
ತಾಯಿ ಮಗಳೀರ್ವರೂ ಮಣ್ಣಿನೊಳ್ ಲಯವಾಗಿ
ಯಾರೋರ್ವರಿರದಂತೆ ನೀಗೈವೆ ಬೊಮ್ಮಾ ! ॥೧೫॥

ಕಾಣದಲಿ ನೀನಿರುತ ಕಾಣುತಲಿ ನೀ ಬಂದು
ನಿನ್ನಂತೆ ಮತ್ತೊಂದ ಕ್ಷಣದಲಿ ನಿರ್ಮಿಸಿ
ಸೃಷ್ಟಿಯನೆ ಮರೆತಂತೆ ನೀನಿರುವೆ ಬೊಮ್ಮಾ ! ||೧೬||

ಬಂದು ಹೋಗುವ ಬೊಮ್ಮ ಭವಲೋಕ ನಿರ್ಮಿಸಿ
ಬಂಧು ಬಾಂಧವರೆಂದು ಸೊತ್ತು ಸಂಪದವೆಂದು
ಲೀಲೆಯಾ ಜಾಲವನು ಬೀಸಿರುವೆ ಬೊಮ್ಮಾ ! ||೧೭||

ನೂರುತೆರ ರಾಗಗಳು ಪಾಡಿದರು ಬಾಯೊಂದೆ
ನೂರು ತೆರ ಚಿತ್ರಗಳ ರಚಿಸಿದರು ಕರವೊಂದೆ
ನೂರು ತೆರ ಲೋಕವಿರೆ ನೀನೋರ್ವ ಬೊಮ್ಮಾ ! ||೧೮||

ಬಣ್ಣದದ್ದಿದಕುಂಚ ನೂರು ಚಿತ್ರವರಚಿಸೆ
ಬಣ್ಣ ಚಿತ್ರದಲಡಗಿ ಕುಂಚಬರಿದಾದಂತೆ
ಲೋಕದಲಿ ನೀನಡಗಿ ಅಲಕಾದೆ ಬೊಮ್ಮಾ ! ||೧೯||

ಬಣ್ಣ ಕುಂಚಗಳಾದೆ ಎನಿತೊ ಚಿತ್ರಗಳಾದೆ
ಸರ್ವದಲಿ ವ್ಯಾಪಿಸುತ ಬೇರಾದ ಬಲವಾದೆ
ಎಲ್ಲೆಲ್ಲು ನೀನುಳಿದು ಸಕಲವಾದೆ ಬೊಮ್ಮಾ ! ||೨೦||

ಸಾವಿರಾರ್ ಚಿತ್ರಗಳ ನೋಡಿದರು ಕಣ್ಣೊಂದೆ
ನೂರಾರು ನಿರ್ಮಿಸಿದ ಬುದ್ಧಿ ಶಕ್ತಿಯು ಒಂದೆ
ನಿರ್ಮಿಸುತ ನೋಡುತಿಹ ನೀನೋರ್ವ ಬೊಮ್ಮಾ ! ||೨೧||

ಒಂದು ನೋಡಲುಬಹುದು ನೂರು ನೋಡಲುಬಹುದು
ಎಷ್ಟು ನೋಡಿದರೇನು ಕಣ್ಣೊಂದೆ ಮೂಲವು
ಎಲ್ಲ ದೃಷ್ಟಿಗು ಮೂಲ ಸಾಕ್ಷಿನೀ ಬೊಮ್ಮಾ ! ॥೨೨॥

ಇಟ್ಟಿಗೆಯು ಜೋಡಿಸುತ ಕಟ್ಟಡವ ಕಟ್ಟುವರು
ಇಟ್ಟಿಗೆಯಿರದ ತೆರದಿ ಕಟ್ಟಡವು ತೋರಿದರು
ಇಟ್ಟಿಗೆಯೆ ಇಲ್ಲವೆನ್ನಲು ಬಹುದೆ ಬೊಮ್ಮಾ ! ॥೨೩॥

ಕಟ್ಟಡವು ನಿಜವಾಗಿ ಇಟ್ಟಿಗೆಯುಂ ನಿಜವಿದ್ದು
ಕಟ್ಟಡ ಇಟ್ಟಿಗೆಗಳ ಬೇರ್ಪಡಿಸಿ ಇಟ್ಟಾಗ
ಬಟ್ಟ ಬಯಲಾಗಿರುವೆ ಬಯಲು ಬೊಮ್ಮಾ ! ॥೨೪॥

ಇಟ್ಟಿಗೆಯುಂ ನಿಜವೆಂದು ಕಟ್ಟಡವದಿಲ್ಲವೆನೆ
ಕಟ್ಟಡವು ತೋರುವುದು ಸುಳ್ಳಲ್ಲ ಬೊಮ್ಮಾ
ಇಟ್ಟಿಗೆ ಕಟ್ಟಡಗಳೆರಡೂ ಸತ್ಯ ಬೊಮ್ಮಾ ! ॥೨೫॥

ಇಟ್ಟಿಗೆ ಕಟ್ಟಡ ಬಯಲು ನೀನಾಗಿ ತೋರಿರಲು
ಕುಟ್ಟಿ ಪುಡಿ ಮಾಡುತ್ತ ಗಾಳಿಯಲಿ ತೂರಿದರೆ
ಆಕಾರ ಉಳಿಯದಾ ಗಗನ ಬೊಮ್ಮಾ ! ॥೨೬॥

ಸರ್ವ ವ್ಯಾಪಕ ಬೊಮ್ಮ ಸರ್ವರೂಪಕ ಬೊಮ್ಮ
ಸರ್ವ ಗೋಚರ ಬೊಮ್ಮ ಸರ್ವಶಕ್ತಿಯು ಬೊಮ್ಮ
ಅವುದದು ನೀನಲ್ಲ ಪೇಳು ಬೊಮ್ಮಾ ! ॥೨೭॥

ಬೊಮ್ಮ ನಿನ ಹಿರಿಮೆಯಿಂ ಹಿರಿಕಡಲ ಜಲವಾದೆ
ಕಡಲಿಂದ ಮುಗಿಲಾಗಿ ಮಳೆಸುರಿದು ನದಿಯಾದೆ
ಮತ್ತೆ ಕಡಲೊಳೊಂದಾದೆ ಕಡಲ ಬೊಮ್ಮಾ ! ||೨೮||

ಕಡಲ ಜಲನೀನೆಂದು ಜಲಕುಡಿಯಲಾಗುವುದೆ ?
ಮಳೆಯು ಜಲ ಕಡಲೆಂದು ಉಪ್ಪು ತೆಗೆಯಲು ಬಹುದೇ ?
ಜಲವೊಂದೆ ರೂಪದಲಿ ದ್ವಿಗುಣ ಬೊಮ್ಮಾ ! ||೨೯||

ಕಡಲಿನೊಳ್ ನೀನಡಗಿ ಮೋಡದಲಿ ನೀ ತೇಲಿ
ಮಳೆಯಾಗಿ ನೀ ಸುರಿದು ಲೋಕವನು ಪಾಲಿಸುತ
ಎಲ್ಲದರಲಿರೆ ನೀನು ಸರ್ವವು ನೀ ಬೊಮ್ಮಾ ! ||೩೦||

ಕಡಲಿನೊಳ್ ಜೀವಿಗಳು ಮಳೆಯಲ್ಲು ಜೀವಿಗಳು
ಸಾವಿರಾರುದರಗಳ ಪಾಲನೆಗೆ ಪೋಷಣೆಗೆ
ವಿವಿಧದಾ ಗುಣವಾದೆ ಬಹುರೂಪ ಬೊಮ್ಮಾ ! ||೩೧||

ನಿನ್ನಿಂದಲೇ ಬೆಳೆದು ನಿನ್ನಲೇ ಬೆಳಕಾಗಿ
ಬೊಮ್ಮ ನೀ ವ್ಯಾಪಿಸಲು ನೀನಿಲ್ಲದಾವುದಿದೆ ?
ಸಕಲವೂ ನೀನಾದೆ ಸರ್ವತ್ರ ಬೊಮ್ಮಾ ! ||೩೨||

ಹೊನ್ನ ಗಟ್ಟಿಯನೊಡೆದು ಆಭರಣ ತಯಾರಿಸೆ
ಅದಾವ ತೊಡಿಗೆತಾ ಹೊನ್ನಿಲ್ಲದಿರಬಹುದು ?
ಚಿನ್ನದಿಂದಾದೊಡವೆ ಚಿನ್ನವಲ್ಲವೇ ಬೊಮ್ಮಾ ! ||೩೩||

ಹೊನ್ನರಿತು ಬೆಲೆಕಟ್ಟಿ ಬಳಸುತಿಹ ಜಗಜನರು
ಒಡವೆಯಾ ಬೆಲೆಯರಿತು ಆನಂದ ಕಾಣುವರು
ಒಡವೆಗೆ ಬೆಲೆಕೊಡದಿರೆ ಅಜ್ಞಾನ ಬೊಮ್ಮಾ ! ||೩೪||

ಭೂಮಿಯಲಿ ಸೀನಿದ್ದು ಬೊಮ್ಮ ನೀ ಬೇರಾಗಿ
ಬೇರಿನಿಂ ಸಸಿಯಾಗಿ ಹಿರಿವೃಕ್ಷ ಎತ್ತರಕೆ
ಬೆಳೆದು ಫಲ ನೀಡುವೆ ಸೋಜಿಗದ ಬೊಮ್ಮ ! ||೩೫||

ವೃಕ್ಷದಲಿ ಫಲವೊಂದು ಬೆಳೆದು ತಾನುದುರಲು
ಭುವಿ ಬೇರು ಕಾಂಡಗಳು ಶಾಖೆ ಎಲೆಗಳು ಮುಖ್ಯ
ಏನೊಂದು ಕೊರವಿರಲು ಫಲವಿಲ್ಲ ಬೊಮ್ಮಾ ! ||೩೬||

ಬೇರು ಹಬ್ಬಲು ಬೇಕು ಸಸಿಯು ಬೆಳೆಯಲು ಬೇಕು
ಚಿಗುರೆಲೆ ಕೊಂಬೆ ಹೂ ಎಲ್ಲ ಬೆಳೆಯಲುಬೇಕು
ಸಕಲವೂ ಸೇರಿರಲು ಫಲದರುಚಿ ಬೊಮ್ಮಾ ! ||೩೭||

ಗಿಡವಿರದೆ ಹಣ್ಣಿಲ್ಲ ಹಣ್ಣು ಬೇರಿಹುದಲ್ಲ
ಗಿಡದಿಂದ ಕಾಯಾಗಿ ರುಚಿ ಫಲವ ಬಿಟ್ಟೊಡೇ
ಗಿಡಮರೆತು ಬಾಳುವುದು ಮೂಢತನ ಬೊಮ್ಮಾ ! ||೩೮||

ಗಿಡದಲ್ಲಿ ಅಡಗಿರುವ ನಿನ್ನಂಶ ಬಲವೆಲ್ಲ
ಸವಿಯಾದ ರಸವಾಗಿ ತಾನೊಂದು ಫಲವಾಯ್ತು
ಹಣ್ಣಂತೆ ಗಿಡದ ಬೆಲೆ ಸತ್ಯವಿಹುದು ಬೊಮ್ಮಾ ! ||೩೯||

ಕಾಣುತಿಹ ವಸ್ತುಗಳಲೊಂದು ತೆರ ನೀನಿರುವೆ
ಕಾಣದಿಹ ವಸ್ತುಗಳಲೊಂದು ತೆರ ನೀನಿರುವೆ
ಸರ್ವವ್ಯಾಪಕ ನೀನು ಅವ್ಯಕ್ತ ಬೊಮ್ಮಾ ! ||೪೦||

ಕಂಡೆಲ್ಲ ರೂಪದಲಿ ನೀನಡಗಿ ಕುಳಿತಿರುವೆ
ರೂಪರೂಪಕೆ ಬೇರೆಬಲವಿತ್ತು ನಿರ್ಮಿಸಿಹೆ
ರೂಪಬಲ ನಿನ್ನಬಲ ಎರಡಿಹವು ಬೊಮ್ಮಾ ! ||೪೧||

ರೂಪದಲಿ ನಿನ್ನಿರವ ಕಾಣಲಾರದೆ ನರನು
ರೂಪಪೂಜೆಯ ಹಳಿದು ನೀನಿಲ್ಲವೆಂದರಿತು
ಬೇರೆ ಸಂಶೋಧಿಪುದು ಕುರುಡುತನ ಬೊಮ್ಮಾ ! ||೪೨||

ಬೊಮ್ಮ ನಿನನರಿತವರು ಎಲ್ಲವನು ಪೂಜಿಪರು
ಸಕಲದಲಿ ನಿನ್ನಂಶವನು ಕಂಡು ಸೇವಿಪರು
ಬೊಮ್ಮ ನಿನ್ನನ್ನು ಬೇರೆ ಕಾಣುವರೆ ? ಬೊಮ್ಮಾ ! ||೪೩||

ಇದ್ದು ಅಂಟದಲಿರುವೆ ಎಲ್ಲ ಕಡೆ ತುಂಬಿರುವೆ
ಸರ್ವತ್ರ ನಿನ್ನಬಲವಿಟ್ಟು ನೀನಡಗಿರುವೆ
ನಿಜದಿ ತಿಳಿಯಲು ನೀನೆ ಸರ್ವವೂ ಬೊಮ್ಮಾ ! ||೪೪||

ರೂಪಾಕಾರದಿರೇ ರೂಪಬೊಮ್ಮನೆ ನೀನು
ಗುಣದೊಳಲ್ಲಿರುವಾಗ ಗುಣಬೊಮ್ಮನೇ ನೀನು
ಏನೊಂದು ಇಲ್ಲದಿರೆ ಅದೃಶ್ಯ ಬೊಮ್ಮಾ ! ||೪೫||

ರೂಪಗುಣ ಅದೃಶ್ಯ ದೃಶ್ಯಾದಿ ಶಕ್ತಿಯಲಿ
ಜೀವಸದಗತ್ಯಕ್ಕೆ ತಕ್ಕಂತೆ ನೀ ಬರಲು
ಎಷ್ಟು ರೂಪಗಳಿರಲಿ ಎಲ್ಲ ನಿಜ ಬೊಮ್ಮಾ ! ॥೪೬॥

ಹಸಿವೆ ತೃಷೆ ನಿದ್ರಾದಿಗಳ ಗೆಲ್ಲದಾಮೇಲೆ
ಬೊಮ್ಮನಿನ ಹಿರಿಬಲದ ಮರ್ಮವನು ಭೇದಿಪುದು
ನಿನ್ನನರಿಯದ ಬರೀ ಬಾಯ್ಮಾತು ಬೊಮ್ಮಾ ! ॥೪೭॥

ತನ್ನೊಳಿಹ ಕರಣಗಳ ಕೈಯಾಳುತಾನಾಗಿ
ಕಣ್ಣೋಟ ನುಡಿದಾಟ ಉದರ ಪೋಷಣೆಯಾಟ
ಆವಾಟ ಬಿಡದವಗೆ ಹಿರಿಮೆಯೇಕೆ ಬೊಮ್ಮಾ ! ॥೪೮॥

ಆಸೆ ಆಕಾಂಕ್ಷೆಗಳ ಗೆಲ್ಲದಿಹನಾಲಿಗೆಗೆ
ಬೊಮ್ಮನನು ವಿಂಗಡಿಸಿ ತೋರುವಾ ಬಲವೆಂತು ?
ಸಕಲವನು ಗೆಲಿದೊಡೇ ನಿನ್ನರಿವು ಬೊಮ್ಮಾ ! ॥೪೯॥

ಬೊಮ್ಮ ನೀ ನಿಂತಿರುವೆ ಹಿರಿಬೆಟ್ಟಗಾತ್ರದಲಿ
ಬೆಟ್ಟದಡಿಪಾಯವೇ ಬೊಮ್ಮ ನಿನ್ನಯ ಚರಣ
ಗಿರಿ ಶಿಖರವೇ ನಿನ್ನ ಮುಕುಟವಿಹುದು ಬೊಮ್ಮಾ ! ॥೫೦॥

ಮುಕುಟವೇ ಮಂಟಪವು ಸೃಷ್ಟಿಯಾದಾಗಿರಿಗೆ
ಮಂಟಪವ ಕಾಣುತಲಿ ನಿನ್ನಬಲವರಿತಂದು
ಹಿರಿಬೆಟ್ಟದಾ ಸತ್ಯದರಿವಹುದು ಬೊಮ್ಮಾ ! ॥೫೧॥

ನಿನ್ನ ನೆಲೆಯನ್ನರಿಯೆ ಬೆಟ್ಟವೇರಲುಬೇಕು
ಬೆಟ್ಟವೇರುತ ಇಳಿದು ನಿನ್ನ ಚರಣವಪ್ಪಿರಲು
ಬೆಟ್ಟ ಬಲಗಾತ್ರಗಳ ಅರಿವಹುದು ಬೊಮ್ಮಾ ! ॥೫೨॥

ಬೆಟ್ಟದಿಹಮಂಟಪಕೆ ಮೆಟ್ಟಿಲಡಿಯಿಂದುಂಟು
ಸಾವಿರಾರ್ ಮೆಟ್ಟಿಲನು ಹತ್ತುತ್ತೇರುತಲಿ
ಗಿರಿಯ ಕೊನೆ ಮಂಟಪವ ತಲುಪಬಹುದು ಬೊಮ್ಮಾ ! ॥೫೩॥

ಬೆಟ್ಟ ಮಂಟಪವೆಲ್ಲ ಒಂದೆ ಬಂಡೆಯಲುಂಟು
ಏರಲಿಹ ಮೆಟ್ಟಿಲನು ಬಂಡೆಯಲಿ ಕೆತ್ತಿರಲು
ಅಡಿಯಿಂದ ಕೊನೆವರೆಗೆ ಒಂದೆ ಬಂಡೆಯು ಬೊಮ್ಮಾ ! ॥೫೪॥

ಮಂಟಪವಮುಟ್ಟಲು ಬೆಟ್ಟವೇರಲು ಬೇಕು
ಒಂದೊಂದು ಮೆಟ್ಟಿಲನೆ ಸುತ್ತಿ ಏರಲು ಬೇಕು
ಹತ್ತಿ ಏರಿದವರಿಗೆ ಮುಕುಟ ದರ್ಶನ ಬೊಮ್ಮಾ ! ॥೫೫॥

ಏರುತಿಹ ಮೆಟ್ಟಿಲನು ತಪ್ಪಿದರಿಲ್ಲ ಶಿಖರ
ಕಾಲಿಟ್ಟ ಮೆಟ್ಟಿಲಲಿ ಜಾರಿದೊಡವರೆ ಇಲ್ಲ
ಜಾಗರದಿ ಸುತ್ತೇರೆ ಶಿಖರ ದರ್ಶನ ಬೊಮ್ಮಾ ! ॥೫೬॥

ಕಾಲೆತ್ತಿ ಕಾಲಿಡುವ ಮೆಟ್ಟಿಲನು ಪೂಜಿಸುತ
ಮೆಟ್ಟಿಲನೆ ಬೆಟ್ಟದಾ ದೇಹವೆಂದರಿಯುತಲಿ
ನೋಯಿಸದೆ ಮೃದುವಾಗಿ ನಡೆಯಬೇಕು ಬೊಮ್ಮಾ ! ॥೫೭॥

ಮೆಟ್ಟಿಲಿಗೆ ಪೆಟ್ಟಾಗಲದುರುವುದು ಗಿರಿಯೆಲ್ಲ
ಬೆಟ್ಟದಿಂ ಜಾರಿದರೆ ಬೆಟ್ಟದಡಿ ಬೀಳುವರು
ಮೆಲ್ಲ ಮೆಲ್ಲನೆ ಏರಬಲ್ಲವನೇ ಜಾಣ ಬೊಮ್ಮಾ ! ||೫೮||

ಗಿರಿಯೇರಿ ನಿಲ್ಲುತಲಿ ಮಂಟಪದಿಕುಳಿತಾಗ
ನೂರಾರು ಸುತ್ತುಗಳ ಮೆಟ್ಟಿಲುಗಳನು ಕಾಣ್ವೆ
ಮೇಲಿಂದ ಅಡಿವರೆಗೆ ಬಂಡೆಯೊಂದೇ ಬೊಮ್ಮಾ ! ||೫೯||

ಮೇಲೇರಿ ಚಿಂತಿಸಲು ಬೆಟ್ಟವೇ ನೀನಾಗಿ
ಸುತ್ತು ಮೆಟ್ಟಿಲುಗಳೇ ಬೆಟ್ಟಕಿಹ ತನುವಾಗಿ
ಸಕಲ ವೊಂದೇಯೆಂದು ತೋರುವುದು ಬೊಮ್ಮಾ ! ||೬೦||

ಮಂಟಪವು ಬೇರಿಲ್ಲ ಬೆಟ್ಟದಡಿ ಬೇರಲ್ಲ
ಸುತ್ತು ಮೆಟ್ಟಿಲುಗಳನು ಒಂದೆಂದು ತಿಳಿದೊಡೆ
ಸತ್ಯವಿಹ ಗಿರಿನೆಲೆಯು ತಿಳಿವಹುದು ಬೊಮ್ಮಾ ! ||೬೧||

ಮೇಲಿಂದ ಕೆಳಗಿಳಿವ ಸುತ್ತೊಂದನಿಳಿದಾಗ
ಬೊಮ್ಮ ಬೆಟ್ಟದ ಲೀಲೆ ಮರ್ಮವರಿಯಲುಬಹುದು
ಬೆಟ್ಟಮೆಟ್ಟಿಲುಮಂಟಪಗಳು ಬೇರಲ್ಲ ಬೊಮ್ಮಾ ! ||೬೨||

ಒಂದಾದ ಬೆಟ್ಟದಲಿ ಬೇಧತೋರದವನಿಗೆ
ಬೆಟ್ಟವೆಲ್ಲವು ನಿಜದಿ ಬೊಮ್ಮನಾಗಿಯೆ ತೋರಿ
ಅಖಂಡತೆಯನುಭವವು ದೊರೆಯುವುದು ಬೊಮ್ಮಾ ! ||೬೩||

ಭೇದವಿಲ್ಲದೆ ಗಿರಿಯು ಬಗೆಬಗೆಯು ದರ್ಶನದಿ
ಸುತ್ತು ಮೆಟ್ಟಿಲನೆಲ್ಲ ಶಿಖರವೆಂದರ್ಚಿಸಿರೆ
ಅದುವೆ ಗಿರಿಯೇರಿಳಿದ ನಿರ್ಭೇದ ಅನುಭಾವ ಬೊಮ್ಮಾ ! ॥೬೪॥

ಬೆಟ್ಟವೇರಿಳಿದೆಂದು ಅದುನಿಜದಿ ಸಾಹಸವೆ
ಭೇದವಿಲ್ಲದ ಬೊಮ್ಮ 'ಎಲ್ಲ ನೀನಾಗಿರುವೆ'
ಎಂಬ ನಿಜವರಿತೊಡೆ ಮೋಕ್ಷ ಬೊಮ್ಮಾ ! ॥೬೫॥

ಅಖಿಲ ಬ್ರಹ್ಮಾಂಡವೇ ಬೊಮ್ಮಮನೆಯಾಗಿಹುದು
ಬೊಮ್ಮನಿಲ್ಲದುದಿಲ್ಲ ಬೊಮ್ಮನಿಂದಲೆ ಎಲ್ಲ
ಬೊಮ್ಮ ಬಲ ಜ್ಞಾನವಾರ್ಜಿಸಬೇಕು ಬೊಮ್ಮಾ ॥೬೬॥

ಬೊಮ್ಮನಿನ್ನ ಬೇರ್ಮಾಡಿ ನಿನ್ನಿರವ ತೋರಿದೊಡೆ
ಅಜ್ಞಾನ ತುಂಬಿರುವ ಅಭಿಮಾನಿಯಾಗುವನು
ಅಲ್ಲು ಇಲ್ಲುಸಲ್ಲದ ಬಾಳಹುದು ಬೊಮ್ಮಾ ! ॥೬೭॥

ನಿನ್ನ ಬಲ ರೂಪಗಳ ಬಾಯಿಂದ ಬಣ್ಣಿಸದೆ
ಮನದಿಂದಲನುಭವಿಸೆ ನಿನ್ನ ಬಲದಾಸುಖವು
ಮನಬಿಟ್ಟು ಬೇರೆನಲು ಬಾಯ್ಮಾತು ಬೊಮ್ಮಾ ! ॥೬೮॥

ಬೊಮ್ಮ ! ನಿನ್ನಲೆಜನಿಸಿ ನಿನ್ನಿಂದಲೇ ಬೆಳೆದು
ನಿನ್ನಲ್ಲಿ ಕಣವಾಗಿ ಲಯಿಸುತಿರಲೊಂದು ದಿನ
ನನ್ನರಿತ ಹೆಮ್ಮೆತನ ಸಲ್ಲದು ಬೊಮ್ಮಾ ! ॥೬೯॥

ಬೊಮ್ಮ ಬಲ ವಿದ್ಯೆಗಳು ಭವಲೋಕದಾಟದಿರೆ
ಭವಲೋಕದಿಂದಾಚೆ ಬಾಯ್ಮಾಡೆ ತರವಲ್ಲ
ಅಂಥನುಡಿ ಹೇಳುವುದು ಕೇಳವುದು ವ್ಯರ್ಥ ಬೊಮ್ಮಾ ! ||೭೦||

ಭವದಿಂದ ದೂರಾದ ನುಡಿಕೇಳಿದವರೆಲ್ಲ
ಭವಲೋಕದಲಿ ಬೊಮ್ಮನಿಲ್ಲ ವೆಂದೆಣಿಸುವರು
ಭವದಿ ತಾವ್ ಬಾಳದೇ ಭ್ರಷ್ಟರಾಗುವರು ಬೊಮ್ಮಾ ! ||೭೧||

ಭವದಿಂದ ದೂರಾದ ಬೊಮ್ಮನನು ನುಡಿದವರು
ಬಾಯಿಂದ ನುಡಿದಾಡಿ ಒಣ ತಿಳಿವನೇ ತೋರಿ
ತಮ್ಮ ಬಾಳರಿಯುದಲಿ ಭ್ರಷ್ಟರಾಗುವರು ಬೊಮ್ಮಾ ! ||೭೨||

ಭವಲೋಕ ಜೀನನದಿ ಸರಿಬಾಳ ತೋರದಲಿ
ಅಲ್ಲಿಲ್ಲ ಇಲ್ಲಿಲ್ಲ ಬೊಮ್ಮ ಬೇರೆಂದರೆ
ನಿನ್ನ ಶಕ್ತಿಯಶಾಪ ತಪ್ಪದು ಬೊಮ್ಮಾ ! ||೭೩||

ಬ್ರಹ್ಮಾಂಡ ನಿನ್ನದು ಅದರೊಳಗೆ ನರನೋರ್ವ
ನಿನ್ನಿಂದ ಜನಿಸಿರುವ ತಾನು ಬ್ರಹ್ಮಾಂಡದಲಿ
ಭವವೆಲ್ಲ ನೀನೆಂದರಿಯೆ ಸುಖ ಬೊಮ್ಮಾ ! ||೭೪||

ಬೊಮ್ಮ ! ನಿನಲೋಕದಲಿ ದೋಷವಿಲ್ಲದೆ ಬದುಕಿ
ಭವಲೋಕ ಜಯಿಪವನು ಪರಲೋಕ ಕಾಣುವನು
ಭವದಿದ್ದು ಭವಬಿಟ್ಟು ಓಡಲಾಗದು ಬೊಮ್ಮಾ ! ||೭೫||

ಭವದಲ್ಲೆ ದೂರಿರುವ ಬಯಲಾದ ನಿನ್ನಲ್ಲಿ
ಬಯಲಾಗಿ ಬರಿದಾಗಿ ಬೆಂಡುತೆರ ಬಾಳುವವ
ಬಲವಿರುವ ನಿನ್ನಲ್ಲು ಬಾಳಬಲ್ಲನು ಬೊಮ್ಮಾ ! ॥೭೬॥

ಭವತೊರೆದು ಜೀವಿಸುವ ಬಲವಿಲ್ಲದಾದ ಮೇಲೆ
ಭವದಿಂದ ದೂರದಿಹ ನಿನ್ನ ಆಶೆಯದೇಕೆ ?
ಭವದಲಿಹ ನಿನ್ನನ್ನು ಕಾಣಬೇಕು ಬೊಮ್ಮಾ ! ॥೭೭॥

ಇಹದಲ್ಲಿ ಜೀವಿಸಲು ಭವವ ಜಯಿಸಲು ಬೇಕು
ತನ್ನಿಂದ್ರಿಯಗಳನ್ನು ವಶಪಡಿಸಿಕೊಳಬೇಕು
ಹಸಿವು ತೃಷೆ ನಿದ್ರೆಗಳ ಜಯಿಸಬೇಕು ಬೊಮ್ಮಾ ! ॥೭೮॥

ಕಾಣುವಿಂದ್ರಿಯಗಳನೆ ಜಯಿಸಲಾಗದ ಮೇಲೆ
ಭವದಿಂದ ದೂರವಿಹ ನಿನ್ನ ಜಯಿಸಲಹುದೆ ?
ತನ್ನತಾ ಜಯಿಸಿರಲು ಭವಗೆಲ್ಲಲಹುದು ಬೊಮ್ಮಾ ! ॥೭೯॥

ದೃಶ್ಯ ಬೊಮ್ಮನೆ ಜಯಿಸೆ ಕಾಣದಿಹ ನಿನ್ನರಿವು
ಕಂಡು ಕಾಣದಲೆಲ್ಲ ನಿನ್ನನ್ನು ಅರಿತರೇ
ನಿನ್ನಲ್ಲೆ ತಾನೊಮ್ಮೆ ಐಕ್ಯವಾಗಲುಬಹುದು ಬೊಮ್ಮಾ ! ॥೮೦॥

ಸರ್ವ ವ್ಯಾಪಕವಾದ ನಿನ್ನ ಹಿರಿ ಬಲವನ್ನು
ಎಂತೆಂತು ಪೂಜಿಸುತ ನಡೆಯಬೇಕೆಂದರಿಯೆ
ನಿನ್ನ ಸತ್ಯ ವ್ಯಾಪ್ತಿಯನು ಕಾಣಬಲ್ಲರು ಬೊಮ್ಮಾ ! ॥೮೧॥

ಮೂಲ ಬೊಮ್ಮನ ಪೂಜೆ ಮಾಯೆಬೊಮ್ಮನ ಪೂಜೆ
ಕಾರಣದ ಬೊಮ್ಮನಾ ಪೂಜೆಯರಿತಾಚರಿಸೆ
ಸಕಲವೂ ನೀನೆಂಬ ಅನುಭವವು ಬೊಮ್ಮಾ ! ||೮೩||

ಬೊಮ್ಮಬಲಗಳ ಕಂಡು ಜ್ಞಾನತಾ ಪಡೆವಾಗ
ಬಾಯ್ ಕಂಗಳರಿಯದ ಜ್ಞಾನಾನುಭುಭವದಲ್ಲಿ
ನುಡಿಯದೆ ನಡೆಯುವಗೆ ಶಾಂತಿ ಸುಖ ಬೊಮ್ಮಾ ! ||೮೪||

ವಿಧಿಯೆಂಬ ನಿನ್ನಬಲ ಜೀವನನ್ನೆಳೆಯುತಲಿ
ಗಾಣದೆತ್ತಿನ ತೆರದಿ ನಿರುತ ಸುತ್ತಿಸುತಿಹುದು
ವಿಧಿಯಾಜ್ಞೆಮೀರದಲಿ ಸುತುತರಿಯಲು ಬೇಕು ಬೊಮ್ಮಾ ! ||೮೫||

ಕಣ್ ಕಟ್ಟಿ ಕವಿಹಿಂಡಿ ಮನದಂತೆ ಸುತ್ತಿಸುವ
ಆ ನಿನ್ನ ಒಳನೋಟ ನುಡಿವಲ್ಲಿ ಬೆಲೆಯಿಲ್ಲ
ಬಾಯ್ ಮಾತನಾಡದಿರೆ ಧನ್ಯತೆಯು ಬೊಮ್ಮಾ ! ||೮೬||

ನಿನ್ನ ಬಲದಾಟದಲಿ ಎಲ್ಲ ಸಂಶೋಧಿಸುತ
ಯಾರಿಗರಿಯದ ತೆರದಿ ನೀನಾಟ ಮಾಡುತಿಹೆ
ಹಮ್ಮಿರದೆ ನಿನ್ನಲೀಲೆಯು ನೋಡೆಸಾಧ್ಯ ಬೊಮ್ಮ ! ||೮೭||

ನಿನ್ನ ಲೀಲೆಯ ಬಲೆಯು ಬಾಳಿನಾಟವನಾಡಿ
ಸರಿಯಾಟ ದಿಂಗೆಲಿದು ನಿನ್ನ ಬಲೆಯನು ದಾಟಿ
ಬಲೆ ಪಿಡಿದ ನಿನ್ನನ್ನೆ ಗುರಿಯೆನ್ನು ಜ್ಞಾನಿ ಬೊಮ್ಮಾ ! ||೮೮||

ಹುಟ್ಟು ಸಾವಿನ ಬಲೆಯು ಬಾಳು ಬುದ್ಧಿಯ ಬಲೆಯು
ವಿಧಿಯೆಂಬ ಹಿರಿ ಬಲೆಯು ಆಟ ಮಧ್ಯದಲಿಹುದು
ಸಕಲ ಬಲೆಯಲ್ಲಾಡಿ ಜಯಿಸೆ ಸಾಧನೆ ಬೊಮ್ಮಾ ! ॥೮೮॥

ಸೋಲು ಗೆಲುವಿನ ಬೆಳಕು ನಿನ್ನಯಾಧೀನವಿರೆ
ನಿನ್ನಿಚ್ಛೆ ಬ್ರಲದಂತೆ ಮುಂದೆಲ್ಲ ತಂದೊಡ್ಡಿ
ಯಾರದೇ ನಿನಿತಿಲ್ಲ ಅರಿಯೆನುವೆ ನೀ ಬೊಮ್ಮಾ ! ॥೮೯॥

ನಿನ್ನಲ್ಲಿ ಶರಣಾಗಿ ನಿನ್ನ ಬಲೆ ಗಡಿಯಾಗಿ
ನಿನ್ನಲೀಲೆರಂಗದಲಿ ಜಾಗರದಲಾಡುತಲಿ
ನಿನ್ನ ತಿಳಿಯುತ ಪೂಜೆ ಮಾಡಲು ಬ್ರಹ್ಮೈಕ್ಯ ಬೊಮ್ಮಾ ! ॥೯೦॥

ಬುದ್ಧಿಗೆಟುಕದ ನಿನ್ನ ಹಿಡಿದಿಡಲು ಸಾಧ್ಯವೇ ?
ಹಿರಿಗಿಂತ ಹಿರಿಯಿರುವೆ ಕಿರಿಗಿಂತ ಕಿರಿಯಿರುವೆ
ಯೋಚನೆಗೆ ಎಟುಕದಿಹೆ ಎಂತು ಹಿಡಿಯುವರು? ಬೊಮ್ಮಾ !॥೯೧॥

ಗಗನದಲಿ ಮಿಂಚುತಿಹ ತಾರೆಗಳ ಲೆಕ್ಕದೊಲು
ಆಕಾಶ ಕಡಲುಗಳ ಉದ್ದಗಲದಳತೆಯೊಲು
ನಿನ್ನಳತೆಗಳನೆಲ್ಲ ತಿಳಿಯಲಾಗದು ಬೊಮ್ಮಾ ! ॥೯೨॥

ಉದ್ದಗಲದಳತೆಗಳ ಲೆಕ್ಕಗಳ ತೋರಿಸುತ
ಕಂಡಿಹೆನು ಕಾಣುವೆನು ತೋರಿಸುವೆನೆಂದರೇ
ಹುಚ್ಚುತೆರ ನುಡಿಯಲ್ಲದಿನ್ನೇನು ಬೊಮ್ಮಾ ! ॥೯೩॥

ಬೊಮ್ಮ ನಿನ್ನಯ ಬಲವು ರವಿಯಂತೆ ಮೇಲಿಹುದು
ಕಿರಣಗಳ ತೋರಿದರು ಆರಿಗೆಟುಕದೊಲಿಹುದು
ರವಿಯ ಹಿಡಿಯಲು ಪೋಗೆ ಅವನಿಲ್ಲ ಬೊಮ್ಮಾ ! ||೯೪||

ದೂರದಿಂ ನೋಡುತಲಿ ಕಿರಣಗಳಲಾಡುತಲಿ
ಭದ್ರ ಜೀವನ ತಾಳಿ ಸಂಯಮವ ಸಾಧಿಸಿರೆ
ಅದುವೆ ಮಾನವಗಿರುವ ಮೋಕ್ಷ ಬೊಮ್ಮಾ ! ||೯೫||

ಕಂಡುಕಾಣದೊಲಿರುವ ನಿನನಂಬಲೇ ಬೇಕು
ಎಲ್ಲಕಡೆಗಳಲಿನೀನಿಹೆಯೆಂದರಿಯಬೇಕು
ಸಕಲವೂ ಬೊಮ್ಮಮಯ ಬೇರಿಲ್ಲ ಬೊಮ್ಮಾ ! ||೯೬||

ಸಂಶಯವತಾಳದಲಿ ಸತ್ಯವನು ಮರೆಯದಲಿ
ಅಭಿಮಾನ ತಾಳದಲಿ ಅಂಧನಂತಾಡದಲಿ
ನಿನ್ನಲ್ಲೆ ಶರಣಾಗುವಲ್ಲೆ ಸುಖ ಬೊಮ್ಮಾ ! ||೯೭||

ಬಾಳಕಿರುಕಾಲದಲಿ ಮರುಮಾತನಾಡದಲಿ
ಕಿರಿಯಲ್ಲಿ ಕಿರಿಯಾಗಿ ನಿನ್ನಲ್ಲಿ ಶಿರಬಾಗಿ
ನಿನ್ನ ಜಗ ಋಣಿಯಾಗೆ ನಿನ್ನರಿವು ಬೊಮ್ಮಾ ! ||೯೮||

ಬರೆದು ಪೇಳುವುದೆಲ್ಲ ನಿನ್ನ ಶಕ್ತಿಯೆ ನಿಜವು
ಮನುಜ ಶೋಧಿಸುವನಿತು ಅದ್ಭುತವ ಸೃಜಿಸಿರುವೆ
*ಗಂಗೆಯಾ ಬಾಳಗುರಿ ಗಂಥವಿದು ಬೊಮ್ಮಾ ! ||೯೯||

---

* ಗಂಗೆ :— ಸ್ವಾಮೀಜಿ ಮೊದಲ ಹೆಸರು ಗಂಗಾಧರ

ಶರಣಾಗಿ ಋಣಿಯಾಗಿ ನಿನ್ನಲ್ಲೆ ಲಯವಾಗಿ
ಅರಿತಲ್ಲಿ ಆನಂದ ಅಗಿಯುದವತಾನಂಥ
ಸತ್ಯಕೆಲ್ಲಕೆ ಸತತ ಸಾಕ್ಷಿನೀ ಬೊಮ್ಮಾ ! ॥೧೦೦॥

ಓಂ ಶಾಂತಿಃ ಶಾಂತಿಃ ಶಾಂತಿಃ



ಮಂಗಳ ಗೀತೆ

ಓಂ ಹೇ ಪರಮಾತ್ಮನೇ । ಹೇ ಪರಿಪೂರ್ಣನೇ ।
ಈ ಜೀವನ ಹದಗೊಳಿಸು । ಈ ಭವಸೆರೆಯನು ಬಿಡಿಸು ।
ಪರಸುಖವನು ನೀಡು ॥ಹೇ॥

ವಿಷಯದ ಸೆಳೆತಕೆ ಸೋಲುವ ಮನವನು ನಿಲ್ಲಿಸಲು ।
ವಿಷವನು ಅಮೃತವಾಗಿಸಿ । ಸಂಯಮ ಜೀವನ ನಡೆಸಲು
ಶಕ್ತಿಯ ಕೊಡು ಬೇಗ ॥ಹೇ॥

ಅರಿತೂ ಅರಿಯದೆ ತಪ್ಪನು ಮಾಡುವ ಕಂದನು ನಾ ।
ಪರಿಕಿಸದೇ ಸರಿ ಪಡಿಸುವ । ಪ್ರೇಮದಿ ಬೆಳಕನು ತೋರುವ
ಮಾತೆಯ ಸಮಗುರು ನೀ ॥ಹೇ॥

ವಾಂಛಿತ ಫಲಗಳ ನೀಡುವ ವ್ಯಾಪಾರವು ಬೇಡ ।
ಸಂಚಿತ ಪಾಪವ ಕಳೆಯುತ । ಚಿತ್ತಪ್ರಸಾದವ ನೀಡುತ
ಅನುಕ್ಷಣ ಮುನ್ನಡೆಸು ॥ಹೇ॥

ಸಾಧಕ ಜೀವನ ನಡೆಸುವೆ । ಸಫಲತೆಯನು ನೀಡು ।
ಮೋದದಿ ನಿಷ್ಠೆಯ ತಪದಲಿ । ನಿದ್ರೆಪ್ರಮಾದಾಲಸ್ಯದ
ದೋಷವ ನೀ ಬಿಡಿಸು ॥ಹೇ॥

ಮಾತುಮನಸುಗಳಿಗೆಟುಕದ । ನಿನ್ನನು ಧ್ಯಾನಿಸುವೆ ।
ಈ ತನು ಮನ ಧನ ನಿನ್ನದು । ಅಭಯ ಕವಚವನು ತೊಡಿಸು
ನೀ ಸಾರ್ಥಕ ಗೊಳಿಸು ॥ಹೇ॥

ನಿರ್ಗುಣ ರೂಪನು ನೀನಿಹೆ । ಸಗುಣದಿ ಹರಸುತಿಹೆ ।
ದುರ್ಗುಣಗಳ ಕಳೆ ಕೀಳಲು । ಕೀರ್ತನೆ ಪ್ರಾರ್ಥನೆಯಾಲಿಸಿ
ನವ ಚೇತನ ನೀಡು ॥ಹೇ॥

ಸತ್ಯ ಶಿವಸುಂದರ ದೇವನೆ । ಸಚ್ಚಿದಾನಂದನೇ ।
ನಿತ್ಯದಿ ನಿನ್ನನು ನೆನೆಯುವ । ಭಕ್ತಿಯ ಮರ್ಮವ ತಿಳಿಸುತ
ನನ್ನನು ಉದ್ಧರಿಸು ॥ಹೇ॥

ಸರ್ವರಿಗೂ ಶುಭವಾಗಲಿ । ಸರ್ವರು ಸುಖದಿರಲಿ ।
ಸರ್ವರುಸುಪಥದಿ ನಡೆಯಲಿ । ಸರ್ವರ ಜೀವನ ಬೆಳಗಲಿ
ನಿನ್ನ ಕರುಣೆಯಿರಲಿ ॥ಹೇ॥

